ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 ಸಂಚಿಕೆ 20 ಮೇ 20, 1990 ರೂ 1-50



ಬೆಂಗಳೂರಿನಲ್ಲಿ ಬಸ್ ದರ ಏರಿಕೆ ವಿರುದ್ಧ ಸಿ.ಪಿ.ಐ. (ಎಂ) ಪಿಕೆಟಿಂಗ್

ಕಾವೇರಿ ಜಲವಿವಾದ

ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಬೇಕು

ಕಾವೇರಿ ನೀರಿನ ಹಂಚಿಕೆ ವಿವಾದ ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳ ಸರ್ಕಾರಗಳ ನಡುವೆ ಪರಸ್ಪರವಾಗಿ ವಾದಕ್ಕೆ ಕಾರಣವಾಗಿದೆ. ಸುಪ್ರೀಂ ಕೋರ್ಟ್ ಒಂದು ತಿಂಗಳೊಳಗಾಗಿ ಟ್ರಿಬ್ಯುನಲ್ ನೇಮಿಸಬೇಕೆಂದು ಕೊಟ್ಟಿರುವ ನಿರ್ಣಯ ಕರ್ನಾಟಕ ಜನತೆಯಲ್ಲಿ ತಳಮಳವನ್ನುಂಟು ಮಾಡಿದೆ. ಮುಂದಕ್ಕೆ ತೀವ್ರವಾಗುತ್ತಾ ಎರಡೂ ರಾಜ್ಯಗಳ ಜನತೆಯ ನಡುವೆ ವೈಮನಸ್ಯವನ್ನು ಬಿತ್ತಲು ಫಲವತ್ತಾದ ಭೂಮಿಕೆಯನ್ನು ಒದಗಿಸಿದೆ.

ಈ ಬಗ್ಗೆ ಸಿ.ಪಿ.ಐ.(ಎಂ)ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆ ಸೇರಿ ಕೆಳಗಿನ ನಿರ್ಣಯವನ್ನು ಅಂಗೀಕರಿಸಿದೆ.

★ 1924 ರ ಕಾವೇರಿ ನೀರಿನ ಒಪ್ಪಂದ ಒಂದು ಕಡೆ ಬ್ರಿಟಿಷ್ ಸರ್ಕಾರ ಮತ್ತೊಂದು ಕಡೆ ಬ್ರಿಟಿಷ್ ಆಶ್ರಯದಲ್ಲಿದ್ದ ಮೈಸೂರು ಸಂಸ್ಥಾನದ ನಡುವಿನ ಒಪ್ಪಂದವಾಗಿ ಮೈಸೂರಿನ ಜನತೆಗೆ ಅನ್ಯಾಯಕರವಾದುದಾಗಿದೆ.

★ 50 ವರ್ಷಗಳ ನಂತರ ಈ ಒಪ್ಪಂದ ಮುಗಿಯುವ ಮುನ್ನವೇ ಕೇರಳ, ತಮಿಳುನಾಡು, ಕರ್ನಾಟಕಗಳ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಕಾರ್ಯದರ್ಶಿಗಳು ಸಭೆ ಸೇರಿ ಈ ಒಪ್ಪಂದದ ಅವಧಿ ಮುಗಿಯುವ ಮುನ್ನವೇ ಮತ್ತೊಂದು ನ್ಯಾಯುತ ಒಪ್ಪಂದ ಮಾಡಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಇದು ಎರಡು ರಾಜ್ಯಗಳ ಜನತೆಯ ನಡುವೆ ಭಾವೋದ್ವೇಗಕ್ಕೆ ಎಡೆ ಮಾಡವುದೆಂದು, ಈ ಬಗ್ಗೆ ಅಂದಿನ ಇಂದಿರಾಗಾಂಧಿಸರ್ಕಾರ ತೋರಿಸುತ್ತಿರುವ ನಿರ್ಲಕ್ಷ ದೇಶದ ಐಕ್ಯತೆಗೆ ಅಪಾಯಕಾರಿಯೆಂದು ಎಚ್ಚರಿಸಿದ್ದರು.

★ ಈ ಹೇಳಿಕೆಯಲ್ಲಿ ಮೈಸೂರು ಸರ್ಕಾರ ಕೈಗೊಳ್ಳಲಿಚ್ಚಿಸಿರುವ ಕಬಿನಿ, ಹೇಮಾವತಿ ಯೋಜನೆಗಳಿಗೆ ತಮಿಳುನಾಡಿನ ಸರ್ಕಾರದ ವಿರೋಧವನ್ನು ಕಡೆಗಾಣಿಸಿ ಕೇಂದ್ರ ಸರ್ಕಾರ ಅನುಮತಿ ಹಾಗೂ ಯೋಜನಾ ಸಹಾಯ ನೀಡಬೇಕೆಂದು ಪ್ರತಿಪಾದಿಸಲಾಯಿತು.

★ ಆದರೆ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ (ಐ) ಸರ್ಕಾರಗಳು ಈ ವಿವಾದವನ್ನು ಬಗೆಹರಿಸುವುದಕ್ಕೆ ರಾಜ್ಯ ನ್ಯಾಯಯುತ ಪಾಲನ್ನು ಪಡೆಯುವುದಕ್ಕೆ ಗಮನ ಕೊಡದೆ ಸಮಸ್ಯೆ ತೀವ್ರವಾಯಿತು.

★ರಾಜ್ಯದಲ್ಲಿಯೂ-ಕೇಂದ್ರದಲ್ಲಿಯೂ ಅನೇಕ ವರ್ಷಗಳ ಕಾಲ ಜವಾಬ್ದಾರಿ ಸ್ಥಾನಗಳಲಿದ್ದ ವಿರೇಂದ್ರಪಾಟೀಲರು ಹಾಗೂ ಕಾಂಗ್ರೆ ಎಂ.ಪಿ.ಗಳು ಇಲ್ಲಿಯವರೆಗೆ ಸುಮ್ಮನಿದ್ದು ಈಗ ರಾಷ್ಟ್ರೀಯ ರಂಗ ಸರ್ಕಾರವನ್ನು ಕರುಣಾನಿಧಿಯವರನ್ನೂ ದೂರುತ್ತಿರುವುದು ತಮ್ಮ ಮೇಲಿನ ಹೊಣೆಯನ್ನು ತಪ್ಪಿಸಿಕೊಳ್ಳುವ ಪ್ರಯತ್ನವೆಂದು ಸಿ.ಪಿ.ಐ. (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯ ಪಡುತ್ತದೆ.

ಕೇಂದ್ರ ಸರ್ಕಾರವು ಈಗಲೂ ಮಧ್ಯಸ್ಥಿಕೆ ವಹಿಸಿ ಈ ವಿವಾದವನ್ನು ಮಾತುಕತೆಯ ಮೂಲಕ ಪರಿಹರಿಸಲು ಎಲ್ಲಾ ಪ್ರಯತ್ನ ಮಾಡಬೇಕೆಂದು, ಇದು ವಿಳಂಬವಾಗಲು ಭಾವೋದ್ರೇಕಗಳಿಗೆ ಕಾರಣರಾಗಲು ಅವಕಾಶ ನೀಡಬಾರದೆಂದು ಕಾರ್ಯದರ್ಶಿ ಮಂಡಳಿ ಒತ್ತಾಯಿಸುತ್ತದೆ.

ನ್ಯಾಯ ಮಂಡಲಿ ಅನಿವಾರ್ಯವಾದಲ್ಲಿ ನ್ಯಾಯ ಮಂಡಲಿಗೆ ಸರ್ಕಾರ ನೀಡುವ ಸೂಚನೆಗಳಿಗೆ (ಭಾರತ ಸರ್ಕಾರ) ಎರಡೂ ರಾಜ್ಯಗಳ ಜೊತೆ ಸಮಾಲೋಚಿಸಬೇಕೆಂದೂ, ಕರ್ನಾಟಕದ ನ್ಯಾಯಯುತ ಹಕ್ಕುಗಳಿಗೆ ಭಂಗಬಾರದಂತಿರಬೇಕೆಂದು ಒತ್ತಾಯಿಸುತ್ತದೆ.

★ ಈ ಸಂಬಂಧದಲ್ಲಿ ಜನರ ಭಾವನೆಗಳನ್ನು ಕೆರಳಿಸುವ ಎರಡು ರಾಜ್ಯಗಳ ಜನತೆಯ ನಡುವೆ ದ್ವೇಷ ಬಿತ್ತುವ ಪ್ರಯತ್ನಗಳಿಗೆ ಜನತೆ ಕಿವಿ ಕೊಡಬಾರದೆಂದು ರಾಜ್ಯ ಸಮಿತಿ ಕರೆ ನೀಡುತ್ತದೆ.

ತ್ರಿಪುರಾದಲ್ಲಿ ಮೇ 4ರ ಸತ್ಯಾಗ್ರಹ

ಕ್ರೂರ ದಮನ ಲೆಕ್ಕಿಸದೆ ಒಂದು ಲಕ್ಷ ಮಂದಿಯ ಜೈಲ್ ಭರೋ

ತ್ರಿಪುರಾದ ಸಂಗ್ರಾಮ ಸಮಿತಿಯ ಕರೆಗೆ ಓಗೊಟ್ಟು, ಮೊದಲೇ ಗೊತ್ತುಪಡಿಸಿದ ಸ್ಥಳಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಜನ ಕಾಂಗ್ರೆ-ಟಿ.ಯು.ಜೆ.ಎಸ್.ನ ದುರಾಡಳಿತಕ್ಕೆ ಧಿಕ್ಕಾರ ಕೂಗುತ್ತಾ ಆ ದುಷ್ಟ ಸರಕಾರದ ಜೈಲು ತುಂಬಲು ಮುಂದೆ ಬಂದರು. ಸತ್ಯಾಗ್ರಹಿಗಳಲ್ಲಿ ಮಹಿಳೆಯರೂ ಗಮನಾರ್ಹ ಸಂಖ್ಯೆಯಲ್ಲಿದ್ದರು.

ಕಾಂಗ್ರೆ ಟಿ.ಯು.ಜೆ.ಎಸ್. ಗೂಂಡಾಗಳು ಈ ಜನರನ್ನು ಹೆದರಿಸಲು, ಬೆದರಿಸಲು ಸರ್ವ ಪ್ರಯತ್ನ ನಡೆಸಿದರು. ಚಶ್ಮಾಘಾಟ್‌ನಲ್ಲಿ ಮೆರವಣಿಗೆಯಲ್ಲಿ ಸಾಗಿದ್ದ ಸತ್ಯಾಗ್ರಹಿಗಳ ಮೇಲೆ ಸಶಸ್ತ್ರ ಹಲ್ಲೆ ನಡೆಯಿತು. ಸತ್ಯಾಗ್ರಹಿಗಳು ಅದನ್ನು ಎದುರಿಸಿ ಮುಂದೆ ಸಾಗಿದರು. 23 ಜನ ಗಾಯಗೊಂಡರು.


ಅಗರ್ತಲಾದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಸತ್ಯಾಗ್ರಹಿಗಳಿದ್ದ ದೊಡ್ಡ ಮೆರವಣಿಗೆಯ ಮೇಲೆ ಪ್ಯಾರಡೈಸ್ ಚೌಮುಹಾನಿ ಬಳಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಟ್ಟಡದ ಮೇಲಿಂದ ಕಾಂಗ್ರೆ ರೌಡಿಗಳು ಬಾಂಬೆಸೆದರು. ಬತ್ತಾಲಾ ಜಂಕ್ಷನ್‌ನಲ್ಲೂ ಹಲ್ಲೆ ಮಾಡಿದರು. ಅಲ್ಲಿಯ ಪಕ್ಷದ ಕಚೇರಿಯ ಮೇಲೆ ಹಲ್ಲೆ ನಡೆಯಿತು. ಗೂಂಡಾಗಳಿಗೆ ಬೆಂಬಲವಾಗಿ ಪೋಲೀಸರು ಗೋಲೀಬಾರು ಮಾಡಿದರು.

ದಕ್ಷಿಣ ಜಿಲ್ಲೆಯ ಜಿಲೋನಿಯಾದಲ್ಲಿ ಸತ್ಯಾಗ್ರಹಿಗಳು ಪಟ್ಟಣ ಪ್ರವೇಶಿಸದಂತೆ ಕಾಂಗ್ರೆಗಳು ರಸ್ತೆ ತಡೆಹಾಕಿದ್ದರು. ಆದರೂ ಎರಡು ಸಾವಿರಕ್ಕೂ ಹೆಚ್ಚು ಸತ್ಯಾಗ್ರಹಿಗಳು ಜೈಲು ತುಂಬಿದರು.

ಕೈಲಾಶಹರ್ ಪಟ್ಟಣದಲ್ಲಿ ಸಶಸ್ತ್ರ ಹಲ್ಲೆ ನಡೆಯಿತು. ಪಂಚಾಯತು ಮಂತ್ರಿಯೇ ಇದಕ್ಕೆ ಕುಮ್ಮಕ್ಕು ನೀಡಿದ. ಸತ್ಯಾಗ್ರಹಿಗಳು ಸಾಗಿದ್ದ ಜೀಪನ್ನು ಸುಟ್ಟು ಹಾಕಿದರು. ಹತ್ತು ಸತ್ಯಾಗ್ರಹಿಗಳು ತೀವ್ರವಾಗಿ ಗಾಯಗೊಂಡರು.

ಮೊದಲೇ ಗೊತ್ತುಪಡಿಸಿದ ೨೪ ಕೇಂದ್ರಗಳಿಗೆ ಜನತೆ ಬರದಂತೆ ತಡೆಯಲು ಕಾಂಗ್ರೆ-ಟಿ.ಯು.ಜೆ.ಎಸ್. ಕೂಟ ಸರಕಾರ ವಾಹನಗಳ ಮಾಲಿಕರ ಮೇಲೆ ತೀವ್ರ ಒತ್ತಡ ಹಾಕಿತು-ಸತ್ಯಾಗ್ರಹಿಗಳಿಗೆ ಯಾವುದೇ ವಾಹನ ದೊರೆಯದಂತೆ ಮಾಡಲು. ಪರಿಣಾಮವಾಗಿ ಮೊದಲು ಒಪ್ಪಿದ್ದ ಹಲವಾರು ವಾಹನ ಮಾಲಿಕರು ನಂತರ ಅವನ್ನು ಕೊಡಲಿಲ್ಲ. ಬಸ್ಸುಗಳನ್ನು ಮಾರ್ಗ ಮಧ್ಯದಲ್ಲಿಯೇ ಬಲವಂತವಾಗಿ ನಿಲ್ಲಿಸಲಾಯಿತು. ಆದರೂ ಒಟ್ಟು ಒಂದು ಲಕ್ಷಕ್ಕೂ ಹೆಚ್ಚು ಸತ್ಯಾಗ್ರಹಿಗಳು ಈ ಪುಟ್ಟ ರಾಜ್ಯದ ಎಲ್ಲೆಡೆ ಕಾಂಗ್ರೆ ಟಿ.ಯು.ಜೆ.ಎಸ್. ಸರಕಾರದ ದುಷ್ಟ ಆಡಳಿತವನ್ನು ಬಯಲಿಗೆಳೆದು ಬಂಧನಕ್ಕೊಳಗಾದರು.

24 ಕೇಂದ್ರಗಳಲ್ಲಿ 11 ಕೇಂದ್ರಗಳಲ್ಲಿ ಬಂಧನಕ್ಕೊಳಗಾದ ಸತ್ಯಾಗ್ರಹಿಗಳ ವಿವರ ದೊರೆತಿದೆ. ಅದು ಹೀಗಿದೆ. ಅಗರ್ತಲಾ ನಗರ 10,000; ಬಿಶಾಲ್‌ಗಢ್-3500, ಖೋವ್ಯಾ-10,538 ಕೈಲಾಶಹರ್-5000, ಧರ್ಮನಗರ್-7,000, ಜಿಲೋನಿಯಾ ಟೌನ್-2,000 ಉದಯಪುರ-10,000, ಸೋನಾ ಮುರಾ-5500, ಅಮರ್‌ಪುರ-8000, ಕುಮಾರಘಾಟ್-7000 ಮತ್ತು ಜಿಸಾನಿಯಾ -6000 ▶ ಪುಟ 6 ಕ್ಕೆ



ಜೋಕೆ... ಅತ್ತಿಂದಿತ್ತ, ಇತ್ತಿಂದತ್ತ, ಚೆಲ್ಲಾಡಿ ಬಾವಿಗೆ ಬಿದ್ದೀತು.

ಪುಟ 3 ಕರ್ನಾಟಕದಲ್ಲಿ ಎಡಚಳುವಳಿಯ ಬೆಳವಣಿಗೆಯ ಅವಶ್ಯಕತೆ
ಸಂಪಾದಕೀಯ

4. ಸಾಲಮನ್ನಾ ಮತ್ತು ಭಾರತದ ಚಳುವಳಿ
ವಿಶೇಷ ಲೇಖನ

5. ಚೀಣಾ - ಸೋವಿಯೆತ್ ಸಂಬಂಧಗಳು.....
ಪಿ.ಡಿ. ಸಂಪಾದಕೀಯ

ಸೋವಿಯತ್ ಕಮ್ಯುನಿಸ್ಟರಿಗೆ........
ಸಿ.ಪಿ.ಎಸ್.ಯು. ಪತ್ರ

6. ದೆಹಲಿ ನಾಗರೀಕರಿಗೆ ವಂಚನೆ ಯತ್ನ?.....
ದೇಶದೊಳಗೊಂದು ಸುತ್ತು

7. ಕಾಂಟ್ರಾಗಳ ಬರಖಾಸ್ತು, ಐ.ಎಂ.ಎಫ್, ವಿಶ್ವನಿಧಿ....
ಲೋಕ ಸಂಚಾರ

2. ಸಂಗಾತಿಗೆ ಕೊಡಬೇಕು.........
ಇತಿಹಾಸದ ಪುಟಗಳಿಂದ

ವಿಜ್ಞಾನ ತಂತ್ರಜ್ಞಾನ

ಸಿ-ಡೋಟ್ ಮೇಲೋ ಪಿಟ್ರೋಡಾ ಮೇಲೊ

ಸ್ಯಾಮ್ ಪಿಟ್ರೋಡಾ 1984-85 ರಲ್ಲಿ (ಮೊದಲು ರಾಜೀವ ಗಾಂಧಿಯ ಆಮೇಲೆ) ದೇಶದ ಗಮನ ಸೆಳೆದ ಅಮೆರಿಕಾದದಿಂದ ಹಿಂತಿರುಗಿದ ಭಾರತೀಯ ದೂರಸಂಪರ್ಕ ಇಂಜಿನೀಯರ್. ನನಗೆ 36 ಕೋಟಿ ರೂ ಕೊಡಿ. 3 ವರ್ಷ ಕೊಡಿ ಪೂರ್ಣ ಸ್ವಾತಂತ್ರ ಕೊಡಿ ಟೆಲಿಫೋನ್ ವ್ಯವಸ್ಥೆ ಉತ್ತಮ ಪಡಿಸಲುಬೇಕಾದ 10000ದಿಂದ 40000 ಟೆಲಿಫೋನ್ ಲೈನುಗಳ ಇಲೆಕ್ಟ್ರಾನಿಕ್ ಎಕ್ಸ್‌ಚೇಂಜ್‌ಗಳನ್ನು ದೇಶದಲ್ಲೇ ವಿನ್ಯಾಸ ಮಾಡುತ್ತೇನೆ ಎಂದು ಪಂಥ ಕಟ್ಟಿದರು. ಅವರಿಗೆ ಅವರು ಕೇಳಿದ್ದನ್ನು ಸರಕಾರ ಕೊಟ್ಟಿತು. ಸಿಡೋಟ್ (Centre of development of Telematics) - ದೂರಸಂಪರ್ಕ ತಂತ್ರ ಜ್ಞಾನ ಅಭಿವೃದ್ಧಿ ಕೇಂದ್ರ ಪಿಟ್ರೋಡಾ ಸಂಸ್ಥೆ. CDOT ದೇಶದಲ್ಲಿ ಈ ಕ್ಷೇತ್ರದಲ್ಲಿನ ಪರಿಣತ ವಿಜ್ಞಾನಿಗಳನ್ನು, ಇಂಜಿನಿಯರುಗಳನ್ನು ಕಲೆ ಹಾಕಿ ಕೆಲಸ ಆರಂಭಿಸಿತು. ಆದರೆ ಈ ವರೆಗೆ 10,000 ಲೈನುಗಳ ಎಕ್ಸ್‌ಚೇಂಜ್ ಇನ್ನೂ ಹೊರಗೆ ಬಿದ್ದಿಲ್ಲ. 4,000 ಲೈನುಗಳ ಎಕ್ಸ್‌ಚೇಂಜ್ ಬೆಂಗಳೂರಿನ ಅಲಸೂರಿನಲ್ಲಿ ಪರೀಕ್ಷೆಗೆ ಒಳಪಡಿಸಲಾಗಿದೆ. ಈ ನಡುವೆ 128 ಮತ್ತು 512 ಲೈನುಗಳ ಎಕ್ಸ್‌ಚೇಂಜ್‌ಗಳನ್ನು ಸಣ್ಣಪಟ್ಟಣ, ಹಳ್ಳಿ ಪ್ರದೇಶಗಳಿಗೆ ಸಾಕಾಗಬಹುದಾದಷ್ಟು ಈಗಾಗಲೇ ತಯಾರಿಸಲಾಗಿದ್ದು ಅದರ ಉತ್ಪಾದನೆ ಸಹ ಆರಂಭವಾಗಿದೆ. ಈ ಎರಡು ಮಧ್ಯಂತರ ಉತ್ಪನ್ನಗಳು 10,000/ 40,000 ಲೈನುಗಳ ಎಕ್ಸ್‌ಚೆಂಜ್‌ಗಳ ಭಾಗ ಸಹ. ಈ ನಡುವೆ ಪಿಟ್ರೊಡಾ ರಾಜೀವ ಗಾಂಧಿಯ ಆಪ್ತ ಸಹಾಯಕ, ಅದರಲ್ಲೂ ಮೊದಲು ಎಲ್ಲಾ ಆಧುನಿಕ ತಂತ್ರಜ್ಞಾನಗಳ ವಿಷಯವಾಗಿ ಆಮೇಲೆ ಕಾಂಗ್ರೆಸ್ ಪಕ್ಷವನ್ನು ಪುನರುಜ್ಜೀವನ ಗೊಳಿಸುವ ತಂತ್ರಜ್ಞಾನದ ಬಗ್ಗೆ ಕೂಡಾ! ರಾಜೀವ ಗಾಂಧಿಯ ಕೊನೆಯ ದಿನಗಳಲ್ಲಿ, ಅತನನ್ನು ದೂರಸಂಪರ್ಕ ಕಮಿಷನ್‌ನ ಅಧ್ಯಕ್ಷರನ್ನಾಗಿ ಮಾಡಲಾಯಿತು.

ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ CDOT ಇನ್ನೂ 10,000 /40,000 ಲೈನುಗಳ ಎಕ್ಸ್‌ಚೇಂಜ್ ವಿನ್ಯಾಸ ಸಿದ್ಧಪಡಿಸುವಲ್ಲಿ ಸೋತಿದೆ CDOT ನ್ನು ಪಿಟ್ರೊಡಾ ತನ್ನ 'ಜಾಗೀರು'ತರ ನಡೆಸುತ್ತಾರೆ. ದೇಶದ ದೂರಸಂಪರ್ಕ ವ್ಯವಸ್ಥೆಯ ಆಧುನೀಕರಣ ಇದರಿಂದಾಗಿ ಸ್ಥಗಿತಗೊಂಡಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶ್ರೀ ಕೆ. ಪಿ.ಪಿ ಆಕಾಲಿ ಗಳಲ್ಲದೆ ಟೀಕಾಕಾರರೂ ಇದ್ದರು. ಈ ಸಮಿತಿ ನಂಬಿಯಾರ್‌ರ ನಾಯಕತ್ವದಲ್ಲಿ ಒಂದು ತಜ್ಞರ ಸಮಿತಿ ನೇಮಿಸ ಲಾಯಿತು. ಈ ಸಮಿತಿಯಲ್ಲಿ CDOT ಪರ ವಿಜ್ಞಾನಿಗಳು ವರದಿ ಸಲ್ಲಿಸಿದೆ. 4 ಜನ ಸದಸ್ಯರು ಇದರಲ್ಲಿ ಭಿನ್ನಮತೀಯ ವರದಿ ಸಲ್ಲಿಸಿದರು. ಆಮೇಲೆ CDOT ನ ಬೋರ್ಡ್‌ನ ಇಬ್ಬರು ಸದಸ್ಯರನ್ನು (ಅವರು ಪಿಟ್ರೋಡಾರಿಂದ ನೇಮಕರಾದರು) ಇನ್ನೇನು ನಿವೃತ್ತರಾಗುವ ಕೆಲವು ತಿಂಗಳುಗಳ, ಮೊದಲು ನಿವೃತ್ತಿ ಗೊಳಿಸಲಾಯಿತು. ಆದರೆ ಈ ನಡುವೆ ಪಿಟ್ರೊಡಾ. CDOT ನ ವಿಜ್ಞಾನಿಗಳು ಮತ್ತು ದೂರಸಂಪರ್ಕ ಸಚಿವರು, ಖಾತೆಯ ನಡುವೆ ಸಾರ್ವಜನಿಕವಾಗಿಯೇ ವಿವಾದ ನಡೆದಿದೆ. ಹೆಚ್ಚಿನ ಪತ್ರಿಕೆಗಳು CDOT ಪರವಾಗಿ ನಿಂತಿವೆ.

ಹೆಚ್ಚಿನ ಪತ್ರಿಕೆಗಳು ಈ ವಿವಾದವನ್ನು ನಂಬಿಯಾರ್ ಮತ್ತು ಪಿಟ್ರೊಡಾ ನಡುವಣ ಜಗಳ, ಉನ್ನಿಕೃಷ್ಣನ್ (ದೂರಸಂಪರ್ಕ ಖಾತೆ ಮಾಜಿ ಸಚಿವ) ಮತ್ತು ಪಿಟ್ರೋಡಾ ವಿವಾದ ಎಂದು ಬರೆಯುತ್ತಿವೆ. CDOT ನ ವಿಜ್ಞಾನಿಗಳಿಗೆ ಇತರ ಸಂಸ್ಥೆಗಳ ಇಂಜನೀಯರುಗಳ ಸಹಾನುಭೂತಿ, ಬೆಂಬಲ ಸಹ ದೊರೆತಿದೆ.ಆದರೆ CDOT ನ ಇಂಜಿನಿಯರುಗಳೂ ಈ ವಿವಾದವನ್ನು ಪಿಟ್ರೊಡಾ - ಪರ ಪಿಟ್ರೋಡಾ ವಿರೋಧಿ ವಿಷಯವಾಗಿ ನೋಡುತ್ತಿರುವ ಹಾಗೆ ಕಾಣುತ್ತದೆ. ದೂರಸಂಪರ್ಕ ಜಾಲದಲ್ಲಿ ಟೆಲಿಫೋನ್ ಎಕ್ಸ್‌ಚೇಂಜ್ ಅತಿ ಮುಖ್ಯ ಭಾಗ. ಇದರಲ್ಲಿ ಸ್ವಾವಲಂಬನೆ ಅತ್ಯಗತ್ಯ. ಇದು ಸಾಧ್ಯಕೂಡಾ. ಇಂತಹ ಉಚ್ಚ ತಂತ್ರಜ್ಞಾನ ಪ್ರಾಜೆಕ್ಟ್‌ಗಳಲ್ಲಿ ವಿಳಂಬ ವಾಗುವುದು ತೀರಾ ಅಪರೂಪವೇನಲ್ಲ. ಆದರೆ ಗುರಿ ಮುಟ್ಟಲು ಸತತ ಪ್ರಯತ್ನ ಅಗತ್ಯ. ಇದರಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದು, ಆಗುರಿ ಮುಟ್ಟಲು ಬೇಕಾದ ವ್ಯವಸ್ಥೆ ಮಾಡಬೇಕು. ಪಿಟ್ರೋಡಾ ರಾಜೀವ ಗಾಂಧಿ ಸರ್ಕಾರದ ಪ್ರತೀಕ ನಿಜ. ಆದರೆ ಅದಕ್ಕಾಗಿ ಇಡೀ ಸಂಸ್ಥೆಯ ಮೇಲೆ ವಿಶ್ವಾಸ ಕಳೆದುಕೊಳ್ಳುವ ಅಗತ್ಯ ವಿಲ್ಲ. ಇಂತಹ ನಿಲುವು ಈ ಕ್ಷೇತ್ರದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ನುಸುಳಲು ಆಹ್ವಾನ ಕೊಟ್ಟಂತೆ. ಅದೇ ಸಮಯದಲ್ಲಿ CDOT ವಿಜ್ಞಾನಿಗಳು ಜವಾಬ್ದಾರರಾಗಿರುವುದು ಭಾರತದ ಜನತೆಗೆ , ಅವರು ಚುನಾಯಿಸಿದ ಸರ್ಕಾರದ ಮೂಲಕ ಒಬ್ಬ ವ್ಯಕ್ತಿ ಸ್ಯಾಮ್ ಪಿಟ್ರೋಡಾಗೆ ಅಲ್ಲ ಎಂದು ನೆನಪಿನಲ್ಲಿಡಬೇಕು. CDOTನಲ್ಲಿಆರ್ಥಿಕ 'ಗೋಲ್‌ಮಾಲ್'ಗಳೇನಾದರೂ ನಡೆದಿದ್ದರೆ ಅದರ ಬಗ್ಗೆ ನ್ಯಾಯಯುತ ವಿಚಾರಣೆ ಸಹ ಅಷ್ಟೇ ಅಗತ್ಯ.

ಕೊನೆ ನಿರ್ಧಾರ ಸ್ವಾವಲಂಬನೆಗೆ ಪೂರಕವಾಗಿರಬೇಕು. ಬಹುರಾಷ್ಟ್ರೀಯ ಸಂಸ್ಥೆಗಳಿಂದ ಎಕ್ಸ್‌ಚೇಂಜ್ ಆಮದು ಮಾಡಲಿಕ್ಕೆ ನೆವವಾಗಬಾರದು.



ನೆನ ಚಿರಂಜಿ ಪೆಟ್ರೋಲ್ ಬೆಲೆಯೇರಿಕೆಯಿಂದ ಕಳಕೊಂಡದ್ದು ವಿದ್ಯುತ್ ಬಿಲ್‌ನಲ್ಲಿ ಉಳಿತಾಯ ಮಾಡುತ್ತೇವೆ.

ಕೃಪೆ: Private view ಅಬು ಅಬ್ರಹಾಂ

"ಸಂಗಾತಿಗೆ ಕೊಡಬೇಕು...."

ಇತಿಹಾಸದ ಪುಟಗಳಿಂದ

೧೯೫೭ ಸಾರ್ವತ್ರಿಕ ಚುನಾವಣೆಗಳಲ್ಲಿ ಎ.ಕೆ.ಜಿ.ಗೆದ್ದಿದ್ದರು. ಮಲಪ್ಪುರ ಜಿಲ್ಲೆಯ ಹಳ್ಳಿಯೊಂದರಲ್ಲಿ ಅವರಿಗೆ ಸನ್ಮಾನ ಏರ್ಪಡಿಸಲಾಗಿತ್ತು. ಸಮಾರಂಭ ಮುಗಿದ ಕೂಡಲೇ ಅದೇ ಹಳ್ಳಿಯಲ್ಲಿರುವ ಒಬ್ಬ ಬಡ ಸಾಹಿತಿಯ ಮನೆಗೆ ಭೇಟಿಯಿತ್ತರು. ಮನೆಯೆಂದರೆ ಒಂದು ಸಣ್ಣ ಕೊಠಡಿಯಷ್ಟೆ. ಎ.ಕೆ.ಜಿ. ಸಾಹಿತಿಯೊಂದಿಗೆ, ಆತನ ಪತ್ನಿಯೊಂದಿಗೆಹಲವಾರು ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು.

ಆತ್ಮೀಯ ಚರ್ಚೆ ನಡೆಯುತ್ತಿದ್ದಾಗ ನಡುವೆ ಸಾಹಿತಿಯ ಪತ್ನಿಗೆ ಎ.ಕೆ.ಜಿ. ಯವರಿಗೆ ಸರಿಯಾದ ಸತ್ಕಾರ ಮಾಡಲು ಸಾಧ್ಯವಾಗಲಿಲ್ಲವಲ್ಲಾ ಎಂಬ ಕೊರಗು. ಕನಿಷ್ಠ ಹಾಲಿಲ್ಲದ ಚಹಾ ಕೊಡಲು ಕೂಡಾ ಸಾಧ್ಯವಿರದ ಸ್ಥಿತಿ. ಪತಿಯನ್ನು ಒಳಗೆ ಕರೆದು ತನ್ನ ಕೊರಗು ನಿವೇದಿಸಿಕೊಂಡಳು. ಸಾಹಿತಿಗೆ ತಕ್ಷಣ ಮನೆಯಲ್ಲಿ ಒಂದು ಹಲಸಿನ ಹಣ್ಣು ಇದ್ದುದು ನೆನಪಾಯಿತು. ಅದನ್ನೇ ತರಲು ಹೇಳಿದ. ಹೆಂಡತಿಗೆ ಮುಜುಗರ. ಇಂತಹ ದೊಡ್ಡ ಅತಿಥಿಗೆ ಬರೆ ಹಣ್ಣು ಕೊಡುವುದೇ. ಅದೂ ಹಲಸಿನ ಹಣ್ಣು! ಹೆಂಡತಿಯ ತೊಳಲಾಟ ಅರಿತ ಸಾಹಿತಿ ಹೊರಗಿನಿಂದಲೇ ಹೇಳಿದ- "ಹಲಸಿನ ಹಣ್ಣು ತಗೊಂಡು ಬಾ. ಈ ಅತಿಥಿ ಬೇರೆಯವರೇನಲ್ಲ. ನಮ್ಮವರೇ ಮುಜುಗರ ಬೇಡ". ಹಣ್ಣು ನೋಡಿದ ಎ.ಕೆ.ಜಿ. "ಹಲಸಿನ ಹಣ್ಣು, ನನಗೆ ಈ ಹಣ್ಣೆಂದರೆ ಬಹಳ ಇಷ್ಟ. ಈ ಸೀಜನ್ನಿನಲ್ಲಿ ಮೊದಲ ಹಣ್ಣು ಇದು ನನಗೆ" ಎಂದು ಹಣ್ಣನ್ನು ಕೊಂಡು ಪ್ರೀತಿಯಿಂದ ತಿನ್ನಲಾರಂಭಿಸಿದರು. ಇದ್ದಕ್ಕಿದ್ದಂತೆ ಹಣ್ಣು ತಿನ್ನುವುದನ್ನು ನಿಲ್ಲಿಸಿ ಹೇಳಿದರು" ಪಕ್ಕದಲ್ಲೇ ಪಕ್ಷದ ಕಚೇರಿಯಲ್ಲಿ ಇಂಬುಚ್ಚಿ ಬಾವಾ ನನಗಾಗಿ ಕಾಯುತ್ತಾ ಇದ್ದಾರೆ. ಅವರೂ ಹಸಿವಿನಿಂದಿದ್ದಾರೆ". ಈ ಯೋಚನೆ ಬಂದ ತಕ್ಷಣ ಉಳಿದ ಹಣ್ಣಿನ ತೊಳೆಗಳನ್ನು ಹಿಡಿದು ಹೊರಟರು!

ತನ್ನ ಜತೆಗಾರರ ಬಗ್ಗೆ, ಸಂಗಾತಿಗಳ ಬಗ್ಗೆ ಈ ಆತ್ಮೀಯತೆಯ ಇನ್ನೊಂದು ಉದಾಹರಣೆ.

ಚುನಾವಣೆಯ ಸಮಯ. ಪ್ರಚಾರಕ್ಕೆಂದು ಚೆರ್ತಾಕಲಾ ಎಂಬ ಹಳ್ಳಿಗೆ ಬಂದಿದ್ದರು. ಅಲ್ಲಿನ ತಾಲೂಕು ಕಮಿಟಿ ಆಫೀಸಿಗೆ ಎ.ಕೆ.ಜಿ. ಜತೆಗೆ ಸುಶೀಲಾ ಗೋಪಾಲನ್ ಹಾಗೂ ರಾಮಚಂದ್ರನ್ ಬಂದಿದ್ದರು. ಚುನಾವಣಾ ಪ್ರಚಾರದ ನಡುವೆ ಸ್ವಲ್ಪ ಬಿಡುವು ಮಾಡಿಕೊಂಡು ಒಬ್ಬ ಸಂಬಂಧಿಕರನ್ನು ನೋಡಲು ಸುಶೀಲಾ ಗೋಪಾಲನ್ ಜತೆ ಹೊರಟರು. ರಾಮಚಂದ್ರನ್ ತಾಲ್ಲೂಕು ಕಮಿಟಿ ಕಚೇರಿಯಲ್ಲೇ ಉಳಿದರು. ಸುಮಾರು ಒಂದೂವರೆ ಗಂಟೆಯ ನಂತರ ಎ.ಕೆ.ಜಿ. ಹಿಂತಿರುಗಿದರು. ಕೈಯಲ್ಲೊಂದು ಪೊಟ್ಟಣವಿತ್ತು. ರಾಮಚಂದ್ರನ್‌ರಿಗೆ ನೀಡುತ್ತಾ "ಇದು ನಿಮಗೆ" ಎಂದರು. ರಾಮಚಂದ್ರನ್ ಪೊಟ್ಟಣ ಬಿಚ್ಚಿದಾಗ ಅದರಲ್ಲಿದ್ದುದು ಫಲಹಾರ. ಎ.ಕೆ.ಜಿ. ಯವರಿಗೆ ಸಂಬಂಧಿಕರ ಮನೆಯಲ್ಲಿ ನೀಡಿದ ಫಲಹಾರದ ಒಂದು ಪಾಲನ್ನು ಸಂಗಾತಿ ರಾಮಚಂದ್ರನ್‌ರಿಗಾಗಿ ಕಟ್ಟಿ ತಂದಿದ್ದರು!

ಸಂಗ್ರಹ - ಅನುವಾದ
ಇ.ಕೆ.ಎನ್. ರಾಜನ್
ರಾಜಶೇಖರ್

ಸವದತ್ತಿ ತಾಲ್ಲೂಕು ರೈತರ ಸತ್ಯಾಗ್ರಹ
ಸಾಲ ಮನ್ನಾ ಸಮಾವೇಶ ನಿರ್ಣಯ

ಮೇ 5 ರಂದು ವಿಜಾಪುರ ಜಿಲ್ಲೆಯ ಸವದತ್ತಿಯ ಎ.ಪಿ.ಎಂ.ಸಿ. ಸಭಾಂಗಣದಲ್ಲಿ ತಾಲ್ಲೂಕು ರೈತ ಸಮಾವೇಶ ನಡೆಯಿತು. ಮೇ 22 ರೊಳಗೆ ರೈತರ ಸಾಲಮನ್ನಾ ಮಾಡುವ ನಿರ್ಣಯವನ್ನು ರಾಜ್ಯಸರ್ಕಾರ ಕೈಗೊಳ್ಳದಿದ್ದರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ತಾಲ್ಲೂಕಿನಲ್ಲಿರುವ ಶಾಖೆಗಳ ಕಚೇರಿಗಳ ಮುಂದೆ ಉಪವಾಸ ಸತ್ಯಾಗ್ರಹ ನಡೆಸಲು ಸಮಾವೇಶದಲ್ಲಿ ರೈತರು ನಿರ್ಧರಿಸಿದರು. ಕೇಂದ್ರ ಸರ್ಕಾರ 10 ಸಾವಿರ ರೂ ವರೆಗೆ ಎಲ್ಲಾ ರೈತರ ಸಾಂಸ್ಥಿಕ ಸಾಲಮನ್ನಾ ಮಾಡಲು ನಿರ್ಧರಿಸಿ ರಾಜ್ಯ ಸರ್ಕಾರಗಳಿಗೆ 50 ಶೇಕಡಾ ಸಬ್ಸಿಡಿ ಕೊಡುವುದಾಗಿ ಪ್ರಕಟಿಸಿದ್ದರೂ ರಾಜ್ಯ ಸರ್ಕಾರ ತನ್ನ ಪಾಲಿನ ಕರ್ತವ್ಯ ನಿರ್ವಹಣೆಗೆ ಹಿಂದೆ ಮುಂದೆ ನೋಡುವುದನ್ನು ಸಮಾವೇಶ ಖಂಡಿಸಿತು. ಸಹಕಾರಿ ಬ್ಯಾಂಕ್ ವ್ಯವಹಾರದ ಕೊನೆಯ ತಿಂಗಳು ಸಮೀಪಿಸಿದ್ದು ರಾಜ್ಯ ಸರ್ಕಾರದ ಈ ಅನುಮಾನದ ನೀತಿ ಬ್ಯಾಂಕು ಮತ್ತು ಸಂಘಗಳ ಹಕ್ಕಿನ ನೀತಿಗೆ ಕುತ್ತು ತರುವಂತಾಗಿದೆ. ಮುಂಗಾರು ಬೆಳೆಗಳು ಆರಂಭವಾಗಿರುವಾಗ ಹೊಸದಾಗಿ ಭೂಮಿಯ ಕೆಲಸಗಳಿಗೆ ಹಣ ತೊಡಗಿಸಲು ರೈತರಿಗೆ ತೊಂದರೆಯಾಗಿ ಕೃಷಿ ಕೆಲಸಗಳಿಗೆ ತೊಂದರೆಯಾಗಿದೆ ಎಂದು ಸಮಾವೇಶ ಅಭಿಪ್ರಾಯ ಪಟ್ಟಿತು

ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾಧ್ಯಕ್ಷ ಎಸ್.ಎಚ್. ಕಪ್ಪಣ್ಣನವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಹರಿಜನರ ಮೇಲಿನ ಹಲ್ಲೆ CPI(M) ಖಂಡನೆ

ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ಗ್ರಾಮದಲ್ಲಿ ಇತ್ತೀಚೆಗೆ ಸವರ್ಣೀಯರ ಒಂದು ಗುಂಪು, ಹೋಟೆಲ್ ಒಳಹೊದ ಹರಿಜನರ ಮೇಲೆ ಹಲ್ಲೆನಡೆಸಿ ನಂತರ ಸುಮಾರು 135 ಗುಡಿಸಲುಗಳನ್ನು ಸುಟ್ಟು ಭಸ್ಮ ಮಾಡಿದ್ದಾರೆ. ಈ ಘಟನೆಯಲ್ಲಿ ಒಬ್ಬ ವಯೋವೃದ್ಧ ಮರಣ ಹೊಂದಿದ್ದಾನೆ. ಈ ಘಟನೆಯನ್ನು ತೀವ್ರವಾಗಿ ಬಳ್ಳಾರಿ ಜಿಲ್ಲಾ ಸಮಿತಿ ಖಂಡಿಸುತ್ತಾ, ಈ ಘಟನೆಯಲ್ಲಿ ಕಾಂಗ್ರೆಸ್(ಐ)ನ ಕೈವಾಡವನ್ನು ಬಹಿರಂಗಗೊಳಿಸಿದೆ. ಈ ಘಟನೆಯಲ್ಲಿ ನೊಂದಿರುವ ಕುಟುಂಬಗಳಿಗೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳದೆ, ಎಲ್ಲಾ ಹರಿಜನರನ್ನು ಅಪಾದಿತರನ್ನಾಗಿ ಮಾಡಿರುವುದನ್ನು ಪಕ್ಷವು ತೀವ್ರವಾಗಿ ಖಂಡಿಸಿದೆ. ತಕ್ಷಣವೆ ಶೀಘ್ರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಬಳ್ಳಾರಿ ಜಿಲ್ಲಾ ಸಮಿತಿಯು ಜಿಲ್ಲಾಧಿಕಾರಿಅಶೋಕ್‌ಕುಮಾರ್ ಮುನೋಳಿ ಮತ್ತು ರಾಜ್ಯಸರ್ಕಾರವನ್ನು ಒತ್ತಾಯಿಸಿದೆ. ಘಟನೆನಡೆದ ಸ್ಥಳಕ್ಕೆ ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ವಿ.ಬಸವರಾಜ ಮತ್ತಿತರು ಭೇಟಿಮಾಡಿ ಅಲ್ಲಿನ ಪರಿಸ್ಥಿತಿಯನ್ನು ಅಧ್ಯಯನಮಾಡಿ ಸಭೆಗಳನ್ನುನಡೆಸಿದರು.

ಬಸ್‌ದರ ಏರಿಕೆ ವಿರುದ್ಧ ಪ್ರತಿಭಟನೆ

ತಾ। 10-5-90 ರಂದು ಮೈಸೂರು ನಗರದಲ್ಲಿ ಬಸ್‌ದರ ಏರಿಕೆಯನ್ನು ವಿರೋಧಿಸಿ. ವಿರೋಧಪಕ್ಷಗಳ ಸಂಯುಕ್ತ ರಂಗದ ಆಶ್ರಯದಲ್ಲಿ ಪ್ರತಿಭಟನಾ ಪ್ರದರ್ಶನ ಹಾಗೂ ಬಸ್ ತಡೆ ಕಾರ್ಯಕ್ರಮವನ್ನು ನಡೆಸಲಾಯಿತು. ಸಿಪಿಐ(ಎಂ) ಸಿ.ಪಿ.ಐ. ಜನತಾದಳ, ಜನತಾಪಕ್ಷಗಳ ನೇತೃತ್ವದಲ್ಲಿ ನಡೆದ ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಸಿಐಟಿಯು, ಸಿಪಿಐ (ಎಂ) ಕಾರ್ಯಕರ್ತರು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ. ಮೆರವಣಿಗೆಯನ್ನು ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರವನ್ನು ಸಲ್ಲಿಸಲಾಯಿತು. ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗ ಹಾಗೂ ರಸ್ತೆಸಾರಿಗೆ ಬಸ್ ನಿಲ್ದಾಣದ ಮುಂಭಾಗದಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಉದ್ದೇಶಿಸಿ. ಕಾಂ. ಮೊಹನ್‌ಕುಮಾರ್ ಹಾಗೂ ಕಾಂ. ಎಸ್.ಶಾಂತಪ್ಪನವರು ಮಾತನಾಡಿದರು. ಏರಿಸಿರುವ ದರಗಳನ್ನು ಇಳಿಸಿದಿದ್ದಲ್ಲಿ ಚಳುವಳಿಯನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ವಿರೋಧಪಕ್ಷಗಳ ಆಶ್ರಯದಲ್ಲಿ 11-5-90ರಿಂದ ಬಸ್ ನಿಲ್ದಾಣದ ಮುಂಭಾಗ ಧರಣಿ ಸತ್ಯಾಗ್ರಹವನ್ನು ನಡೆಸಲಾಗುತ್ತಿದೆ.

ನಾಲ್ಕು ಪಕ್ಷಗಳ ರಾಜ್ಯವ್ಯಾಪಿ ಧರಣಿ ಮೇ 21ರ ಬದಲು ಮೇ 24 ರಂದು

ಕರ್ನಾಟಕ ರಾಜ್ಯದಲ್ಲಿ ಎಡಪಕ್ಷಗಳ ಬೆಳವಣಿಗೆಯ ಅವಶ್ಯಕತೆ ಮತ್ತು ಜಂಟೀ ಹೋರಾಟ

ಪಿ. ರಾಮಚಂದ್ರರಾವ್

37 ವರ್ಷಗಳ ನಿರಂತರ ಆಡಳಿತೆಯ ನಂತರ ಕಾಂಗ್ರೆಸ್(ಐ)ಯ ಆಡಳಿತೆಯು ಕರ್ನಾಟಕ ರಾಜ್ಯದಲ್ಲಿ ಕಿತ್ತೊಗೆಯಲ್ಪಟ್ಟು ಜನತಾಪಕ್ಷ (ಜನತಾದಳ)ವು ಆಡಳಿತೆಗೆ ಬಂತು. ಅದು 6 ವರ್ಷಗಳ ಕಾಲ (2 ಅವಧಿಗಳಲ್ಲಿ) ರಾಜ್ಯವನ್ನು ಆಳಿ, ತನ್ನ ಪಕ್ಷದಲ್ಲುಂಟಾದ ಒಡಕಿನ ಕಾರಣದಿಂದಲೂ, ಕಾಂಗ್ರೆಸ್(ಐ) ಕೇಂದ್ರ ಸರ್ಕಾರದ ಏಜೆಂಟಾಗಿ ವರ್ತಿಸಿದ ರಾಜ್ಯಪಾಲರ ಪಿತೂರಿಯಿಂದ ಅಧಿಕಾರದಿಂದ ಕೆಳಗಿಳಿಯುವಂತಾಯಿತ. 1989ರ ನಂತರದಲ್ಲಿ ನಡೆದ ಚುನಾವಣೆಯಲ್ಲಿ ಪುನಃ ಕಾಂಗ್ರೆಸ್(ಐ) ಅಧಿಕಾರಕ್ಕೆ ಬಂದಿದೆ.

ಹಳೆಯ ಕಾಂಗ್ರೆಸ್ ಮುಖಂಡ, ಹಳೆಯ ಕಾಂಗ್ರೆಸ್ ಮಂತ್ರಿ, ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಇಂದಿರಾಗಾಂಧಿಯನ್ನು ಸರ್ವ ವಿರೋಧಿ ಪಕ್ಷಗಳ ಹಾಗೂ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ ವಿರೇಂದ್ರಪಾಟೀಲರು ಈಗ ಕಾಂಗ್ರೆಸ್(ಐ) ಸರಕಾರದ ಮುಖ್ಯಮಂತ್ರಿಯಾಗಿ ರಾಜ್ಯವನ್ನು ಆಳುತ್ತಿದ್ದಾರೆ.

ಇದೇ ಸಮಯದಲ್ಲಿ ರಾಜ್ಯದ ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತಿದ್ದಾಗ ಅವರ ಮೇಲೆ ಹಲವಾರು ಬಾರಿ ಗುಂಡೆಸೆದು ೧೪೦ ಕ್ಕೂ ಅಧಿಕ ಸಾವಿಗೆ ಕಾರಣರಾದ ಶ್ರೀಮತಿ ಇಂದಿರಾಗಾಂಧಿಯವರ ಕೃಪಾಕಟಾಕ್ಷಕ್ಕೆ ಪಾತ್ರರಾದ ಗುಂಡೂರಾಯರು ಪುನಃ ಬೆಂಗಳೂರಿನ ಲೋಕಸಭಾ ಸದಸ್ಯರಾಗಿ ಕಾಂಗ್ರೆಸ್(ಐ) ಪಕ್ಷದಲ್ಲಿ ಪುನಃ ಪ್ರಭಾವ ಬೀರುವವರಾಗಿದ್ದಾರೆ.

ಬಂಗಾರಪ್ಪ, ಕೆ.ಎಚ್.ಪಾಟೀಲ್, ಶ್ರೀಮತಿ ನಾಗರತ್ನಮ್ಮ, ಖರ್ಗೆ ಮೊದಲಾದ ಕಾಂಗ್ರೆಸ್(ಐ) ಮುಖಂಡರ ಹಲವು ಗುಂಪುಗಳಿಂದ ಕೂಡಿದ, ಕೇಂದ್ರದಲ್ಲೂ, ಹೆಚ್ಚಿನ ರಾಜ್ಯಗಳಲ್ಲೂ ಅಧಿಕಾರ ಕಳೆದುಕೊಂಡ (ಹಾಗೂ ಗೋವಾ ಮತ್ತು ನಾಗಾಲ್ಯಾಂಡ್‌ನಲ್ಲಿ ಇತ್ತೀಚೆಗೆ ಅಧಿಕಾರ ಕಳೆದುಕೊಂಡ) ಕಾಂಗ್ರೆಸ್(ಐ) ಪಕ್ಷದ ಕರ್ನಾಟಕ ರಾಜ್ಯದ ಆಡಳಿತೆಯಡಿಯಲ್ಲಿ ರಾಜ್ಯದ ಜನತೆಯ ಹಿತರಕ್ಷಣೆ ಹಾಗೂ ಮುನ್ನಡೆಯನ್ನು ಸಾಧಿಸಲು ಸಾಧ್ಯ?

ಕಾಂಗ್ರೆಸ್(ಐ) ತನ್ನ ಧೋರಣೆಗಳನ್ನು ಬಿಟ್ಟು ಕೊಡುವುದೇ? ದೇಶದಲ್ಲಿ ಇಂದಿನ ಸಾರ್ವತ್ರಿಕ ಭ್ರಷ್ಟಾಚಾರದ ಆಡಳಿತೆಗೆ ಕಾರಣೀಭೂತವಾದ ಕಾಂಗ್ರೆಸ್(ಐ) ಇದೀಗ ರಾಜ್ಯದಲ್ಲಿ ದಕ್ಷ ಆಡಳಿತೆಯನ್ನು ಅಪೇಕ್ಷಿಸಲು ಸಾಧ್ಯವೇ?

ರಾಜ್ಯದ ಮುಂದಿರುವ ಸಮಸ್ಯೆಗಳನ್ನು ಎತ್ತಿಕೊಳ್ಳೋಣ: ನಿರಾವರಿಯಲ್ಲಿ ರಾಜ್ಯವು ದೇಶದ ಹೆಚ್ಚಿನ ರಾಜ್ಯಗಳಿಂದ ತೀರಾ ಹಿಂದೆ ಇದೆ. ಕೃಷ್ಣಾ, ಕಾವೇರಿ ನದಿಗಳ ನೀರನ್ನು ರಾಜ್ಯದ ೩ ಕೋಟಿ ರೈತರ ಹಿತದೃಷ್ಟಿಯಲ್ಲಿ ಬಳಸಲು ಸಾಧ್ಯವಾಗದ ಸ್ಥಿತಿಯಲ್ಲಿ ರಾಜ್ಯವಿದೆ. ವಿದ್ಯುಚ್ಛಕ್ತಿಯ ಕೊರತೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುತ್ತಿದೆ. ಹೊಸ ಕೈಗಾರಿಕೆಗಳು ಬೆಳೆದು ಬರುವುದು ಕಾಣುವುದಿಲ್ಲ, ಅದೇ ವೇಳೆ ಇದ್ದ ಸಾವಿರಾರು ಕೈಗಾರಿಕೆಗಳು (ಅದೂ ಜನತೆಗೆ ಉದ್ಯೋಗ ಕೊಡುತ್ತಿರುವ ಕೈಗಾರಿಕೆಗಳು) ಮುಚ್ಚಿವೆ ಅಥವಾ ಮುಚ್ಚುತ್ತಿರುವ ಸ್ಥಿತಿಯಲ್ಲಿವೆ. ಉದಾಹರಣೆಗೆ, ಬೀಡಿ ಕೈಗಾರಿಕೆ, ಕಾಫಿ ಕ್ಯೂರಿಂಗ್ ಕೈಗಾರಿಕೆ, ರಾಜ್ಯದ ವಿವಿಧ ಕೈಗಾರಿಕಾ ಎಸ್ಟೇಟುಗಳಲ್ಲಿರುವ ಸಾವಿರಾರು ಸಣ್ಣ ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಿವೆ. ಕೃಷಿ ಕ್ಷೇತ್ರದಲ್ಲಿ ರೈತರು ಸಾಲದ ಭಾರದಿಂದ ಒಂದೆಡೆ ಬಳಲುತ್ತಿದ್ದರೆ, ಇನ್ನೊಂದೆಡೆ ತಮ್ಮ

ಸಾಂಪಾದಕೀಯ

ಪ್ರಮುಖ ಬೆಳೆಗಳಿಗೆ ನ್ಯಾಯವಾದ ಬೆಲೆಗಳನ್ನು ಪಡೆಯುತ್ತಿಲ್ಲ.

ರಾಜ್ಯದ ಅಭಿವೃದ್ಧಿ ಮತ್ತು ರಾಜ್ಯದ ಬಹುಭಾಗದ ದುಡಿಯುವ ವಿಭಾಗಗಳು ಕಾಂಗ್ರೆಸ್ (ಐ) ಆಡಳಿತೆಯಿಂದ ಪ್ರಗತಿಯನ್ನು ಅಪೇಕ್ಷಿಸಲು ಸಾಧ್ಯವಿಲ್ಲ.

ಕಳೆದ ಸುಮಾರು ೭ ತಿಂಗಳುಗಳ ಶ್ರೀ ವೀರೇಂದ್ರ ಪಾಟೀಲರ ರಾಜ್ಯಭಾರವನ್ನೇ ವೀಕ್ಷಿಸೋಣ. ನೇಕಾರರಿಗೆ ಹೆಚ್ಚು ಸಂಪನ್ಮೂಲ ಒದಗಿಸಿದರೇ, ಹೊಸ ವಿದ್ಯುಚ್ಛಕ್ತಿ ಯೋಜನೆಗಳಿಗೆ ಅಸ್ತಿಭಾರ ಹಾಕಿದರೇ? ಹೊಸ ಕೈಗಾರಿಕಾ ನೀತಿ ಅನುಸರಿಸಿ ಇದ್ದ ಕೈಗಾರಿಕೆಗಳನ್ನು ಉಳಿಸುವ ಮತ್ತು ಹೊಸ ಕೈಗಾರಿಕೆಗಳು ಬೆಳೆದು ಬರಲು ಅನುಕೂಲ ವಾತಾವರಣವನ್ನು ಸೃಷ್ಟಿಸುವ ಕ್ರಮಗಳನ್ನು ವಹಿಸಿದರೇ? ಬೇಡ. ಲಕ್ಷಗಟ್ಟಲೆಯಲ್ಲಿ ಉದ್ಯೋಗ ಒದಗಿಸುತ್ತಿರುವ ಕೈಗಾರಿಕೆಗಳ ಬೆಂಬಲಕ್ಕಾದರೂ ಅವಶ್ಯಕ ಹೆಜ್ಜೆಗಳನ್ನು ಕೈಗೊಂಡರೇ? ದೇಶದಲ್ಲಿ ರೈತರ ಸಾಲಮನ್ನಾ ಮಾಡುವುದರಲ್ಲಿ ಪ್ರಮುಖವಾದ ಮತ್ತು ಅವಶ್ಯಕವಾದ ಹೆಜ್ಜೆಯನ್ನಿಟ್ಟ ಕೇಂದ್ರ ಸರ್ಕಾರದ ಜತೆ ಸೇರಿ ರಾಜ್ಯದ ರೈತರ ರೂ 10,000 ವರೆಗಿನ ಸಾಲ ಮನ್ನಾ ಮಾಡುವ ಪ್ರಕ್ರಿಯೆಯಲ್ಲಿ ಒಂದು ಸಣ್ಣ ಹೆಜ್ಜೆಯನ್ನಾದರೂ ಶ್ರೀ ವೀರೇಂದ್ರ ಪಾಟೀಲರು ಇಟ್ಟರೇ?.

ಇಲ್ಲ, ರಾಜ್ಯದಲ್ಲಿ ಪಶ್ಚಿಮ ಬಂಗಾಳದ ನಂತರ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳು ಮೂಲಕ 'ಪ್ರಾದೇಶಿಕ ಆಡಳಿತೆ'ಯನ್ನು ಜನರತ್ತ ಒಯ್ಯುವ ಪ್ರಕ್ರಿಯೆಗೆ ಶ್ರೀ ವೀರೇಂದ್ರಪಾಟೀಲರ ಕಾಂಗ್ರೆಸ್(ಐ) ಸರ್ಕಾರವು-ದೇಶವನ್ನೆಲ್ಲಾ ಪಂಚಾಯತ್ ರಾಜ್ ತರುವ ಅರ್ಭಟ ಹೊಡೆದ ಕಾಂಗ್ರೆಸ್(ಐ) ಏನಾದರೂ ಸಹಾಯ ಮಾಡಿದರೇ?

ಅಲ್ಲ, ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆಯನ್ನು ಕಡಿಮೆ ಮಾಡಿದರೆ? ಪೆಟ್ರೋಲ್ ದರ ಹೆಚ್ಚಿಸಿದರು, ಸ್ಟಾಂಪ್‌ಫೀಸ್ ಹೆಚ್ಚಿಸಿದರು. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಹೆಚ್ಚಿಸಿದರು. ಬಸ್‌ದರ ಏರಿಸಿದರು. ಮಾತ್ರವಲ್ಲ, ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿದ್ದ ಚುನಾವಣೆಗಳಲ್ಲಿನ ಅಕ್ರಮಗಳನ್ನು ಇಂದು ಪೇಟೆ ಪಟ್ಟಣಗಳಲ್ಲಿ ಅದೂ ಬೆಂಗಳೂರಿನಲ್ಲಿ ನಡೆಸಲು ಕಾಂಗ್ರೆಸ್(ಐ) ಮುಂದಾಯಿತು.

ಒಟ್ಟಿನಲ್ಲಿ ಕಾಂಗ್ರೆಸ್(ಐ) ರಾಜ್ಯಾಡಳಿತೆಗೆ ಬಂದ ನಂತರ ರಾಜ್ಯದ ಸಮಸ್ಯೆಗಳಾಗಲೀ ವಿವಿಧ ಜನ ವಿಭಾಗಗಳ ಸಮಸ್ಯೆಗಳಾಗಲೀ ಬಗೆ ಹರಿಯುವ ಯಾವುದೇ ಸೂಚನೆಗಳು ಕಾಣುವುದಿಲ್ಲ. ಬದಲು ಪೋಲೀಸ್ ಮರ್ಧನ, ಲಂಚ ರುಷುವತ್ತು, ಪ್ರಶ್ನೆಗಳ ನಿರ್ಲಕ್ಷ್ಯತೆ, ಮತ್ತು ಕಾಂಗ್ರೆಸ್(ಐ) ದ ದರ್ಪದ ಅಧಿಕಾರಶಾಹಿ ನೀತಿ ಎದ್ದು ತೋರುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ, ರಾಜ್ಯದಲ್ಲಿ, ವಿಶಾಲ ಪ್ರಮಾಣದಲ್ಲಿ, ಪ್ರಜಾಪ್ರಭುತ್ವ ವಿಚಾರಿ ಮತ್ತು ಪ್ರಜಾಪ್ರಭುತ್ವ ಚಳುವಳಿಯನ್ನು ಬೆಳೆಸುವ ದಿಕ್ಕಿನಲ್ಲಿ, ಯೋಜನಾ ಬದ್ಧವಾಗಿ ಕಾರ್ಯಕ್ರಮ ಹಾಕಿ, ಅವಿಶ್ರಾಂತವಾಗಿ ದುಡಿಯಲು ರಾಜ್ಯದ ಎಡಪಕ್ಷಗಳು ಮುಖ್ಯವಾಗಿ ಭಾರತ ಕಮ್ಯುನಿಸ್ಟ್ ಪಕ್ಷಗಳು ಜನತೆಯ ವಿಭಾಗಗಳಿಗೂ ಸಂಬಂಧ ಪಟ್ಟ ಒಂದೊಂದು ಪ್ರಶ್ನೆಗಳನ್ನು ಮುಂದಿಟ್ಟು ಸಂಯುಕ್ತ ಪ್ರಕ್ರಿಯೆ ಮತ್ತು ಹೋರಾಟ ನಡೆಸಲು ಮುಂದಾಗಬೇಕಾಗಿದೆ.

ರಾಜ್ಯದ ಎಲ್ಲಾ ಜಾತ್ಯಾತೀತ, ಪ್ರಗತಿಪರ ಮತ್ತು ರಾಷ್ಟ್ರಪ್ರೇಮಿ ವ್ಯಕ್ತಿಗಳ ಮತ್ತು ಶಕ್ತಿಗಳ ಬೆಂಬಲವನ್ನು ಗಳಿಸಿ, ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕಂಡುಕೊಂಡು ಬೆಳೆಸಿದ ಜಾತ್ಯಾತೀತ ಪ್ರಗತಿಪರ ದಾರಿಯಲ್ಲಿ ರಾಜ್ಯವನ್ನು ಮುಂದೊಯ್ಯಲು ರಾಜ್ಯದ ಎಡಪಕ್ಷಗಳು [illegible] ಕಾರ್ಯಕ್ರಮ ಹಾಕಲು ಮುಂದಾಗಲಿ ಎಂದು ಹಾರೈಸೋಣ.

ಬಸ್ ಪ್ರಯಾಣದರ ಏರಿಕೆಯ ವಿರುದ್ಧ ಬೆಂಗಳೂರಿನಲ್ಲಿ ಪಿಕೆಟಿಂಗ್

ಪೋಲೀಸ್ ಅಧಿಕಾರಿಗಳ ಅತಿರೇಕದ ವರ್ತನೆ



ಇತ್ತೀಚೆಗೆ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಟಿ.ಎಸ್ ಬಸ್ ಪ್ರಯಾಣದರಗಳನ್ನು ಏರಿಸಿರುವುದನ್ನು ಪ್ರತಿಭಟಿಸಿ ಸಿ.ಪಿ.ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಮೇ 11 ರಂದು ಕೇಂದ್ರ ಬಸ್‌ನಿಲ್ದಾಣದ ಬಳಿ ನೂರಾರು ಕಾರ್ಯಕರ್ತರು ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ಜಿಲ್ಲಾ ಸೆಕ್ರೆಟಾರಿಯೇಟ್ ಮತ್ತು ಜಿಲ್ಲಾ ಸಮಿತಿಯು ಅನುಕ್ರಮವಾಗಿ ಮೇ 8 ಮತ್ತು 9 ರಂದು ತುರ್ತು ಸಭೆ ಸೇರಿ ಮೇಲ್ಕಂಡ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೇವಲ ಒಂದೆರಡು ದಿನಗಳ ಸಮಯದಲ್ಲಿ ಪಕ್ಷದ ಕಾರ್ಯಕರ್ತರು ಕಾರ್ಯಾಚರಣೆಗಿಳಿದರು.

ಬೆಳಿಗ್ಗೆ 10-20 ರ ವೇಳೆಗೆ ರೈಲ್ವೆ ನಿಲ್ದಾಣದ ಪ್ರವೇಶದ್ವಾರದ ಕಡೆಯಿಂದ ಪಕ್ಷದ ಬ್ಯಾನರ್, ಬಾವುಟ, ಭಿತ್ತಿ ಪತ್ರಗಳನ್ನು ಹಿಡಿದು ಸುಮಾರು ಒಂದು ನೂರಕ್ಕೂ ಹೆಚ್ಚು ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತಾ ಕೆ.ಎಸ್.ಆರ್.ಟಿ.ಸಿ. ಮತ್ತು ಬಿ.ಟಿ.ಎಸ್. ಬಸ್ಸುಗಳು ಹೊರಬೀಳುವ ರಸ್ತೆಯನ್ನು ಅಡ್ಡಗಟ್ಟಿದರು. ಪತ್ರಿಕೆಗಳಲ್ಲಿ ಮೊದಲೇ ಸುದ್ದಿ ಪ್ರಕಟವಾಗಿದ್ದರೂ ಪಿಕೆಟಿಂಗ್ ನಡೆಸುವ ನಿರ್ಧಿಷ್ಟ ಸ್ಥಳದ ಬಗ್ಗೆ ಮಾಹಿತಿ ಸಿಗದ ಕಾರಣ ಪೋಲೀಸರು ನಾಲ್ಕೈದು ಕಡೆ ವ್ಯಾನ್‌ನೊಂದಿಗೆ ಸಜ್ಜಾಗಿ ನಿಂತಿದ್ದರು. ರಸ್ತೆಯಲ್ಲಿ ಕುಳಿತುಕೊಳ್ಳುವ ಮೊದಲೇ ಹತ್ತಿರದಲ್ಲಿದ್ದ ಒಂದು ಪೋಲೀಸ್ ತಂಡ ಕಾರ್ಯಾಚರಣೆಗಿಳಿದಾಗ ಕಾರ್ಯಕರ್ತರು ತೀವ್ರವಾಗಿ ಪ್ರತಿಭಟಿಸಿದರು. ಚಿಕ್ಕಪೇಟೆ ಎ.ಸಿ.ಪಿ.ಶಿವರುದ್ರಸ್ವಾಮಿ ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಸದಸ್ಯರಾದ ಎಸ್.ಆರ್. ಆರಾಧ್ಯರವರಕೊರಳುಪಟ್ಟಿಯನ್ನು ಹಿಡಿದು ದರದರನೆ ವ್ಯಾನಿನೊಳಕ್ಕೆ ಎಳೆದೊಯ್ದರು. ಇತರೆ ಕೆಲವು ಕಾರ್ಯಕರ್ತರಿಗೂ ಸಹ ಇದೇ ರೀತಿ ಎಳದೊಯ್ಯುವಾಗ ರಕ್ತಸಿಕ್ತ ಗಾಯಗಳಾದವು. ಮಹಿಳಾ ಕಾರ್ಯಕರ್ತೆಯರನ್ನು ಸಹ ಮಹಿಳಾ ಪೋಲೀಸರಿಲ್ಲದೆ ಬಂಧಿಸಿ ಎಳೆದೊಯ್ದರು.

ಮೊದಲನೆಯ ತಂಡದ ನೇತೃತ್ವವನ್ನು ಜಿಲ್ಲಾ ಸಮಿತಿ ನಾಯಕರಾದ ಪಿ.ಜಗನ್ನಾಥ್, ಆರ್. ಶ್ರೀನಿವಾಸ್, ಎಸ್.ಆರ್. ಆರಾಧ್ಯ, ನಾರಾಯಣ್‌ರಾವ್ ಭಾನು, ಲಕ್ಕಣ್ಣ, ರೇವಣ್ಣ ಮತ್ತು ಪಿ.ಕೆ. ಸುಬ್ರಮಣಿಯವರು ವಹಿಸಿದ್ದರು. ಇದಾದ ನಂತರ ಮತ್ತೊಂದು ತಂಡ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದೊಳಗೆ ನುಸುಳಿ ಮತ ಪ್ರದರ್ಶನ ನಡೆಸಿ ನಂತರ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು. ವಿ.ಗೋಪಾಲಗೌಡ (ಎ.ಐ.ಎಲ್.ಯು), ಟಿ.ಶಿವಶಂಕರ್ (ಡಿ.ವೈ.ಎಫ್.ಐ.) ನಾವರಸನ್ (ಮೈಕೋ) ಹಾಗೂ ಮಾರ್ತಾಂಡಪ್ಪ ಮತ್ತು ಕುಂಜಪ್ಪನ್ (ಸಿ.ಐ.ಟಿ.ಯು) ಎರಡನೆಯ ತಂಡದ ನೇತೃತ್ವವಹಿಸಿದ್ದರು.

ಒಟ್ಟು ಸುಮಾರು 150 ಮಂದಿ ಕಾರ್ಯಕರ್ತರನ್ನು ಬಂಧಿಸಿ ಸಮೀಪದ ಉಪ್ಪಾರ್ ಪೇಟೆ ಪೋಲೀಸ್ ಠಾಣೆಗೆ ಕರೆದೊಯ್ಯಲಾಯಿತು.

ಪೋಲೀಸ್ ಠಾಣೆಯೊಳಗೆ ಕಾಲಿಡುತ್ತಲೇ ಕೆಲವು ಅಧಿಕಾರಿಗಳ ಅತಿರೇಕದ ವರ್ತನೆಯ ವಿರುದ್ಧ ಧಿಕ್ಕಾರದ ಘೋಷಣೆಗಳು ಮೊಳಗಿದವು. ನಂತರ ಆರ್. ಶ್ರೀನಿವಾಸ್ ರವರ ಅಧ್ಯಕ್ಷತೆಯಲ್ಲಿ ಠಾಣೆಯೊಳಗೇ ಜರುಗಿದ ಸಭೆಯನ್ನುದ್ದೇಶಿಸಿ ವಿ.ಗೋಪಾಲಗೌಡ, ಪಿ. ಜಗನ್ನಾಥ್, ಜಿ. ಸುಬ್ಬರಾವ್ ಮತ್ತು ಎಸ್.ಆರ್ ಆರಾಧ್ಯ ಮಾತನಾಡಿ ಕಾಂಗ್ರೆಸ್ (ಐ) ಸರ್ಕಾರದ ಜನವಿರೋಧಿ ನೀತಿ ಹಾಗೂ ಪೋಲೀಸ್ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿದರು. ಬಸ್ ಪ್ರಯಾಣ ದರ ಏರಿಕೆ, ರೈತರ ಸಾಲಮನ್ನಾ ಹಾಗೂ ಬೆಲೆ ಏರಿಕೆ ಸಮಸ್ಯೆಗಳ ಬಗ್ಗೆ ವಿವರಿಸಿ ಜನಾಂದೋಲನವನ್ನು ಬಲಪಡಿಸಲು ಕರೆಯಿತ್ತರು.

ಎ.ಸಿ.ಪಿ. ಶಿವರುದ್ರಸ್ವಾಮಿಯವರ ಅನಪೇಕ್ಷಿತ ಹಾಗೂ ಬೇಜಾವಾಬ್ದಾರಿಯುತ ವರ್ತನೆಯ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಬೆಂಗಳೂರು ನಗರ ಪೋಲೀಸ್ ಕಮಿಷನರ್, ಡಿ.ಜಿ.ಪಿ. ಹಾಗೂ ಗೃಹ ಸಚಿವರಿಗೆ ಸಿ.ಪಿ.ಐ.(ಎಂ) ಜಿಲ್ಲಾ ಸಮಿತಿಯ ಪರವಾಗಿ ದೂರು ಸಲ್ಲಿಸಲಾಗಿದೆ.

ಒಟ್ಟಾರೆಯಾಗಿ ಸಿ.ಪಿ.ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿಯ ರಾಜ್ಯದ ಜನತೆ ಎದುರಿಸುತ್ತಿರುವ ಗಂಭೀರ ಸಮಸ್ಯೆಯೊಂದರ ಬಗ್ಗೆ ಹಮ್ಮಿಕೊಂಡ ಸಕಾಲಿಕ ಪ್ರತಿಭಟನೆ ನಗರದ ನಾಗರೀಕರ ಗಮನ ಸೆಳೆಯುವಲ್ಲಿ ಸಫಲವಾಗಿದೆ.



ಕೆ.ಆರ್. ಪುರಂನಲ್ಲಿ ರಾಸ್ತಾರೋಕೋ

ಕೆ.ಆರ್.ಪುರಂ ಸ್ಥಳೀಯ ಸಮಿತಿಯ ನೇತೃತ್ವದಲ್ಲಿ ಸಿ.ಪಿ.ಐ(ಎಂ) ಹಾಗೂ ಸಿ.ಐ.ಟಿ.ಯು. ಕಾರ್ಯಕರ್ತರು ಮೇ ೧೪ ರಂದು ಬಸ್ ದರಗಳ ತೀವ್ರ ಏರಿಕೆ ಪ್ರತಿಭಟಿಸಿ ರಸ್ತೆ ತಡೆ ನಡೆಸಿದರು. ಇದರ ಮೊದಲು ಸ್ಥಳೀಯ ಸಿ.ಐ.ಟಿ..ಯು. ಕಚೇರಿಯಿಂದ ಮೆರವಣಿಗೆ ನಡೆಸಿದರು. ಕಾಂಗ್ರೆಸ್(ಐ) ಸರ್ಕಾರದ ಜನ-ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗಿ ಬಸ್ ದರ ಏರಿಕೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು, ಇಲ್ಲವಾದರೆ ಸಿ.ಪಿ.ಐ.(ಎಂ) ಸ್ಥಳೀಯಸಮಿತಿ ಮತ್ತು ಸಿ.ಐ.ಟಿ.ಯು. ಸಂಯೋಜಕ ಸಮಿತಿಯು ತನ್ನ ಚಳುವಳಿಯನ್ನು ತೀವ್ರ ಗೊಳಿಸುವುದೆಂದು ಸರಕಾರಕ್ಕೆ ಎಚ್ಚರಿಕೆ ನೀಡಲಾಯಿತು.

ಸುಮಾರು ಒಂದೂವರೆ ಗಂಟೆ ಕಾಲ ಹಳೆ ಮದ್ರಾಸ್ ರಸ್ತೆ ಮತ್ತು ವೈಟ್‌ಫೀಲ್ಡ್ ರಸ್ತೆಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು. ಸ್ಥಳೀಯ ಸಮಿತಿ ಕಾರ್ಯದರ್ಶಿ ಎ.ಎಂ. ಜಾನ್ ವಿನ್ಸೆಂಟ್ ಹಾಗೂ ರೈತ ಸಂಘದ ಮುಖಂಡ ಕಾಂ.ಶಾಮಣ್ಣ ರೆಡ್ಡಿ ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಹೊಸಪೇಟೆ ನಗರಸಭೆಗೆ ಸಿ.ಪಿ.ಐ. (ಎಂ) ಸದಸ್ಯರು

ಏಪ್ರಿಲ್ 29 ರಂದು ನಡೆದ ಪುರಸಭಾ ಚುನಾವಣೆಗಳಲ್ಲಿ ಹೊಸಪೇಟೆ ನಗರಸಭೆಗೆ ಸಿ.ಪಿ.ಐ.(ಎಂ) ಅಭ್ಯರ್ಥಿ ಕಾಂ.ಎಸ್ ಚಂದ್ರಬಾಬು ಆಯ್ಕೆಯಾಗಿದ್ದಾರೆ. ಅವರಿಗೆ 1542 ಮತಗಳು ದೊರೆತವು. ಬೆಂಬಲಿತ ಅಭ್ಯರ್ಥಿ ಕಾಂ.ಅಂಬಿಕಾಜಲಗಾರ್ 1032 ಮತಗಳನ್ನು ಪಡೆದುಆಯ್ಕೆಯಾಗಿದ್ದಾರೆ. 3 ಸದಸ್ಯರುಳ್ಳ ನಗರ ಸಭೆಗೆ ಇಬ್ಬರು ಪಕ್ಷದ ಅಭ್ಯರ್ಥಿಗಳು ಹಾಗೂ ಐವರು ಬೆಂಬಲಿತ ಅಭ್ಯರ್ಥಿಗಳು ಸ್ಪರ್ಧಿಸಿದ್ದರು.

ಬಳ್ಳಾರಿ ಪುರಸಭೆಗೆ ಪಕ್ಷದ ಬೆಂಬಲಿತ ಅಭ್ಯರ್ಥಿ ಕಾಂ.ಕೆ.ಹೊನ್ನೂರಪ್ಪ ಆಯ್ಕೆಯಾಗಿದ್ದಾರೆ.

ಅರಣ್ಯ ಇಲಾಖೆ ಅನ್ಯಾಯಕ್ಕೆ ಬಸ್ ಪ್ರಯಾಣಿಕರ ಪ್ರತಿಭಟನೆ

ಮೇ 8ರ ರಾತ್ರಿ ಜೋಗದಿಂದ ಮಂಗಳೂರಿಗೆ ಹೋಗುತ್ತಿದ್ದ ಶ್ರೀಗಜಾನನ ಬಸ್ ಕಂಪೆನಿಯ ಬಸ್ಸೊಂದರಲ್ಲಿ ಹುಲಿಕಲ್ ಚೆಕ್‌ಪೋಸ್ಟಿನಲ್ಲಿ ಪ್ರಯಾಣಿಕನೊಬ್ಬನಿಂದ ಗಂಧದ ಕೊರಡು ಹಾಗೂ 4 ವಾಚುಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ವಶಪಡಿಸಿಕೊಂಡರು. ಆದರೆ ಆ ಪ್ರಯಾಣಿಕರನ್ನು ಬಂದಿಸುವ ಬದಲು ಸಿಬ್ಬಂದಿ ಬಸ್‌ನ ಡ್ರೈವರ್ ಶ್ರೀ ಗಜೇಂದ್ರ ಅವರನ್ನು ಮೇಲೆ ಕೇಸು ಹಾಕಲು ಪ್ರಯತ್ನಿಸಿದರು. ಪ್ರಯಾಣಿಕನಿಂದ ಮಾಮೂಲು ಪಡೆದ ಸಿಬ್ಬಂದಿಯ ಈ ಭ್ರಷ್ಟನಡವಳಿಕೆಯನ್ನು ಬಸ್ಸಿನ ಇತರ ಪ್ರಯಾಣಿಕರು ಪ್ರತಿಭಟಿಸಿ ಎಲ್ಲರೂ ಒಟ್ಟಿನಿಂದ ಕೆಳಗಿಳಿದರು. ಪ್ರಯಾಣಿಕರ ಈ ಪ್ರತಿಭಟನೆಯಿಂದ ಅರಣ್ಯ ಸಿಬ್ಬಂದಿಯ ಪ್ರಯತ್ನ ವಿಫಲಗೊಂಡಿತು.

ಪ್ರಯಾಣಿಕರನ್ನು ಇದಕ್ಕಾಗಿ ಅಭಿನಂದಿಸಿರುವ ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷ ಕೆ. [illegible] ನವರು ಸಂಬಂಧ ಪಟ್ಟ ಅರಣ್ಯ ಇಲಾಖೆ ಸಿಬ್ಬಂದಿಯ ಕೃತ್ಯದ ಬಗ್ಗೆ ತನಿಖೆ ನಡೆಸಬೇಕೆಂದು ಇಲಾಖೆಯ ಮೇಲಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಸಾಲ ಮನ್ನಾ: ಕಿಸಾನ್ ಸಭಾ ಚಳುವಳಿ ಹಾಗೂ ನಿಲುವು

ಕಾಂ. ಚಂದ್ರಶೇಖರ್ ಬಾಳಿ

ರಾಷ್ಟ್ರೀಯ ರಂಗ ಸರಕಾರ ಆಡಳಿತಕ್ಕೆ ಬಂದು ತನ್ನ ಪ್ರಣಾಳಿಕೆಯಲ್ಲಿ ಕೊಟ್ಟಿರುವ ಆಶ್ವಾಸನೆಯಂತೆ ರೈತರ 10000/ರೂ ವರೆಗಿನ ಸಾಲವನ್ನು ಮನ್ನಾ ಮಾಡಲು ಘೋಷಿಸಿದ ಮೊದಲ ಕೇಂದ್ರ ಸರಕಾರವಾಗಿದೆಯೆಂದರೆ ತಪ್ಪಾಗಲಾರದು. ಜನತಾ ದಳ ಹಾಗೂ ರಾಷ್ಟ್ರೀಯ ರಂಗದಲ್ಲಿರುವ ಮಿತ್ರ ಪಕ್ಷಗಳೆಲ್ಲವು ಬಂಡವಾಳಶಾಹಿ ಭೂಮಾಲೀಕ ಧೋರಣೆಯನ್ನೇ ಹೊಂದಿರುವವೆಂಬುದನ್ನು ಮರೆಯಕೂಡದು. ಆದಾಗ್ಯೂ ಸ್ವಾತಂತ್ರ್ಯಾ ನಂತರ ನಿರಂತರವಾಗಿ ಅಧಿಕಾರದಲ್ಲಿದ್ದ ಕಾಂಗ್ರೆಸ್ಸಿನ ಸಾಲ ಮನ್ನಾ ವಿರೋಧಿ ನೀತಿಯಿಂದ ಹೊರಬರಲು ಅದೇ ವರ್ಗಗಳನ್ನು ಪ್ರತಿನಿಧಿಸುವ ರಾಷ್ಟ್ರೀಯ ರಂಗ - ಸರಕಾರಕ್ಕೆ ಹೇಗೆ ಸಾಧ್ಯವಾಗುತ್ತದೆಂದು ನೋಡಬೇಕಾಗಿದೆ.

ಸಿ.ಪಿ.ಐ(ಎಂ)ದ ನೇತೃತ್ವದಲ್ಲಿ ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರಸಿ, ಕಾಂಗ್ರೆಸ್ಸಿನ ಆಡಳಿತ ಮುಂದುವರಿದರೆ ರಾಷ್ಟ್ರದ ಐಕ್ಯತೆಯನ್ನು ಅಪಾಯಕ್ಕೊಡ್ಡುತ್ತದೆ, ಕಾರಣ ಕಾಂಗ್ರೆಸ್ಸನ್ನು ಈ ಕೂಡಲೇ ಅಧಿಕಾರದಿಂದ ಕೆಳಗಿಳಿಸಲು, ರಾಜೀವಗಾಂಧಿಗೆ ರಾಜೀನಾಮೆ ಕೊಡಲು ಧೀರ್ಘ ಚಳುವಳಿ ನಡೆಸಿ ಭಾರತ ಬಂದ್ ಕೂಡ ನಡೆಸಿದ್ದನ್ನು ಇಲ್ಲಿ ನೆನೆಯಬೇಕಾಗಿದೆ. ಈ ಪ್ರಕ್ರಿಯೆಯಲ್ಲಿ ೧೯೭೭ರಲ್ಲಿ ತುರ್ತು ಪರಿಸ್ಥಿತಿಯ ಹರಿಕಾರ ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಳಿಸುವಾಗ, ಪರ್ಯಾಯ ಬೇಡಿಕೆಗಳ ಆಧಾರದಲ್ಲಿ ಚಳುವಳಿನಡೆಯದೆ ಪ್ರಜಾಪ್ರಭುತ್ವ ಉಳಿವಿಗಾಗಿ, ಅದರ ಮರುಸ್ಥಾಪನೆಗಾಗಿ ಚಳುವಳಿ ನಡೆದಿತ್ತು. 1989 ರವರೆಗೆ ನಡೆದ ಈ ಚಳುವಳಿ ವ್ಯಕ್ತಿಯಾಧಾರಿತ ರಾಜಕೀಯದಿಂದ ಬೇಡಿಕೆಯಾಧಾರಿತ ರಾಜಕೀಯಕ್ಕೆ ರಾಷ್ಟ್ರದ ಜನತೆಯನ್ನು ಕೊಂಡೊಯ್ಯಲು ಎಡ ಶಕ್ತಿಗಳಿಗೆ ಸಾಧ್ಯವಾಗಿತ್ತು ಎಂಬುದು ಗಂಭೀರವಾಗಿ ತಿಳಿಯಲು ಸಾಧ್ಯವಾಗಬೇಕು. ಆಗ ಮಾತ್ರ ಕಾಂಗ್ರೆಸ್ಸನ್ನು ಸೋಲಿಸಿದ ಶಕ್ತಿಗಳು ಅಧಿಕಾರಕ್ಕೆ ಬಂದು ಆಶ್ವಾಸನೆಗಳನ್ನು ಕೊಟ್ಟರೆ ನಡೆಯಲಾರದು. ಅವುಗಳನ್ನು ಜಾರಿಗೆ ತರಲು ಮುಂದಾಗಲೇ ಬೇಕಾಗಿದೆ. ಇಲ್ಲವಾದಲ್ಲಿ ಎಚ್ಚೆತ್ತ ಜನತೆ ಸುಮ್ಮನೆ ಕೂಡಲಾರರು, ಎಡಶಕ್ತಿಗಳು ಸುಮ್ಮನೆ ಕೂಡಲಾರವು ಎಂಬ ಚಾರಿತ್ರಿಕ ವಾಸ್ತವಿಕದ ಹಿನ್ನೆಲೆಯಲ್ಲಿ ರಾಷ್ಟ್ರೀಯ ರಂಗ ಸರಕಾರ ಹಲವಾರು ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಹೆಜ್ಜೆ ಹಾಕಿದೆ. ಅದರಲ್ಲಿ ರೈತರ ಸಾಲ ಮನ್ನಾ ಒಂದಾಗಿದೆ. ರೈತರು ಎತ್ತಿದ ಹೋರಾಟದ ಧ್ವಜವನ್ನು ಕೆಳಗಿಳಿಸದೆ ಹೋದರೆ 'ಸಾಲ ಮನ್ನಾ ಆಗುವದರಲ್ಲಿ ಯಾವ ಅನುಮಾನವಿಲ್ಲ.

ಸಾಲ ಮನ್ನಾಕ್ಕಾಗಿ ನಡೆದ ಚಳುವಳಿಯ ಹಿನ್ನೆಲೆ

ಇಂದು ಸಾಲ ಮನ್ನಾ ಮಾಡಬೇಕೆಂಬ ಪ್ರಶ್ನೆ ದಿಢೀರನೆ ಉದ್ಭವವಾಗಲಿಲ್ಲ. ಬದಲಾಗಿ ಪ್ರಜಾಸತ್ತಾತ್ಮಕ ಶಕ್ತಿಗಳು ಹಲವಾರು ದಶಕಗಳಿಂದ ಹೋರಾಡುತ್ತ ಬಂದಿವೆ.

ಎಡಪಕ್ಷಗಳು ರಾಜೀವ್‌ಗಾಂಧಿಯನ್ನ ರಾಜೀನಾಮೆಗೆ ಕರೆಕೊಟ್ಟಾಗ ಸಕ್ರಿಯ ಪಾತ್ರ ನಿರ್ವಹಿಸಿದ ಅಖಿಲ ಭಾರತ ಕಿಸಾನ ಸಭಾ ಕಳೆದ ಐದು ದಶಕಗಳಿಂದ ಆಳುವ ವರ್ಗಗಳ ರೈತ ವಿರೋಧಿ ಸಾಲ ನೀತಿಯನ್ನು ವಿರೋಧಿಸಿ ಹೋರಾಟ ನಡೆಸುತ್ತ ಬಂದಿದೆ.

1929ರಲ್ಲಿ ಜಗತ್ತಿನಾದ್ಯಂತದ ಆರ್ಥಿಕ ಕುಸಿತದಿಂದಾಗಿ ಎಲ್ಲಾ ಕೃಷಿ ಉತ್ಪನ್ನಗಳ ಬೆಲೆ ಅರ್ಧಕ್ಕಿಂತಲೂ ಕಡಿಮೆಯಾಗಿ ಸಾಲದ ಪ್ರಶ್ನೆ ಭಾರತದಲ್ಲಿ ಗಂಭೀರವಾಗಿ ತಲೆ ಎತ್ತಿತ್ತು. ಆಗಲೇ ರಾಷ್ಟ್ರದ ಎಲ್ಲೆಡೆ ರೈತ ಸಂಘಟನೆ ಹಾಗೂ ಹೋರಾಟಗಳು ತಲೆ ಎತ್ತಿದ್ದವು. ಇದರ ಪರಿಣಾಮವಾಗಿ 1931ರಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಕರಾಚಿ ಅಧಿವೇಶನ ತನ್ನ ಮೂಲಭೂತ ಹಕ್ಕುಗಳ ಠರಾವಿನಲ್ಲಿ ದುಬಾರಿ ಬಡ್ಡಿಕೋರತನದ ಮೇಲೆ ನೇರ ಮತ್ತು ಪರೋಕ್ಷ ಹತೋಟಿಗೆ ಕರೆ ಕೊಟ್ಟಿತು.

ಅಖಿಲಭಾರತ ಕಿಸಾನ ಸಭಾ 1936ರ ತನ್ನ ಸ್ಥಾಪನಾ ಲಕ್ನೋ ಅಧಿವೇಶನದಲ್ಲಿ, ದಮನಕಾರಿ ಗ್ರಾಮೀಣ ಸಾಲ ಮತ್ತು ದುಬಾರಿ ಬಡ್ಡಿ ದರಗಳು, ಕೃಷಿ ಉತ್ಪನ್ನಗಳ ಬೆಲೆಗಳ ಕುಸಿತದಿಂದಾಗಿ ದ್ವಿಗುಣಗೊಂಡಿರುವುದು, ಹೆಚ್ಚಿನ ರೈತರ ಜಮೀನು ದೂರದ ನಗರಗಳಲ್ಲಿರುವ ಭೂಮಾಲೀಕರು, ಸಾಹುಕಾರರು ಹಾಗೂ ನಗರವಾಸಿಗಳ ಕೈಸೇರುತ್ತಿದೆಯೆಂಬುದನ್ನು ಗಮನಿಸಿ ಈ ಕೆಳಗಿನ ತೀರ್ಮಾನಗಳನ್ನು ತೆಗೆದು ಕೊಂಡಿತು.

೧) ಹಳೆಯ ಸಾಲ ಮತ್ತು ಬಡ್ಡಿಗಳ ರದ್ಧತಿ

೨) ಅದುವರೆಗೆ ಐದು ವರ್ಷದ ವಸೂಲಿ ಮುಂದೂಡಿಕೆ

೩) ಸಾಲದಿಂದ ಅಸಲಿನ ಮತ್ತು ಬಡ್ಡಿಯ ಮರುಪಾವತಿಯ ಪ್ರಮಾಣ ಹಾಗೂ ರೈತರ ಆಸ್ತಿ ಮತ್ತು ಹೊರೆಗಳ ಅಂದಾಜಿನ ಬಗ್ಗೆ ತನಿಖೆ.

೪) ಸಾಲ, ಗೇಣಿ ಮತ್ತು ಕಂದಾಯ ತರಲು ಅಸಮರ್ಥ ಎಂಬ ಕಾರಣಕ್ಕೆ ಬಂಧನ ಅಥವಾ ಜೈಲು ಶಿಕ್ಷೆ ವಿಧಿಸಕೂಡದು.

೫) ಸಿವಿಲ್‌ಡಿಕ್ರಿಗಳು ಮತ್ತು ಕಂದಾಯ, ಗೇಣಿ ಡಿಮಾಂಡಗಳ ಜಾರಿಗಾಗಿ ಜಪ್ತಿ ಮಾಡುವಾಗ ಎಲ್ಲಾ ರೀತಿಯ ಕನಿಷ್ಠ ಹಿಡುವಳಿ, ಹಟ್ಟಿ, ಮನೆ, ಮನೆ ಸಾಮಾನು ಜಾನುವಾರುಗಳಿಗೆ ವಿನಾಯ್ತಿ

೬) ಎಲ್ಲಾ ಲೇವಾದೇವಿಗಾರರು ಲೈಸನ್ಸ್ ಪಡೆಯಲೇ ಬೇಕು ೫% ಕ್ಕಿಂತ ಹೆಚ್ಚು ಚಕ್ರ ಬಡ್ಡಿ ವಸೂಲಿ ಮಾಡುವವರಿಗೆ ಶಿಕ್ಷೆ.

೭) ರೈತರ ಆವಶ್ಯಕತೆಗೆ ಆಧಾರವಾಗಿ ಸಾಲದ ವ್ಯವಸ್ಥೆ, ೫% ಸರಳ ಬಡ್ಡಿಯಲ್ಲಿ ಸಾಲ ನೀಡಿ ೧೦ ವಾರ್ಷಿಕ ಕಂತುಗಳಲ್ಲಿ ಮರುಪಾವತಿ

೮) ಗ್ರಾಮೀಣ ಸಾಲದ ಬೆನ್ನು ಮುರಿಯುವ ಹೊರೆಯನ್ನು ನಿವಾರಿಸಬೇಕು. ಈ ಬಗ್ಗೆ ತನಿಖೆ ನಡೆಸಲು ವಿಶೇಷ ಟ್ರಿಬ್ಯುನಲ್‌ಗಳನ್ನು ರಚಿಸಿ, ಅನ್ಯಾಯ ಪುರಾವೆಯಾದ ರೈತನ ಸಾಮರ್ಥ್ಯಕ್ಕೆ ಮೀರಿದ ಸಾಲವನ್ನು ಮನ್ನಾಮಾಡಬೇಕು.

ಇದರ ಪರಿಣಾಮವಾಗಿ ಅಖಿಲ ಭಾರತ ಕಾಂಗ್ರೆಸ್ಸ್ ತನ್ನ ಫೈಜಾಪುರ ಕೃಷಿ ಕಾರ್ಯಕ್ರಮದಲ್ಲಿ, ಹಾಗೂ ಮುಂದೆ ನಡೆದ ಅಸೆಂಬ್ಲಿ ಚುನಾವಣೆಗಳಲ್ಲಿ, ಕಿಸಾನ ಸಭಾ ಕರೆಯನ್ನು ಅಳವಡಿಸಿಕೊಂಡಿತು. ಆದರೆ ತಾನೇ ಸ್ವತಹ ಪ್ರಾಂತೀಯ ಸರಕಾರ ರಚಿಸಿದ್ದರೂ ಅದನ್ನು ಜಾರಿಗೆ ತರಲಿಲ್ಲವೆಂಬುದನ್ನು ಸ್ವಾತಂತ್ರ ಪೂರ್ವದಿಂದಲೇ ಕಾಂಗ್ರೆಸ್‌ನ ವರ್ಗ ಲಕ್ಷಣವನ್ನು ಗಮನಿಸಬೇಕಾಗಿದೆ.

ಕಿಸಾನ ಸಭಾದ ಮುಂದಿನ ಗಯಾ ಹಾಗೂ ಕಣ್ಣೂರಿನ ಅಧಿವೇಶನಗಳಲ್ಲಿ ಹದಿನೈದು ವರ್ಷಗಳಿಗೂ ಮೀರಿದ ಎಲ್ಲಾ ಫಲಭೋಗಿ ಒತ್ತೆಗಳನ್ನು ಬಿಡಿಸಬೇಕು ಹಾಗೂ ಗ್ರಾಮೀಣ ಕೈ ಕಸಬುದಾರರಿಗೆ ಅಗ್ಗದ ಸೌಲಭ್ಯಗಳನ್ನು ನೀಡಬೇಕು ಎಂದು ನಿರ್ಧರಿಸಲಾಯಿತು.

ಮಹಾರಾಷ್ಟ್ರದಲ್ಲಿ ನಡೆದ ೧೨ನೇ ಅಖಿಲ ಭಾರತ ಕಿಸಾನ ಸಭಾ ಅಧಿವೇಶನದಲ್ಲಿ, ಗ್ರಾಮೀಣ ಬಿಕ್ಕಟ್ಟನ್ನು ಗಂಭೀರವಾಗಿ ಚರ್ಚಿಸಿ ಈ ಠರಾವನ್ನು ಸ್ವೀಕರಿಸಿತು - ಗ್ರಾಮೀಣ ಸಾಲ ಹೊರೆಯ ಸಮಸ್ಯೆಗೂ, ಭೂಮಾಲೀಕ ಲೇವಾ ದೇವಿಗಾರರಿಂದ ರೈತರು, ಕೃಷಿ ಕೂಲಿಕಾರರು ಹಾಗೂ ಕೈ ಕಸಬುದಾರರ ಶೋಷಣೆಯನ್ನು ಅಂತ್ಯಗೊಳಿಸುವುದಕ್ಕೂ ಅನನ್ಯ ಸಂಬಂಧವಿದೆ. ಗ್ರಾಮೀಣ ಉತ್ಪಾದಕರ ಉತ್ಪನ್ನಗಳ ಬಹುಪಾಲನ್ನು ಭೂಮಾಲೀಕನಿಗೆ ಲೇವಾದೇವಿಗಾರರ ಬಡ್ಡಿ-ವ್ಯಾಪಾರಿಯ ಲಾಭ ಸರ್ಕಾರದ ವಿವಿಧ ದಮನಕಾರೀ ತೆರಿಗೆಗಳ ಮೂಲಕ ಕಿತ್ತು ಕೊಳ್ಳುವ ವ್ಯವಸ್ಥೆಯನ್ನು ಕೊನೆಗೊಳಿಸಿದಾಗ ಮಾತ್ರವೇ ಸಾಲ ಹೊರೆಯ ಸಮಸ್ಯೆಯ ಒಂದು ನಿಜವಾದ ಶಾಶ್ವತ ಪರಿಹಾರ ಸಾಧ್ಯ ಎಂದು ಕರೆ ಕೊಟ್ಟು, ಅದಕ್ಕಾಗಿ ಗ್ರಾಮೀಣ ಬಡವರು ತಮ್ಮ ಶ್ರಮದ ಫಲ ತಾವೇ ಅನುಭವಿಸಲು ಸಾಧ್ಯವಾಗುವಂತಹ ವರ್ಗ ಪ್ರಜ್ಞೆಯಿಂದ ಕೂಡಿದ ಹೋರಾಟ ರೈತಾಪಿ, ಕೃಷಿ ಕೂಲಿಕಾರರಿಂದ ನಡೆಯಬೇಕೆಂದು ಹೇಳಿದೆ.

ಈ ಹಂತದಲ್ಲಿ ಸಾಲ ಒದಗಿಸುವ ಸಂಸ್ಥೆಗಳೇ ಇರಲಿಲ್ಲ. ಅವುಗಳನ್ನು ರಚಿಸಲು ಅಧ್ಯಯನ ನಡೆಸಿ ಪ್ರಚಾರ ಮಾಡಲು ರಚನೆಗೊಂಡಲ್ಲಿ ಅವುಗಳಲ್ಲಿ ಸಕ್ರಿಯ ಪಾತ್ರಗೊಂಡು ಭೂಮಾಲೀಕ, ಲೇವಾದೇವಿಗಾರರ ಕೈಗೊಂಬೆಗಳಾಗದಂತೆ ನೋಡಬೇಕೆಂದು ಕಿಸಾನ ಸಭಾ ಕರೆ ನೀಡಿತು.

ಆಗಲೇ ಸಹಕಾರಿ ಸಂಘಗಳ ಉಗಮವಾಯಿತು. 1959ರ ಸುಮಾರಿಗೆ 137% ಸಂಘಗಳಲ್ಲಿ ನೀಡಿದ ಸಾಲದ 20% ಹಣ ಮರುಪಾವತಿ ಯಾಗದೆಯಿದ್ದುದನ್ನು ಕಿಸಾನ ಸಭಾ ಗ್ರಾಮೀಣ ಬಿಕ್ಕಟ್ಟಿನ ಪರಿಣಾಮವೆಂದು ಗಮನಿಸಿತು. ಇದು ಮುಂದಿನ ಸಹಕಾರಿ ಚಳುವಳಿಗೆ ಬೆದರಿಕೆಯೊಡ್ಡುವುದೆಂದು ಅಂದಾಜು ಮಾಡಿತು. ಜೊತೆಗೆ ರೈತರ ಉತ್ಪನ್ನವನ್ನು ಸಹಕಾರಿ ಸಂಘಗಳೇ ಖರೀದಿಸಿ, ಖಾಸಗೀ ವ್ಯಾಪಾರಿ ಭೂಮಾಲೀಕರಿಂದ ರಕ್ಷಿಸಲು ಕರೆ ಕೊಟ್ಟಿತು. ಹಾಗೆಯೇ ಸಹಕಾರಿ ಸಂಘಗಳನ್ನು ಭೂಮಾಲೀಕರು ತಮ್ಮ ಬಳಕೆ ಮಾಡುವುದಕ್ಕೆ ಹೆಚ್ಚು ಅವಕಾಶಕೊಟ್ಟ ಕಾಂಗೆಸ್ಸು ನೀತಿಯನ್ನು ಅದು ಒತ್ತಾಯಿಸಿತು.

ತ್ರಿಚೂರ ಅಧಿವೇಶನದಲ್ಲಿ ಗ್ರಾಮೀಣ ಸಾಲದ ಬೇಡಿಕೆ 1000 ಕೋಟಿ ಗೇರಿದೆ, ಅದರಲ್ಲಿ ಕೇವಲ 20% ರಷ್ಟು ಮಾತ್ರ ಸಂಘ ಸಂಸ್ಥೆಗಳಿಂದ ದೊರೆಯುತ್ತಿದೆಯೆಂದು ಹೇಳುತ್ತ ಅದನ್ನು ಕೂಡ ಗ್ರಾಮೀಣ ಪ್ರಾಬಲ್ಯರು ಲಪಟಾಯಿಸುತ್ತಿದ್ದು, ಕಿಸಾನ ಸಭಾ ಮಧ್ಯ ಪ್ರವೇಶಿಸಿ ಹೆಚ್ಚು ಮುತುವರ್ಜಿ ವಹಿಸಲು ಕರೆ ನೀಡಿತು.

1968 ರಲ್ಲಿ ನಡೆದ ಮಧುರೈ ಅಧಿವೇಶನ ಕೃಷಿ ಬಿಕ್ಕಟ್ಟಿನ ಕುರಿತು ಈ ಠರಾವನ್ನು ಮಂಡಿಸಿತು-ಕಾಂಗ್ರೆಸ್ಸಿನ ಆಳರಸರು ಕೈಗಾರಿಕೆ ಮತ್ತು ರಫ್ತಿಗೆ ಸಾಕಾಗುವಷ್ಟು ಹಣದ ಬೆಳೆಗಳು ಹಾಗೂ ಆಹಾರ ಧಾನ್ಯಗಳನ್ನು ಉತ್ಪಾದಿಸಲು ಬೆರಳೆಣಿಕೆಯಷ್ಟಿರುವ ಭೂಮಾಲೀಕ, ಶ್ರೀಮಂತ ರೈತರ ಮೇಲೆ ಅವಲಂಬಿಸಿ, ಅವರಿಗೆ ರಸಗೊಬ್ಬರ, ಬೀಜ ಸಣ್ಣ ನೀರಾವರಿಗೆ ಟ್ರ್ಯಾಕ್ಟರ್ ಕೊಳ್ಳಲು ಸಾಲ ನೀಡುವ ಮುಖಾಂತರ, ಇತರ ಗ್ರಾಮೀಣ ರೈತಾಪಿ ಜನತೆಯನ್ನು ಇದೇ ಹಣದಿಂದ ಲೂಟ ಮಾಡಿತು. ನಗರಗಳಲ್ಲಿ ಅದನ್ನು ಉಪಯೋಗಿಸಿ ಸಟ್ಟಾ ವ್ಯಾಪಾರ ನಡೆಸಲು ಅವಕಾಶ ಮಾಡಿಕೊಡುವ ಮುಖಾಂತರ ಹೆಚ್ಚೆಚ್ಚು ಗ್ರಾಮೀಣ ತೀವ್ರ ಬಿಕ್ಕಟ್ಟಿಗೆ ಕಾರಣವಾಗಿದೆಯೆಂದು ಹೇಳಿತು.

ಬರ್ಸುಲ್‌ನಲ್ಲಿ ನಡೆದ 20ನೇ ಅಧಿವೇಶನವು 1951-52 ರಲ್ಲಿ 900 ಕೋಟಿ ಇದ್ದ ಸಾಲ ಹೊರೆ 1969 ಕ್ಕೆ 2489 ಕೋಟಿಗೇರಿದೆಯೆಂದು ಗಮನಿಸಿ, ವಿಪರೀತ ಖಾಸಗಿ ಲೇವಾದೇವಿಗಾರರಿಗೆ ಬಡ್ಡಿತೆತ್ತು, ಕಡಿಮೆ ಕೂಲಿಗೆ ದುಡಿದು, ತಮ್ಮ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರುವಂತಾಗಿ, ಕೊಳ್ಳುವ ಶಕ್ತಿಯನ್ನೇ ರೈತರು ಕಳೆದುಕೊಂಡಿದ್ದಾರೆ ಎಂದು ತಿಳಿಸಿತು. ಗ್ರಾಮೀಣ ಭಾರತದ ಆದಾಯ ಮತ್ತು ಸಂಪತ್ತಿನಲ್ಲಿರುವ ಅಸಮಾನತೆ ಉಲ್ಬಣಗೊಂಡಿದ್ದು, ಈ ಕೂಡಲೇ ಸಾಲದ ಬಾಕಿಯ ಹೊರೆಯನ್ನು ಇಳಿಸಿ ಅಗ್ಗ ಬಡ್ಡಿದರದಲ್ಲಿ ಹೊಸ ಸಾಲದ ಸೌಲಭ್ಯ ಒದಗಿಸದಿದ್ದಲ್ಲಿ ಹಸಿರು ಕ್ರಾಂತಿಯ ಮಾತು ಶುದ್ಧ ಮೋಸವಾಗುತ್ತದೆಂದು ಅದಕ್ಕಾಗಿ (1) ಬಡ ರೈತರು ಮತ್ತು ಕೃಷಿ ಕೂಲಿಕಾರರ ಸಾಲ ಮರು ಪಾವತಿಯ ಮುಂದೂಡಿಕೆ ಅವರು ಲೇವಾದೇವಿಗಾರರಿಗೆ, ಮತ್ತು ಭೂಮಾಲೀಕರಿಗೆ ಕೊಡಬೇಕಾದ ಸಾಲದ ಪ್ರಮಾಣವನ್ನು ಇಳಿಸಲು ಹಾಗೂ ರದ್ದು ಮಾಡಲು ಕರೆ ಕೊಟ್ಟಿತು. (2) ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಮೇಳಗಳಲ್ಲಿ ಸಾಕಷ್ಟು ಪ್ರಮಾಣವನ್ನು ಗ್ರಾಮೀಣ ಸಾಲ ನೀಡಿಕೆಗಾಗಿ ಮೀಸಲಿಡಬೇಕು. ಇದರಲ್ಲಿ 75% ರಷ್ಟನ್ನು ಬಡರೈತ ಮತ್ತು ಮಧ್ಯಮ ರೈತರು ಜಮೀನು ಹೊಂದಿರಲೇಬೇಕು ಅಥವಾ ಕಡ್ಡಾಯವಾಗಿ ಕೆಲವು ಕೃಷಿ ಸಾಮಗ್ರಿಗಳನ್ನು ಕೊಳ್ಳಲೇ ಬೇಕು ಎಂಬ ಶರತ್ತು ಹಾಕದೆ ಅಗ್ಗ ಬಡ್ಡಿ ದರ ಸಾಲ ನೀಡಡಲು ಕರೆ ನೀಡಿತು.

ರೂರ್ಕೆಲಾದಲ್ಲಿ ಸೇರಿದ 21ನೇ ಅಧಿವೇಶನ 'ಬ್ಯಾಂಕ್' ರಾಷ್ಟ್ರೀಕರಣ ಮುಂತಾದ ಕ್ರಮಗಳು ದೊಡ್ಡ ಭೂಮಾಲೀಕರು ಮತ್ತು ಶ್ರೀಮಂತ ರೈತರ ಸ್ಥಾನವನ್ನು ಇನ್ನಷ್ಟು ಬಲಗೊಳಿಸಿ ಗ್ರಾಮೀಣ ಪ್ರದೇಶಗಳಲ್ಲಿ ಬಂಡವಾಳ ಶಾಹಿಯ ಬೆಳವಣಿಗೆಯನ್ನು ತ್ವರಿತಗೊಳಿಸುತ್ತದೆ ವಿನಹ ಗ್ರಾಮೀಣ ಸಾಲದ ಸಮಸ್ಯೆಯ ಅಂಚನ್ನು ಕೂಡ ಮುಟ್ಟಲಿಲ್ಲವೆಂದು ಗುರುತಿಸಿ, ಅರೆ ಊಳಿಗಮಾನ್ಯ ಭೂ ಸಂಬಂಧಗಳನ್ನು ಅಂತ್ಯಗೊಳಿಸದೆ ಕೃಷಿ ಸಾಲದ ವಿಸ್ತರಣೆ ಜಮೀನು ಆಸ್ತಿಯನ್ನು ಒಂದು ಲಾಭದ ಮೂಲವನ್ನಾಗಿ ಮಾಡಿ ಅದರ ಬೆಲೆ ಏರಿಸುವಲ್ಲಿ ಸಹಾಯವಾಗಿದೆ.

ಗ್ರಾಮೀಣ ಭೂಮಾಲೀಕ, ಶ್ರೀಮಂತ ರೈತಾಪಿ ವಿಭಾಗ ಆರ್ಥಿಕ ಪ್ರಾಬಲ್ಯ ಪಡೆದು, ಉಳಿದ ಬಹು ಸಂಖ್ಯಾತರು ತೀವ್ರ ಶೋಷಣೆಗೆ ಒಳಪಟ್ಟು, ಕೃಷಿ ಕೂಲಿಕಾರರು ಅರೆ ಗುಲಾಮ ಪರಿಸ್ಥಿತಿಗೆ ಇಳಿದಿದ್ದಾರೆ. ಹಿಂದಿನ ಲೇವಾದೇವಿಗಾರರ ಸ್ಥಾನವನ್ನು ಭೂಮಾಲೀಕ ಶ್ರೀಮಂತ ರೈತರು ಆಕ್ರಮಿಸಿಕೊಂಡಿದ್ದು, ಗ್ರಾಮದ ಎಲ್ಲಾ ಉತ್ಪಾದನೆಯನ್ನು ಅತೀ ಕಡಿಮೆ ಬೆಲೆಯಲ್ಲಿ ಕಬಳಿಸುವ ಮುಖಾಂತರ ಇನ್ನು ಹೆಚ್ಚಿನ ಗ್ರಾಮೀಣ ಬಿಕ್ಕಟ್ಟಿಗೆ ಕಾರಣಯಾಗಿದೆಯೆಂದು ಗುರುತಿಸಿತು.

ಸಿಕಾರದಲ್ಲಿ ನಡೆದ ೨೨ನೇ ಅಧಿವೇಶನ, ಹಿಂದಿನ ಪರಿಸ್ಥಿತಿಯ ಮುಂದುವರಿಕೆಯ ಜೊತೆ ಜೀವನಾವಶ್ಯಕ ಸಾಮಗ್ರಿಗಳ ಬೆಲೆಯಲ್ಲಿ ತ್ವರಿತ ಹೆಚ್ಚಳ ಮತ್ತು ಹೆಚ್ಚುತ್ತಿರುವ ನಿರುದ್ಯೋಗದೊಂದಿಗೆ ಕೃಷಿ ಕೂಲಿಕಾರರ ಸಾಲ ಹೊರೆ ವೇಗದಿಂದ ಹೆಚ್ಚುತ್ತಿದೆ. ಇದನ್ನು ತಡೆಯಲು ಕರೆ ಕೊಡುತ್ತ ಕೃಷಿ ಕೂಲಿಕಾರರಿಗೆ ಜಾನುವಾರು, ಕೃಷಿ ಸಲಕರಣೆಗಳನ್ನು ಖರೀದಿಸಲು ಅಥವಾ ಬಾಡಿಗೆ ಪಡೆಯಲು ಹಾಗೂ ಸಾಕಷ್ಟು ಪ್ರಮಾಣದಲ್ಲಿ ಬೀಜ, ರಸಗೊಬ್ಬರ, ಕ್ರಿಮಿನಾಶಕ ಇತ್ಯಾದಿಗಳಿಗಾಗಿ ಬಡ್ಡಿ ರಹಿತ ಸಾಲ ಒದಗಿಸಲು

ತುರ್ತು ಪರಿಸ್ಥಿತಿ ಹೆಚ್ಚಿದ ಗ್ರಾಮೀಣ ಬಿಕ್ಕಟ್ಟು

ಕಾಂಗ್ರೆಸ್ಸಿನ ಗುತ್ತೇದಾರಿ ನೀತಿಯಿಂದಾಗಿ ತಲೆದೋರಿದ ಆರ್ಥಿಕ ತೀವ್ರ ಬಿಕ್ಕಟ್ಟನ್ನು ಎದುರಿಸಲು ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಮಾರ್ಗೋಪಾಯಗಳನ್ನು ಸೂಚಿಸುವ ಬದಲು ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮರ್ದನ ಮಾಡಲು ತುರ್ತು ಪರಿಸ್ಥಿತಿ ಹೇರಲಾಯಿತು. ಗುತ್ತೇದಾರಿಗಳಿಗೆ ದೊಡ್ಡ ಪ್ರಮಾಣದಲ್ಲಿ ಜನತೆಯ ದುಡಿಮೆಯನ್ನು ಲೂಟ ಮಾಡಲು ಅವಕಾಶ ಕಲ್ಪಿಸಲಾಯಿತು. ಇದರಿಂದ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಂಡಿತು. ಗ್ರಾಮೀಣ ಬಡವರ ಜೊತೆ, ಎಲ್ಲಾ ರೈತಾಪಿ ವಿಭಾಗಗಳು, ತಮ್ಮ ಬೆಳೆದ ಮಾಲಿಗೆ ಬೆಲೆಯಿಲ್ಲದೆ, ಬಂಡವಾಳಶಾಹಿ ಉತ್ಪಾದಕ ವಸ್ತುಗಳಿಗೆ ಹೆಚ್ಚು ಬೆಲೆ ಕೊಟ್ಟು, ಸರಕಾರದ ಹೆಚ್ಚಿನ ತೆರಿಗೆಯಿಂದಾಗಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಸ್ಫೋಟಕ ಪರಿಸ್ಥಿತಿಗೆ ಮುಟ್ಟಿದೆಯೆಂದು ಕಿಸಾನ್ ಸಭಾದ 1979ರ ವಾರಣಾಸಿ ಅಧಿವೇಶನದಲ್ಲಿ ಗುರುತಿಸಿ ಸಾಲದ ಹೊರೆ 6000 ಕೋಟಿ ಗೇರಿದೆ. ಈ ಸಮಸ್ಯೆ ಬಡ ಮತ್ತು ಮಧ್ಯಮ ರೈತರ ಕೃಷಿಕೂಲಿಕಾರರ ಸಮಸ್ಯೆ ಮಾತ್ರ ಎಂದು ಪರಿಗಣಿಸಬಾರದು, ಬದಲಾಗಿ ಅದು ಇಡೀ ರೈತಾಪಿ ವರ್ಗ ಎದುರಿಸುತ್ತಿರುವ ಒಂದು ಪ್ರಮುಖ ಸಮಸ್ಯೆಯಾಗಿದ್ದು ಆದಕ್ಕಾಗಿ ವಿಶಾಲ ಹೋರಾಟಗಳನ್ನು ರೂಪಿಸಬೇಕು. ಇಲ್ಲವಾದಲ್ಲಿ ಭೂ ಮಾಲೀಕ ಶಕ್ತಿಗಳೇ ರೈತರ ಬಿಕ್ಕಟ್ಟನ್ನು ತಮ್ಮ ಮೂಗಿನ ನೇರಕ್ಕೆ ಬಳಸಿಕೊಳ್ಳುತ್ತವೆಂದು ತಿಳಿಸಿತು.

> ಹತ್ತು ಸಾವಿರ ರೂಪಾಯಿ ಸಾಲಮನ್ನಾವಾಗಲೇಬೇಕು ಜೊತೆಗೆ ಗ್ರಾಮೀಣ ಸಾಲನೀತಿಯಲ್ಲಿ ವ್ಯಾಪಕ ಬದಲಾವಣೆಗಳಾಗಬೇಕು. ಸಹಕಾರಿ ಚಳುವಳಿಯಲ್ಲಿ ಬಹುಪಾಲು ರೈತರು ಪಾಲುಗೊಳ್ಳುವಂತಾಗಬೇಕು. ಅರ್ಥ ಸಂಪನ್ಮೂಲವನ್ನು ಗ್ರಾಮೀಣ ಪ್ರದೇಶಕ್ಕೆ ವಿನಿಯೋಗಿಸುವ ವಚನ ಜಾರಿಗೆ ಬರಬೇಕು.

ನರಗುಂದ ಚಳುವಳಿ

ವಾರಣಾಸಿ ಕರೆಯ ನೇರ ಹೋರಾಟವೆಂಬಂತೆ ರಾಜ್ಯದಲ್ಲಿ ವಿಶಾಲ ರೈತಾಪಿ ವಿಭಾಗ ಬೆಲೆ ಹಾಗೂ ಸಾಲ ಮನ್ನಾ ಪ್ರಶ್ನೆಯ ಮೇಲೆ ಮಲಪ್ರಭಾ ರೈತರ ಬೃಹತ್ ಚಳುವಳಿ ಭುಗಿಲೆದ್ದಿತು. ಹಾಗೆಯೇ ಮಹಾರಾಷ್ಟ್ರ, ಪಂಜಾಬ್, ಉತ್ತರ ಭಾರತ, ತಮಿಳುನಾಡಿನಲ್ಲಿ ದೊಡ್ಡ ವಿಭಾಗದ ರೈತಾಪಿ ವರ್ಗ ಬೀದಿಗಿಳಿದಿದ್ದು ಕಾಣುತ್ತದೆ.

ಈ ಹೋರಾಟಗಳ ಪರಿಣಾಮವಾಗಿ ರಾಜ್ಯದಲ್ಲಿ ಅಂದಿನ ಕಾಂಗ್ರೆಸ್ ಸರಕಾರ 100/-ಕೋಟಿಯಷ್ಟು ಪರಿಹಾರಕೊಡಬೇಕಾದ ಒತ್ತಡಕ್ಕೆ ಒಳಗಾಯಿತು. ಅದೇ ಬಿಸಿಯಲ್ಲಿ ವಿಧಾನ ಸಭೆಗೆ ಚುನಾವಣೆ ನಡೆದು ಕಾಂಗ್ರೆಸ್ಸ್ ಸರ್ಕಾರ ಅಧಿಕಾರ ಕಳೆದುಕೊಳ್ಳಬೇಕಾಯಿತು.

ಬಹು ಸಂಖ್ಯಾತ ರೈತರ ಅತೃಪ್ತಿಯ ಪ್ರತಿಭಟನೆಯ ಅಲೆಯಲ್ಲಿ ಕಾಂಗ್ರೆಸ್ಸ್ ಸೋತು ಜನತಾಪಕ್ಷ ಅಧಿಕಾರಕ್ಕೆ ಬಂತು.

ರೈತರ ಸಾಲದ ಪ್ರಶ್ನೆಗೆ ಗಮನ

ರೈತಾಪಿ ಜನತೆಯ ಅಂತರಾಳವನ್ನು ಸ್ಪಂದಿಸಲು ಅಂದಿನ ಜನತಾ ಸರ್ಕಾರ, ಸಹಕಾರಿ ಸಾಲದ ಬಡ್ಡಿ ಮನ್ನಾ ಬಾವಿಯ ಸಾಲ ಮನ್ನಾ, ದಂತಹ

ಸಾಲಮನ್ನಾ ಧಿಡೀರನೆ ಉದ್ಭವವಾದ ಪ್ರಶ್ನೆಯಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಇದಕ್ಕಾಗಿ ದಶಕಗಳ ಕಾಲ ಹೋರಾಡುತ್ತಾ ಬಂದಿವೆ. ಅದರ ಚಿತ್ರಣ ಇಲ್ಲಿದೆ.

ಚಳುವಳಿಯಲ್ಲಿ ಅಂತಹ ಬದಲಾವಣೆ ತರಲು ಸಾಲದ ಸಮಸ್ಯೆ ಅದರಿಂದಾಗುವ ಪರಿಣಾಮಗಳ ಕುರಿತು, ಅದು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

ಎಡ ಪಕ್ಷಗಳ ನೇತೃತ್ವ ವಹಿಸಿರುವ ಸರ್ಕಾರಗಳು ಮತ್ತು ಸಾಲದ ಪ್ರಶ್ನೆ

ಪಶ್ಚಿಮ ಬಂಗಾಳ, ಕೇರಳಾ, ತ್ರಿಪುರಾ ರಾಜ್ಯಗಳಲ್ಲಿ ೧೯೮೦ರ ಕಾಲ ಘಟ್ಟದಲ್ಲಿ ಆಡಳಿತಕ್ಕೆ ಬಂದ ಸಿ.ಪಿ.ಐ.(ಎಂ) ನೇತೃತ್ವದ ಎಡ ಮತ್ತು ಪ್ರಜಾಪ್ರಭುತ್ವ ರಂಗ ಸರ್ಕಾರಗಳು, ರೈತ ಕಾರ್ಮಿಕರ ಹೋರಾಟದ ಪ್ರತಿಫಲವಾಗಿತ್ತು.

ಬಡ ರೈತ ಮತ್ತು ಕೃಷಿ ಕೂಲಿಕಾರರ ಸಾಲ ಮನ್ನಾ, ಬಡ್ಡಿ ಮನ್ನಾ ಮಾಡಿದ್ದಲ್ಲದೆ, ಗ್ರಾಮದ ಬಹು ಸಂಖ್ಯಾತರಾದ ಗ್ರಾಮೀಣ ಬಡವರನ್ನು ಸಹಕಾರಿ ಸಂಸ್ಥೆಯ ಸದಸ್ಯರನ್ನಾಗಿ ಮಾಡುವ ಚಳುವಳಿಯನ್ನೇ ರೂಪಿಸಿದವು. ಜೊತೆಗೆ ಪ್ರತಿವರ್ಷ ಜೂನ್ ೩೦ ರೊಳಗೆ ಸಾಲ ಮರುಪಾವತಿ ಮಾಡುವ ಬಡ ರೈತ, ಕೃಷಿ ಕೂಲಿಕಾರರಿಗೆ ಬಡ್ಡಿಯಿಂದ ವಿನಾಯಿತಿ ನೀಡಿ, ಸರ್ಕಾರವೇ ಆ ಬಡ್ಡಿಯನ್ನು ತುಂಬಿಸಿಕೊಳ್ಳುವ ಪರಿಪಾಠ ಹಾಕಿತು. ಇದರಿಂದಾಗಿ ಗ್ರಾಮೀಣ ಬಡವರು ಭೂಮಾಲೀಕರು ನೀಡುವ ದುಬಾರಿ ಬಡ್ಡಿಯ ಸಾಲಕ್ಕಾಗಿ ಕಾಯುವ ಮುಲಾಜಿನಿಂದ ವಿಮುಕ್ತಿಯನ್ನು ಪಡೆಯಲು ಸಾಧ್ಯವಾಯಿತು. ಇದರ ಪರಿಣಾಮವಾಗಿ, ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಭಾರಿದೊಡ್ಡ ಸಾಧನೆಯನ್ನು ಸಾಧಿಸಲು ಸಾಧ್ಯವಾಗಿದ್ದು, ಗ್ರಾಮೀಣ ಸಂಸ್ಥೆಗಳಾದ ಪಂಚಾಯಿತಿ ಸೇರಿದಂತೆ ಸಹಕಾರ ಸಂಸ್ಥೆಗಳಲ್ಲಿ 80% ರಷ್ಟು ಕೃಷಿ ಕೂಲಿಕಾರರು ಬಡರೈತ, ಮಧ್ಯಮ ರೈತರು ಅಧಿಕಾರಕ್ಕೆ ಬರಲು ಸಾಧ್ಯವಾಯಿತು. ಇದು ಇಡೀ ರಾಷ್ಟ್ರದ ಮೇಲೆ ದೊಡ್ಡ ಪ್ರಭಾವ ಬೀರಲು ಸಾಧ್ಯವಾಗಿದೆ

ಈ ಅನುಭವದ ಆಧಾರದಲ್ಲಿ ಹರಿಯಾಣಾದ ದೇವಿಲಾಲರು ಸಾಲ ಮನ್ನಾ ಪ್ರಶ್ನೆಯ ಮೇಲೆ ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರಕ್ಕೆ ಬಂದದ್ದು. ಅದರ ಮುಂದುವರಿಕೆಯಾಗಿ ಕಾಂಗ್ರೆಸ್ಸಿನ ಸರ್ವಾಧಿಕಾರಿ ಧೋರಣೆಯನ್ನು ಸೋಲಿಸಿ ರಾಷ್ಟ್ರೀಯ ರಂಗ ಸರ್ಕಾರ ಆಡಳಿತಕ್ಕೆ ಬಂದಿದೆ.

ಎಡ ಶಕ್ತಿಗಳ ಬೆಂಬಲದೊಂದಿಗೆ ಅಧಿಕಾರದಲ್ಲಿರುವ ರಾಷ್ಟ್ರೀಯ ರಂಗ ಸರ್ಕಾರ ತನ್ನ ಪ್ರಣಾಳಿಕೆಯನ್ನು ಜಾರಿ ಮಾಡುವ ಒತ್ತಡಕ್ಕೆ ಒಳಗಾಗಿದೆ. ಅದರ ಆಧಾರದಲ್ಲಿ ಸಾಲ ಮನ್ನಾ ಪ್ರಶ್ನೆಯನ್ನು ಈಗಾಗಲೇ ಘೋಷಿಸಿದೆ.


ನಿರಂತರವಾಗಿ ರೈತ ವಿರೋಧಿ ನೀತಿ ತಾಳಿದ ಕಾಂಗ್ರೆಸ್ಸ್ ಸಾಲ ಮನ್ನಾ, ಬಡ್ಡಿ ಮನ್ನಾ, ವಿರೋಧಿಸಲು ನಬಾರ್ಡನ್ನು ಬಳಸುತ್ತಾ ಬಂದಿದೆ, ಇಂದು ಅದರ ಧೋರಣೆಯನ್ನು ರಾಷ್ಟ್ರೀಯ ರಂಗ ಸರ್ಕಾರ ಬದಲಾವಣೆ ಮಾಡಲು ಒತ್ತಾಯಿಸಬೇಕಾಗಿದೆ.

ಕೃಷಿಯಲ್ಲಿ ಬಂಡವಾಳಶಾಹೀಕರಣ ಹೆಚ್ಚಿರುವ ಈ ಕಾಲ ಘಟ್ಟದಲ್ಲಿ, ಹಣದ ಬಳಕೆಯಿಂದಾಗಿ ಸಾಲದ ಅವಶ್ಯಕತೆ ಹೆಚ್ಚಾಗಿದೆ. ರಾಷ್ಟ್ರದಲ್ಲಿ ಶೇಖರಣೆಯಾಗಿರುವ ಒಟ್ಟು ಬ್ಯಾಂಕಿನ ಸೇವಿಂಗ್ಸ್‌ನಲ್ಲಿ ಕೇವಲ 15% ರಷ್ಟು ಮಾತ್ರ ಗ್ರಾಮೀಣ ಪ್ರದೇಶಕ್ಕೆ ಒದಗಿಸಲಾಗುತ್ತಿದೆ. ಸಾಲ ಮರುಪಾವತಿ ಮಾಡದವರಿಗೆ ಸಾಲವಿಲ್ಲವೆಂಬ ನೀತಿಯಿಂದಾಗಿ ಈಗಾಗಲೇ 40% ರಿಂದ 42% ರೈತರು ಡಿಫಾಲ್ಟದಾರರಾಗಿದ್ದಾರೆ ಜೊತೆಗೆ ಜಮಾನತ್ತು ಹಾಗೂ ಆಸ್ತಿ ಇಲ್ಲದವರಿಗೆ ಸಾಲ ಕೊಡದೆಯಿರುವ ನೀತಿಯಿಂದಾಗಿ, ಈಗ ಒದಗಿಸುವ ಹೆಚ್ಚಿನ ಭಾಗ ಗ್ರಾಮೀಣ ಶ್ರೀಮಂತರ ಭಾಗವೇ ಕಬಳಿಸುತ್ತದೆ.

ಇದೇ ಹಣದ ಒಂದು ಭಾಗವನ್ನು, ಗ್ರಾಮೀಣ ಬಡವರಿಗೆ ಹೆಚ್ಚಿನ ಬಡ್ಡಿಗೆ ಸಾಲ ಕೊಡಲು, ಜೊತೆಗೆ ನಗರದಲ್ಲಿ ವ್ಯಾಪಾರ ನಡೆಸಲು ಬಳಸಲಾಗುತ್ತದೆ.

ಗ್ರಾಮೀಣ ಪ್ರದೇಶದ 60% ರಷ್ಟು ಜನ ಕೊಳ್ಳುವ ಶಕ್ತಿ ಕಳೆದುಕೊಂಡಿರುವಾಗ, ಹೆಚ್ಚಿನ ಭೂಮಿ, ಹಣ ಗ್ರಾಮೀಣ ಭೂಮಾಲಿಕರ ಕೈಯಲ್ಲಿ ಕೇಂದ್ರಿಕೃತವಾಗಿದ್ದರ ಪರಿಣಾಮವಾಗಿ, ಪಾಳೇಗಾರಿ, ಪ್ರತೀಗಾಮಿ, ಕೋಮುವಾದಿ ವಿಚಾರಗಳಿಗೆ ಪ್ರಾಮುಖ್ಯತೆ ಸಿಗುತ್ತಿದೆ. ಇದರಿಂದಾಗಿ ಇಂದು ಕೋಮುವಾದದ ದಳ್ಳುರಿ ಎಲ್ಲೆಡೆ ಹಬ್ಬಿ ರಾಷ್ಟ್ರೀಯ ಐಕ್ಯತೆ ಹಿಂದೆಂದೂ ಇಲ್ಲದಷ್ಟು ಗಂಭೀರ ರೂಪ ತಾಳಿದೆ.

ಈ ಹಿನ್ನೆಲೆಯಲ್ಲಿ ಒಂದೆಡೆ 10,000 ರೂ ವರೆಗಿನ ಸಾಲ ಮನ್ನಾವಾಗಲೇ ಬೇಕು. ಜೊತೆಗೆ ಗ್ರಾಮೀಣ ಸಾಲ ನೀತಿಯಲ್ಲಿ ವ್ಯಾಪಕ ಬದಲಾವಣೆಗಾಗಿ ಒತ್ತಾಯಿಸಬೇಕಾಗಿದೆ, ಸಹಕಾರಿ ಚಳುವಳಿಯಲ್ಲೆ ಬಹು ಸಂಖ್ಯಾತ ರೈತರು ಪಾಲುಗೊಳ್ಳುವಂತಾಗಬೇಕು, ಖಾಸಗೀ ಲೇವಾದೇವಿಗಾರರ ಮೇಲಿನ ಅವಲಂಬನೆ ತಪ್ಪಿಸುವಂತಾಗಬೇಕು. ರಾಷ್ಟ್ರದ ಸಂಪನ್ಮೂಲದ ಅರ್ಧಭಾಗವನ್ನು ಗ್ರಾಮೀಣ ಪ್ರದೇಶಕ್ಕೆ ಉಪಯೋಗಿಸುವುದಾಗಿ ಹೇಳುತ್ತಿರುವ ರಾಷ್ಟ್ರೀಯ ರಂಗ ಸರ್ಕಾರ ಜಾರಿಗೆ ತರುವಂತೆ ಒತ್ತಾಯಿಸಬೇಕಾಗಿದೆ. ಈ ಸೌಲಭ್ಯಗಳೆಲ್ಲ ಗ್ರಾಮೀಣ ಬಹುಸಂಖ್ಯಾತ ರೈತರಿಗೆ, ಕೃಷಿಕೂಲಿಕಾರರಿಗೆ ಸಿಗಬೇಕಾದಲ್ಲಿ, ರಾಷ್ಟ್ರೀಯ ಐಕ್ಯತೆ ಕಾಪಾಡಬೇಕಾದಲ್ಲಿ ಇಂದು ಭೂಮಾಲೀಕ ಶಕ್ತಿಯನ್ನು ದಮನ ಮಾಡಬೇಕಾಗಿದೆ. ಕಾರಣ ಸಾಲದ ಪ್ರಶ್ನೆಯ ಜೊತೆಗೆ, ಪ್ರಗತಿಪರ ಭೂಸುಧಾರಣೆಯ ಪ್ರಶ್ನೆಯೂ ಒಳಗೊಂಡಿದೆ, ಆದಕ್ಕಾಗಿ ಭೂಮಾಲೀಕ ಶಕ್ತಿಯನ್ನು ಪ್ರತ್ಯೇಕಿಸಿ ಉಳಿದೆಲ್ಲಾ ರೈತಾಪಿ ವಿಭಾಗವನ್ನು ಕೃಷಿ ಕೂಲಿಕಾರ, ಬಡರೈತರ ನೇತೃತ್ವದಲ್ಲಿ ಅಣಿನೆರೆಸುವುದು ಅತ್ಯವಶ್ಯವಾಗಿದೆ. ಕಾರಣ ಕೃಷಿ ಕಾರ್ಮಿಕರ, ಬಡರೈತರ ಜೊತೆಗೆ ಉಳಿದೆಲ್ಲಾ ರೈತರನ್ನು ವಿಶಾಲವಾಗಿ ಇಂದು ಸಾಲದ ಪ್ರಶ್ನೆಯ ಮೇಲೆ ವ್ಯಾಪಕ ಚಳುವಳಿಗೆ ಇಳಿಸುವುದು ತುರ್ತಿನ ಪ್ರಶ್ನೆಯಗಿದೆ.



ಶಾಂತಿ ಪ್ರಜಾಪ್ರಭುತ್ವ, ಸಾಮಾಜಿಕ ಪ್ರಗತಿಯ ಶಕ್ತಿಗಳನ್ನು ಬಲಗೊಳಿಸಿದ

ಚೀಣಿ ಪ್ರಧಾನಿಯ ಸೋವಿಯೆತ್ ಭೇಟಿ

25 ವರ್ಷಗಳ ನಂತರ ಚೀಣ ಪ್ರಧಾನ ಮಂತ್ರಿಯೊಬ್ಬರು ಮತ್ತೊಮ್ಮೆ ಸೋವಿಯೆತ್ ಒಕ್ಕೂಟಕ್ಕೆ ನೀಡಿದ್ದಾರೆ. 1964 ರಲ್ಲಿ ಚೌಎನ್‌ಲೈ ಸೋವಿಯೆತ್ ಒಕ್ಕೂಟಕ್ಕೆ ಭೇಟಿ ನೀಡಿದ್ದರು. ಚೀಣೀ ಪ್ರಧಾನಿ ಲಿಪೆಂಗ್ ತಮ್ಮ ಭೇಟಿ ಕಾಲದಲ್ಲಿ, ಸೋವಿಯೆತ್ ಪ್ರಧಾನಿ ನಿಕೋಲ್ಯಾರಿಝ್ಕೋವ್ ಹಾಗೂ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಸೋವಿಯೆತ್ ರಾಷ್ಟ್ರಾಧ್ಯಕ್ಷ ಮಿಖ್ಯಾಯಿಲ್ ಗೋರ್ಬಚೆವ್‌ರನ್ನು ಭೇಟಿಯಾದರು.

ಕಳೆದ ವರ್ಷ ಗೋರ್ಬಚೆವ್‌ರವರ ಬೈಜಿಂಗ್ ಭೇಟಿ ಇವೆರಡು ದೊಡ್ಡ ಸಮಾಜವಾದಿ ದೇಶಗಳ ನಡುವೆ, ಎರಡು ದೊಡ್ಡ ಕಮ್ಯುನಿಸ್ಟ್ ಪಕ್ಷಗಳ ನಡುವೆ ಸಂಬಂಧಗಳ ಮರುಸ್ಥಾಪನೆ ಮಾಡಿದ ಚಾರಿತ್ರಿಕ ಘಟನೆಯಾಗಿತ್ತು. ತನ್ನ ಪ್ರಸ್ತುತ ಭೇಟಿ ರಾಜಕೀಯ, ಆರ್ಥಿಕ, ವೈಜ್ಞಾನಿಕ, ಸಾಂಸ್ಕೃತಿಕ ಮತ್ತಿತರ ರಂಗಗಳಲ್ಲಿ ದ್ವಿಪಕ್ಷೀಯ ಸಂಬಂಧಗಳಿಗೆ ಒಂದು ಹೊಸ ಚೈತನ್ಯ ನೀಡಿದೆ ಎಂದು ಲಿಪೆಂಗ್ ಹೇಳಿದರು. ಕಳೆದ ವರ್ಷದ ಶೃಂಗ ಸಭೆಯಲ್ಲಿ ನಡೆದ ಮೂಲಭೂತ ಒಪ್ಪಂದ ಗಳನ್ನು ನೆರವೇರಿಸುವ ಜಂಟಿ ಪ್ರಯತ್ನ ಇದು ಎಂದು ಗೋರ್ಬಚೆವ್ ತಮ್ಮೆರಡು ದೇಶಗಳ ನಡುವಿನ ಸಂಬಂಧಗಳ ಮುನ್ನಡೆಯನ್ನು ಸ್ವಾಗತಿಸಿದರು.

ಪೂರ್ವ ಯುರೋಪಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಇವೆರಡು ದೊಡ್ಡ ಸಮಾಜವಾದಿ ದೇಶಗಳ ನಡುವಿನ ಸಂಬಂಧಗಳು ಬಲಗೊಳ್ಳುತ್ತಿರುವುದನ್ನು ನಾವು ಕಾಣುತ್ತಿರುವುದು ಸಂತೋಷದ ಸಂಗತಿ.

ಪರಸ್ಪರ ಆಸಕ್ತಿಯ ವಿಷಯಗಳಲ್ಲದೇ ಈ ಎರಡು ಸಮಾಜವಾದಿ ದೇಶಗಳಮುಖಂಡರು ತಂತಮ್ಮ ದೇಶಗಳಲ್ಲಿನ ಸುಧಾರಣಾ ಪ್ರಕ್ರಿಯೆಯನ್ನು ಚರ್ಚಿಸಿದರು."ಸಮಾಜವಾದಿ ಆಯ್ಕೆಗೆ ಬದ್ಧರಾಗಿದ್ದುಕೊಂಡು "ಪೆರೆಸ್ತ್ರೋಯಿಕಾ ಅನುಷ್ಠಾನಗೊಳಿಸುವ ಬಗ್ಗೆ ಗೋರ್ಬಚೆವ್ ಹೇಳಿದರೆ, ನಾಲ್ಕು ಮೂಲಭೂತ ನೀತಿಗಳಿಗೆ ಬದ್ಧವಾಗಿದ್ದು, ಸಾಮಾಜಿಕ ಸ್ಥಿರತೆ ಕಾಪಾಡುತ್ತಾ "ಸುಧಾರಣೆ ಮತ್ತು ತೆರೆದಬಾಗಿಲಿನ "ಧೋರಣೆ ಅನುಸರಿಸುವುದು ಚೀಣಾಕ್ಕೆ ಅನಿವಾರ್ಯ ಎಂದರು ಲಿಪೆಂಗ್. ಸಮಾಜವಾದಿ ವಿಚಾರಗಳನ್ನು, ನೀತಿಗಳನ್ನು ಅನುಷ್ಠಾನಕ್ಕೆ ತರುವ ಸ್ಥಿರ ಹಾಗೂ ಸಾರ್ವತ್ರಿಕ ಸೂತ್ರಗಳೇನೂ ಇಲ್ಲ ಎಂದು ಇಬ್ಬರೂ ಮುಖಂಡರು ಒಪ್ಪಿಕೊಂಡರು. ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳನ್ನು ನಿವಾರಿಸುವ ಬಗ್ಗೆ, ನಾವು ಮೊದಲು ನ್ಯೂಕ್ಲಿಯರ್ ಶಸ್ತ್ರಾಸ್ತ್ರ ಬಳಸುವುದಿಲ್ಲ ಎಂಬ ವಚನಬದ್ಧತೆ ಬಗ್ಗೆ ಎರಡೂ ದೇಶಗಳ ನಡುವೆ ಸಮಾನ ಅಭಿಪ್ರಾಯ ಇರುವುದು ಈ ಮಾತುಕತೆಗಳ ಸಮಯದಲ್ಲಿ ಕಂಡುಬಂತು.

ಮೂರುದಿನಗಳ ಮಾತುಕತೆಯ ನಂತರ ಎರಡೂ ದೇಶದ ಪ್ರಧಾನ ಮಂತ್ರಿಗಳು ಎರಡು ದಸ್ತಾವೇಜುಗಳಿಗೆ ಸಹಿ ಮಾಡಿದರು. ಒಂದರಲ್ಲಿ, ವಿವಿಧ ರಂಗಗಳಲ್ಲಿ, ವಿಶೇಷವಾಗಿ ಉದ್ದಿಮೆ, ಬಳಕೆಯ ವಸ್ತುಗಳು, ಆರೋಗ್ಯ ಮತ್ತು ಮತ್ತಿತರ ಆದ್ಯತೆಯ ಕ್ಷೇತ್ರಗಳಲ್ಲಿ ಪರಸ್ಪರಸಹಕಾರದ ದೀರ್ಘಕಾಲದ ಕಾರ್ಯಕ್ರಮವನ್ನು ಪ್ರಸ್ತಾಪಿಸಲಾಗಿತ್ತು. ಇನ್ನೊಂದು ದಸ್ತಾವೇಜು ಬಾಹ್ಯಾಕಾಶದ ಶಾಂತಿಯುತ ಬಳಕೆಯ ಬಗ್ಗೆ ಎರಡು ಸರಕಾರಗಳ ನಡುವೆ ಸಹಕಾರದ ಒಪ್ಪಂದ ಕುರಿತಾದದ್ದು.

ಇದಲ್ಲದೆ ಎರಡು ದೇಶಗಳ ಗಡಿಗಳಲ್ಲಿ, ಸಶಸ್ತ್ರಪಡೆಗಳ ಕಡಿತ ಹಾಗೂ ಅಂತರ್‍ರಾಷ್ಟ್ರೀಯ ಪ್ರಶ್ನೆಗಳ ಮೇಲೆ ಹಾಗೂ ದ್ವಿಪಕ್ಷೀಯ ಪ್ರಶ್ನೆಗಳ ಮೇಲೆ ಪರಸ್ಪರ ವಿಚಾರ-ವಿನಿಮಯದ ವಿಷ್ಯಾ-ಶಾಂತಸಾಗರ ಕ್ಷೇತ್ರದಲ್ಲಿ ಸ್ಥಿರ ಶಾಂತಿಗೆ ಅನುವು ಮಾಡಿ ಕೊಟ್ಟರೆ, ಎರಡನೇಯದ್ದು ಇಂತಹ ವಿಚಾರ ವಿಮರ್ಶೆ ಇನ್ನು ಮುಂದೆ ವಿಶ್ವಸಂಸ್ಥೆ ಮತ್ತಿತರ ಅಂತರ್‍ರಾಷ್ಟ್ರೀಯ ಸಂಘಟನೆಗಳಲ್ಲಿ ಒಂದು ನಿಯಮಿತ ವಿಧಾನವಾಗಿ ಮೂಡಿಬರಲಿದೆ ಎಂಬುದನ್ನು ಸೂಚಿಸಿದೆ.

ಈ ಸಫಲ ಭೇಟಿ ಹಾಗೂ ಎರಡು ದೇಶಗಳ ನಡುವಿನ ಮಹತ್ತರ ಒಪ್ಪಂದಗಳು ಶಾಂತಿ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಗಳನ್ನು ಖಂಡಿತವಾಗಿಯೂ ಇನ್ನಷ್ಟು ಬಲಗೊಳಿಸುತ್ತವೆ.

ಇಪ್ಪತ್ತೆಂಟನೇಯ ಮಹಾಧಿವೇಶನಕ್ಕೆ ಎಂತಹ ಪ್ರತಿನಿಧಿಗಳು ಬೇಕು?

ಸೋವಿಯೆತ್ ಕಮ್ಯುನಿಸ್ಟರಿಗೆ ಸಿ.ಪಿ.ಎಸ್.ಯು.ಕೇಂದ್ರ ಸಮಿತಿಯ ಬಹಿರಂಗ ಪತ್ರ

ಸೋವಿಯತ್ ಕಮ್ಯುನಿಸ್ಟ್ ಪಕ್ಷದ 28ನೇ ಮಹಾಧಿವೇಶನದ ಪೂರ್ವ ಸಿದ್ಧತೆಯ ಸನ್ನಿವೇಶದಲ್ಲಿ ಸೋವಿಯತ್ ಸಮಾಜದಲ್ಲಿ ಹಾಗೂ ಪಕ್ಷದಲ್ಲಿ ನಡೆಯುತ್ತಿರುವ "ಕಷ್ಟಕರ ಹಾಗೂ ವಿವಾದಾತ್ಮಕ ಪ್ರಕ್ರಿಯೆ"ಗಳ ಬಗ್ಗೆ, ಸಿ.ಪಿ.ಎಸ್.ಯು. ಕೇಂದ್ರ ಸಮಿತಿ ಮಂಡಿಸಿರುವ ೨೮ನೇ ಮಹಾಧಿವೇಶನದ ವೇದಿಕೆಯ ಕರಡಿನ ಮೇಲೆ ಹಾಗೂ ಪಕ್ಷದ ಹೊಸ ನಿಯಮಗಳ ಕರಡಿನ ಮೇಲೆ ತೀವ್ರ ಚರ್ಚೆನಡೆಯುತ್ತಿರುವ ಹಿನ್ನೆಲೆಯಲ್ಲಿ ನೀತಿಗಳ ಆಧಾರದ ಮೇಲೆ ಐಕ್ಯತೆಯ ಅಗತ್ಯವನ್ನು ಕುರಿತು ಸಿ.ಪಿ.ಎಸ್.ಯು. ಕೇಂದ್ರ ಸಮಿತಿ ಸೋವಿಯತ್ ಕಮ್ಯುನಿಸ್ಟರನ್ನುದ್ದೇಶಿಸಿ ಇದೇ ಏಪ್ರಿಲ್ 12 ರಂದು ಒಂದು ಬಹಿರಂಗ ಪತ್ರ ಬರೆದಿತ್ತು. ಅವರ ಕೆಲವಂಶಗಳನ್ನು ನಮ್ಮ ಓದುಗರಿಗಾಗಿ ಮುಂದೆ ನೀಡಲಾಗಿದೆ.

ಕರಡಿನ ಮೇಲೆ ಚರ್ಚೆಗಳಿಂದ ಪಕ್ಷದಲ್ಲಿ ಮತ್ತು ಸಮಾಜದಲ್ಲಿ ವಿಶಾಲ ಶ್ರೇಣಿಯ ಅಭಿಪ್ರಾಯಗಳಿರುವುದು, ಸಾಮಾಜಿಕ, ರಾಜಕೀಯ ಸನ್ನಿವೇಶ, ಆರ್ಥಿಕ ಬಿಕ್ಕಟ್ಟು, ಜನಾಂಗೀಯ ತಿಕ್ಕಾಟ, ಪ್ರತ್ಯೇಕತಾವಾದಿ ಪ್ರವೃತ್ತಿ, ಹೆಚ್ಚುತ್ತಿರುವ ಅಪರಾಧಗಳು, ಶಿಸ್ತು,ಸಂಯಮದ ಸಡಲಿಕೆ ಮುಂತಾದ ಬಗ್ಗೆ ಸಾರ್ವಜನಿಕ ಆತಂಕವಿರುವುದು ಕಂಡು ಬಂದಿದೆ.

ಹಲವಾರು ರಾಜಕೀಯ ಅಭಿಪ್ರಾಯಗಳಿರುವುದು ಗ್ಲಾಸ್‌ನೋಸ್ಟ್ ಪ್ರಜಾಪ್ರಭುತ್ವ ಮತ್ತು ವಾಕ್ ಸ್ವಾತಂತ್ರ್ಯದಿಂದಾಗಿ ಈಗ ಸಾಧ್ಯವಾಗಿದೆ. ತನ್ನ ನೇತೃತ್ವ ಪಾತ್ರದ ಸಂವಿಧಾನಾತ್ಮಕ ಗ್ಯಾರಂಟಿಯನ್ನು ತಾನೇ ಬಿಟ್ಟುಕೊಟ್ಟಿರುವ ಕಮ್ಯುನಿಸ್ಟ್ ಪಕ್ಷ ತಾನು ವಿಚಾರಗಳ ಬಹಿರಂಗ ಹಾಗೂ ಪ್ರಾಮಾಣಿಕ ಸ್ಪರ್ಧೆಗೆ ಬದ್ಧ ಎಂದು ಕಾರ್ಯತಃ ತೋರಿಸಿಕೊಟ್ಟಿದೆ.

ಅದೇ ವೇಳೆಗೆ, ಕೆಲವು ವ್ಯಕ್ತಿಗಳು ಕೇಂದ್ರ ಸಮಿತಿಯನ್ನು ತನ್ನ ಮಹತ್ವದ ದಾರಿಯಿಂದ ಬೇರೆಡೆಗೆ ತಿರುಗಿಸಲು, ಅದು ಸಾಧ್ಯವಾಗದಿದ್ದರೆ ಒಡಕು ತರಲು ಪ್ರಯತ್ನಿಸುತ್ತಿರುವುದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಬಲಗಡೆಯಿರುವವರು, ಎಡಗಡೆಯಿರುವವರು ಇಬ್ಬರೂ ಇಂತಹ ಪ್ರಯತ್ನ ನಡೆಸಿದ್ದಾರೆ. ಬಲಗಡೆಯಿರುವವರು ಪೆರೆಸ್ತ್ರೋಯಿಕಾವನ್ನು ಒಂದು 'ಉದಾರ ಬೂರ್ಜ್ವಾ ಅವನತಿ' ಎಂದು ತಿರಸ್ಕರಿಸಿದರೆ, ಎಡಗಡೆಯಿರುವವರು ಸಮಾಜವಾದ ವಿರೋಧಿ ಶಕ್ತಿಗಳೊಂದಿಗೆ ಮಿತ್ರತ್ವ ಬೆಸೆದು ಅಕ್ಟೋಬರ್ ಕ್ರಾಂತಿ ಒಂದು ದುರಂತಕಾರೀ ತಪ್ಪು ಎಂದು ಘೋಷಿಸುತ್ತಾರೆ, ಬಂಡವಾಳಶಾಹಿಯ ಮರುಸ್ಥಾಪನೆಯ ಕರೆ ನೀಡುತ್ತಾರೆ. ರಾಷ್ಟ್ರವಾದಿ, ಸಂಕುಚಿತವಾದಿ ಭಾವನೆಗಳು, ಪ್ರತ್ಯೇಕತಾವಾದಿ ಪ್ರವೃತ್ತಿಗಳು ಒಂದು ಗಂಭೀರ ಬೆದರಿಕೆ ಹಾಕಿವೆ. ಈ ಎಲ್ಲಾ ವಿದ್ಯಮಾನಗಳು ಸ್ವಲ್ಪ ಮಟ್ಟಿಗೆ ಪಕ್ಷದೊಳಗೂ ವ್ಯಕ್ತಗೊಂಡಿದೆ.

> ಪಕ್ಷವನ್ನು ಒಡೆಯಲು, ಸಿ.ಪಿ.ಎಸ್.ಯು. ಒಳಗೇ ಗುಂಪುಗಳನ್ನು ಸಕ್ರಮಗೊಳಿಸಲು ನಿರಂತರ, ಉದ್ದೇಶ ಪೂರ್ಣ ಪ್ರಯತ್ನ ನಡೆಸುತ್ತಿರುವ, ಸೋವಿಯತ್ ಜನತೆಯ ಸಮಾಜವಾದಿ ಆಯ್ಕೆಯನ್ನು ನಿರಾಕರಿಸುತ್ತಿರುವ, ತಮ್ಮ ಮಾತು, ಕೃತಿಗಳ ಮೂಲಕ ತಮ್ಮನ್ನ ಪಕ್ಷದ ಹೊರಗಿಟ್ಟುಕೊಳ್ಳುತ್ತಿರುವ ಪಕ್ಷದ ಸದಸ್ಯರನ್ನು ಏನು ಮಾಡಬೇಕು ಎಂಬ ಬಗ್ಗೆ ಸ್ಪಷ್ಟ ವಿಚಾರ ತಳೆಯುವ ಸಮಯವೀಗ ಬಂದಿದೆ. ಇಂತಹ ಜನ ಪಕ್ಷದ ಸದಸ್ಯರಾಗಿಯೇ ಮುಂದುವರೆಯುವುದು ಹೇಗೆ ಸಾಧ್ಯ?

ಹಲವು ಪಕ್ಷದ ಅಂಗಗಳು ಇನ್ನೂ ಸಂಪ್ರದಾಯಕರಣವಾಗಿ ಉಳಿದಿವೆ, ಆಚರಣೆಯಲ್ಲಿ ತತ್ವಾಂಧತೆ ತೋರ್ಪಡಿಸುತ್ತಿವೆ, ಜನತೆಯೊಂದಿಗೆ ಮಾತುಕತೆ ನಡೆಸಲು, ಅವರ ಅಭಿಪ್ರಾಯ ಗಳನ್ನು ಕೇಳಲು, ತಿಳಿಯಲು ಹಾಗೂ ಅವರ ಬೇಡಿಕೆಗಳನ್ನು ಪೂರೈಸಲು ಅಸಮರ್ಥವಾಗಿವೆ ಎಂಬ ಕಮ್ಯುನಿಸ್ಟರ ಅಭಿಪ್ರಾಯ ನ್ಯಾಯಪೂರ್ಣ. ಇದು ಪಕ್ಷಕ್ಕೆ ಬಹಳ ಹಾನಿಯುಂಟು ಮಾಡುತ್ತಿದೆ.

ಪಕ್ಷದ ಕೆಲವು ಸದಸ್ಯರು, ಪೆರೆಸ್ತ್ರೋಯಿಕಾದ ಬಾವುಟದಡಿ ಪ್ರತಿ ತೀವ್ರಗಾಮಿ ಘೋಷಣೆ ನೀಡುತ್ತಾ ಪಕ್ಷದ ವಿರುದ್ಧ ಒಂದು ಹೋರಾಟ ಆರಂಭಿಸಿರುವುದು ಕೂಡಾ ಕಡಿಮೆ ಆತಂಕದ ಸಂಗತಿಯೇನಲ್ಲ. ತಾವು ತೀವ್ರಗಾಮಿ ಬದಲಾವಣೆಗಳ ಏಕೈಕ ಪ್ರತಿಪಾದಕರೆನ್ನುತ್ತಾ ಪಕ್ಷದ ಸೈದ್ಧಾಂತಿಕ, ಸಂಘಟನಾತ್ಮಕ ನೀತಿಗಳ ಮೇಲೆ ಹಲ್ಲೆ ಆರಂಭಿಸಿದ್ದಾರೆ. ಕೆಲವರು ಲೆನಿನ್ ಹಾಗೂ ಲೆನಿನ್‌ವಾದವನ್ನೇ ಹೀಗೆಳೆದಿದ್ದಾರೆ. ಈ ಸನ್ನಿವೇಶದಲ್ಲಿ "ಪ್ರಜಾಸತ್ತಾತ್ಮಕ ವೇದಿಕೆ" ಎಂಬ ಹೆಸರಿನಲ್ಲಿ ಒಂದಾಗಿರುವ ವ್ಯಕ್ತಿಗಳ ಚಟುವಟಿಕೆಗಳನ್ನು ಕೇಂದ್ರ ಸಮಿತಿ ನಿರ್ಲಕ್ಷಿಸಲು ಸಾಧ್ಯವಿಲ್ಲ.

ಈ ವೇದಿಕೆಯ ದಸ್ತಾವೇಜಿನ ಟೀಕಾತ್ಮಕ ಧ್ವನಿ ಬಹು ಮಂದಿಗೆ ರಾಜಕವೆನಿಸಬಹುದು. ಆದರೆ ಪಕ್ಷದ ಕಾರ್ಯನೀತಿ, ಕಾರ್ಯತಂತ್ರಗಳ ಬೆಳವಣಿಗೆಗೆ ರಚನಾತ್ಮಕ ಕೊಡುಗೆ ನೀಡುವ ಯಾವ ಗಂಭೀರ ಪ್ರಯತ್ನವನ್ನು ಇದು ಮಾಡಿಲ್ಲ. ನಮ್ಮ ಸಮಾಜದ ಪ್ರಸ್ತುತ ಮೂಲಭೂತ ಸಮಸ್ಯೆಗಳಿಗೆ ಉತ್ತರ ಕೂಡಾ ನೀಡಿಲ್ಲ. ಈ ವೇದಿಕೆಯ ಮುಖಂಡರ ಯೋಜನೆಗಳು ಪಕ್ಷವನ್ನು ಗುಂಪುಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯವಿರುವ ಒಂದು ಸ್ವರೂಪ ಹೀನ ಸಂಘವಾಗಿ ಮಾರ್ಪಡಿಸುವ ವಸ್ತುತಃ ಪಕ್ಷವನ್ನು ಬುಡಮೇಲು ಮಾಡುವ ಯೋಜನೆಗಳು. ಈ ದಿಕ್ಕಿನಲ್ಲಿ ಇವರು ವ್ಯಾಪಕ ಪ್ರಚಾರ ಹಾಗೂ ಸಂಘಟನಾ ಕೆಲಸ ನಡೆಸಿದ್ದಾರೆ. ಕೇಂದ್ರದಲ್ಲಿ ಹಾಗೂ ಹಲವು ಪ್ರದೇಶಗಳಲ್ಲಿ. ಇದು ಸಿ.ಪಿ.ಎಸ್.ಯು.ವನ್ನು ಒಳಗಿನಿಂದಲೇ ಒಡೆದು ಅದನ್ನು ರಾಜಕೀಯ ರಂಗದಿಂದ ತೆಗೆದು ಹಾಕುವ ಮಾರ್ಗ. ಪಕ್ಷದ ಮೇಲೆ ಒಕ್ಕೂಟ ರಚನೆ ಹೇರಿ, ಕಮ್ಯುನಿಸ್ಟರನ್ನು ಜನಾಂಗಗಳ ಆಧಾರದ ಮೇಲೆ ಅನೈಕ್ಯತೆ ತರುವುದರ ಪರಿಣಾಮಗಳೂ ಕೂಡಾ ಇದೆ.

ನಾವು ಇದನ್ನು ಖಂಡಿತಾ ವಿರೋಧಿಸುತ್ತೇವೆ.

ಪ್ರತಿಯೊಬ್ಬ ಕಮ್ಯುನಿಸ್ಟನಿಗೆ ಮಹಾಧಿವೇಶನದ ಮುನ್ನದ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ...

ಮುಂಬೈ: ಸಿ.ಐ.ಟಿ.ಯು. ಗೆಲುವು

ಸಿ.ಐ.ಟಿ.ಯು.ವಿನ ಮಹಾರಾಷ್ಟ್ರ ರಾಜ್ಯ ಸಮಿತಿಯ ಕಾರ್ಯದರ್ಶಿ ಪಿ.ಕೆ. ಕೃಷ್ಣನ್ ಕಾರ್ಮಿಕ ಕಾನೂನು ವಕೀಲರ ಸಂಘದ ಉಪಾಧ್ಯಕ್ಷರಾಗಿ ಚುನಾಯಿತರಾದರು. 1990-91ರ ಸಾಲಿನ ವ್ಯವಸ್ಥಾಪಕ ಸಮಿತಿಗೆ ನಡೆದ ತೀವ್ರ ಸ್ಪರ್ಧೆಯಲ್ಲಿ ಕೃಷ್ಣನ್‌ರವರು ಅತ್ಯಂತ ಹೆಚ್ಚು ಮತಪಡೆದ ಅಭ್ಯರ್ಥಿ. ಸುಮಾರು 600 ವಕೀಲರು, ಕಾರ್ಮಿಕ ಮುಖಂಡರು ಹಾಗೂ ಸಿಬ್ಬಂದಿ ನಿರ್ವಾಹಕರುಗಳು ಸದಸ್ಯರಾಗಿರುವ ಈ ಸಂಘದ ಸಂಸ್ಥಾಪಕ ಸದಸ್ಯರುಗಳ ಲ್ಲೊಬ್ಬರಾದ ಕೃಷ್ಣನ್ ಕಳೆದ ೨೫ ವರ್ಷಗಳಿಂದ ಈ ಸಂಘದಲ್ಲಿ ಸಕ್ರಿಯರಾಗಿದ್ದಾರೆ.

ಪಶ್ಚಿಮ ಬಂಗಾಳ: ಮಹಿಳಾ ಹುತಾತ್ಮರ ದಿನ

ಏಪ್ರಿಲ್ 27 ರಂದು ಪಶ್ಚಿಮ ಬಂಗಾಳದಲ್ಲೆಲ್ಲಾ ಮಹಿಳಾ ಹುತಾತ್ಮರ ದಿನ ಆಚರಿಸಲಾಯಿತು. ಗಣತಾಂತ್ರಿಕ ಮಹಿಳಾ ಸಮಿತಿ ಇದಕ್ಕೆ ಕರೆ ನೀಡಿತ್ತು. 41 ವರ್ಷಗಳ ಹಿಂದೆ ಏಪ್ರಿಲ್ 27, 1949 ರಂದು ಕಾಂಗ್ರೆಸ್ ಸರಕಾರದ ಆಳ್ವಿಕೆಯಲ್ಲಿ ನಡೆದ ಗೋಲೀಬಾರಿನಲ್ಲಿ ಸಂಗಾತಿಗಳಾದ ಲತಿಕಾ, ಪ್ರತಿಭಾ, ಅಮಿಯಾ, ಗೀತಾ ಮತ್ತು ಇನ್ನೂ ಹಲವು ಮಹಿಳಾ ಸಂಗಾತಿಗಳ ಪ್ರಾಣಾಹುತಿಯಾಯಿತು. ಅಂದಿನಿಂದ ಈ ಧೀರ ಮಹಿಳೆಯರು ಹಾಗೂ ಇತರ ಮಹಿಳಾ ಹುತಾತ್ಮರ ಸ್ಮರಣಾರ್ಥ ಈ ದಿನಾಚರಣೆ ನಡೆಯುತ್ತಾ ಬಂದಿದೆ.

ಒರಿಸ್ಸಾ: ಬೊಂಬು ಕಾರ್ಮಿಕರ ಪ್ರತಿಭಟನೆ

ಒರಿಸ್ಸಾದ ಗಂಜಾಂ ಜಿಲ್ಲೆಯ 500 ಬೊಂಬು ಕಡಿಯುವ ಕಾರ್ಮಿಕರು, ಏಪ್ರಿಲ್ 20 ರಂದು ಸೊರದಾ ತಹಸೀಲಿನ ಮುಖ್ಯ ಕಚೇರಿಯೆದುರು ಮತಪ್ರದರ್ಶನ ನಡೆಸಿದರು. ದಿನಕ್ಕೆ 25 ರೂ ಕನಿಷ್ಠ ಕೂಲಿ ಅವರ ಮುಖ್ಯ ಬೇಡಿಕೆಯಾಗಿತ್ತು. ಅರಣ್ಯ ಕಾರ್ಮಿಕರಿಗೆ ಸರ್ಕಾರ ಪುಕ್ಕಟೆ ಊಟ ಒದಗಿಸಬೇಕೆಂದೂ ಅವರು ಒತ್ತಾಯಿಸುತ್ತಿದ್ದರು.

ಮುಖ್ಯಮಂತ್ರಿ ಪಟ್ನಾಯಿಕ್, 25ರೂ ಕನಿಷ್ಠ ಕೂಲಿಯ ಬೇಡಿಕೆಗೆ ಒಪ್ಪಿದ್ದರೂ ಅಧಿಕಾರಶಾಹಿಗಳು, ಫ್ಯಾಕ್ಟರಿ ಮಾಲಿಕರು ಮತ್ತು ಭೂಮಾಲಿಕರು ಇದನ್ನು ಜ್ಯಾರಿಗೊಳಿಸುತ್ತಿಲ್ಲ.

ಒರಿಸ್ಸಾ ಅರಣ್ಯ ಮಜ್ದೂರ್ ಯೂನಿಯನ್ ಮತ್ತು ಕೃಷಿ ಕೂಲಿಕಾರ ಸಂಘದ ರಾಜ್ಯ ಘಟಕ ಈ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದವು.

ಪುರಿ ಶಂಕರಾಚಾರ್ಯರು ಮತ್ತು ಬಿ.ಜೆ.ಪಿ.-ಏನು ವ್ಯತ್ಯಾಸ?

'ಹಿಂದೂ ರಾಷ್ಟ್ರ' ಅತ್ಯಗತ್ಯ. ಅದರಲ್ಲಿ ಜಾತ್ಯತೀತತೆಗೆ ಯಾವ ಸ್ಥಾನವೂ ಇಲ್ಲ. ಕೋಮುಸೌಹಾರ್ದಕ್ಕೆ ಇದೊಂದೇ ದಾರಿ! ಬಾಬ್ರಿಮಸೀದಿ ಇರುವ ಜಾಗದಲ್ಲೇ ರಾಮ ದೇವಸ್ಥಾನ ಕಟ್ಟಬೇಕು. ವಿಶ್ವ ಹಿಂದೂ ಪರಿಷತ್ತು ಮತ್ತು ಶಂಕರಾಚಾರ್ಯರು ತಪ್ಪು ಜಾಗದಲ್ಲಿ ತಪ್ಪು ಸಮಯದಲ್ಲಿ ಶಿಲಾನ್ಯಾಸ ಮಾಡಿದ್ದಾರೆ. ಶಂಕರಾಚಾರ್ಯರುಗಳನ್ನು ಅವರು ಕೇಳಲಿಲ್ಲ. ನೇಪಾಳದಲ್ಲಿ ರಾಜ ಪ್ರಭುತ್ವವೇ ಇರಬೇಕು. ಏಕೆಂದರೆ ಪ್ರಜಾಪ್ರಭುತ್ವ ಹಿಂದೂ ಪ್ರಭುತ್ವದ ಸಾಂಪ್ರದಾಯಿಕ ಮೌಲ್ಯಗಳನ್ನು ಹಾಳುಗೆಡವುತ್ತದೆ! ಮತಾಂತರ, ಗೋಹತ್ಯೆಗೆ ದಾರಿ ಮಾಡಿಕೊಡುತ್ತದೆ- ಇವು ಶಂಕರಾಚಾರ್ಯರ ಬಾಯಿಂದ ಉದುರಿದ ಆಣಿಮುತ್ತುಗಳು. ಮೊನ್ನೆ ಬಂಧನಕ್ಕೊಳಗಾದ ದ್ವಾರಕೆಯ ಶಂಕರಾಚಾರ್ಯರಲ್ಲ, ಅವರನ್ನು ಕಾಂಗ್ರೆಸ್ ಏಜೆಂಟರೆನ್ನುವ ಪುರಿಯ ಶಂಕರಾಚಾರ್ಯರದ್ದು. ಕಳೆದ ವರ್ಷ ಸತಿ ಪದ್ಧತಿಯನ್ನು ಯಾವ ನಾಚಿಕೆಯೂ ಇಲ್ಲದೆ ಸಮರ್ಥಿಸಿದ ಶಂಕರಾಚಾರ್ಯರು. ಶಿಷ್ಯನೊಬ್ಬನಿಂದ ಕಾಲೊತ್ತಿಸಿಕೊಳ್ಳುತ್ತಾ ಟೈಂಸ್ ಆಫ್ ಇಂಡಿಯಾದ ಪತ್ರಕರ್ತರೊಬ್ಬರಿಗೆ ಸಂದರ್ಶನ ನೀಡಿದಾಗ ಸುರಿದ ಆಣಿ ಮುತ್ತುಗಳಿವು.

ಬಿ.ಜೆ.ಪಿ. ಸುತ್ತಿ ಬಳಸಿ ಹೇಳುವುದನ್ನು ಶಂಕರಾಚಾರ್ಯರು ಒರಟಾಗಿ ಹೇಳಿದ್ದಾರೆ ಅನಿಸುವುದಿಲ್ಲವೇ? ರಾಜಕೀಯದ, ಪ್ರಜಾಪ್ರಭುತ್ವದ 'ಭವಬಂಧನ'ಗಳಿಲ್ಲದ ಶಂಕರಾಚಾರ್ಯರಿಗೆ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಕೆಲಸ ಮಾಡಲೇಬೇಕಾದ ರಾಜಕೀಯ ಪಕ್ಷವಾದ ಬಿ.ಜೆ.ಪಿ.ಗೆ ದಕ್ಕದ ಅವಕಾಶವಿದೆಯಲ್ಲಾ ಎಂದು, ಇದನ್ನು ಕೇಳಿದ ಬಿ.ಜೆ.ಪಿ. ವಾಲಾಗಳು ಕರುಬುತ್ತಿರಬೇಕು!

ಕೂಟ ಸರಕಾರದ ರಾಜಿನಾಮೆ ಕರೆಗೆ ಹೆಚ್ಚೆಚ್ಚು ಜನ ಬೆಂಬಲ

ಪುಟ 1 ರಿಂದ

ಎಡರಂಗ ಸಂಗ್ರಾಮ ಸಮಿತಿ ಯಾವ ಕ್ರೂರ ದಬ್ಬಾಳಿಕೆಗೂ ಎದೆಗುಂದದೆ ಸತ್ಯಾಗ್ರಹದಲ್ಲಿ ಭಾಗವಹಿಸಿದ ಜನತೆಗೆ, ಕಾಂಗ್ರೆ ಪುಂಡರಿಂದ ಗಾಯಗೊಂಡ, ಆಸ್ಪತ್ರೆ ಸೇರಬೇಕಾಗಿ ಬಂದ ಕಾರ್ಯಕರ್ತರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸಿದೆ.

ಸಾಮೂಹಿಕ ಚಳುವಳಿ ಮೂಲಕ ಭಿನ್ನಾಭಿಪ್ರಾಯ ವ್ಯಕ್ತ ಮಾಡುವುದು ಸಂಸದೀಯ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳ ಹಕ್ಕು. ಆದರೆ ಆಗಸ್ಟ್ 30 ರ ಭಾರತ ಬಂದ್ ಕಾಲದಲ್ಲಿ ತ್ರಿಪುರಾದಲ್ಲಿ ಭಯೋತ್ಪಾದನೆ ಹಿಂಸಾಚಾರದ ಮೂಲಕ ಈ ಹಕ್ಕನ್ನು ದಮನ ಮಾಡಲಾಯಿತು. 14 ಎಡರಂಗ ಬೆಂಬಲಿಗರು ಇದಕ್ಕೆ ಬಲಿಯಾದರು. ಏಕೆಂದರೆ ಆಗ ರಾಜೀವ ಗಾಂಧಿ, ಸಂತೋಷ್‌ಮೋಹನ್ ದೇಬ್ ದುಷ್ಟಕೂಟ ಸರಕಾರದ ರಕ್ಷಕರಾಗಿದ್ದರು. ಆದರೆ ಇಂದು ಹೊಸ ಸನ್ನಿವೇಶ ಮೂಡಿ ಬಂದಿದೆ. ಏಕೆಂದರೆ ದೇಶಾದ್ಯಂತ ಪ್ರಜಾಪ್ರಭುತ್ವ- ವಿರೋಧಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಬಲವಾದ ಗಾಳಿ ಬೀಸುತ್ತಿದೆ. ಕಾಂಗ್ರೆ ಬೆಂಬಲಿಗರೂ ಸನ್ನಿವೇಶದ ವಾಸ್ತವತೆ ಅರಿಯುತ್ತಿದ್ದಾರೆ. ಈ ಆರೆ-ಫ್ಯಾಸಿಸ್ಟ್ ಕೂಟ ಸರಕಾರಕ್ಕೆ ತಮ್ಮ ಬೆಂಬಲವನ್ನು ನಿಧಾನವಾಗಿ ವಾಪಾಸು ಪಡೆಯಲಾರಂಭಿಸಿದ್ದಾರೆ. 1.2 ಅಂಶಗಳ ಬೇಡಿಕೆಗಳ ಆಧಾರದ ಮೇಲೆ ಕೂಟ ಸರಕಾರದ ರಾಜಿನಾಮೆಯ ಕರೆಗೆ ರಾಜಕೀಯ ಭೇದ ಭಾವವಿಲ್ಲದೆ ಹೆಚ್ಚೆಚ್ಚು ಜನಸಮೂಹಗಳ ಬೆಂಬಲ ದೊರೆಯುತ್ತಿದೆ ಎಂದು ತ್ರಿಪುರಾದ ಮಾಜಿ ಮುಖ್ಯ ಮಂತ್ರಿ ಹಾಗೂ ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ನೃಪೇನ್ ಚಕ್ರವರ್ತಿ ಹೇಳಿದ್ದಾರೆ.

ದೆಹಲಿಗೆ ಪೂರ್ಣ ರಾಜ್ಯದ ಸ್ಥಾನಮಾನ ವಂಚಿಸಲು ಗುಪ್ತ ಯತ್ನ?

ದೆಹಲಿಗೆ ಪೂರ್ಣ ರಾಜ್ಯದ ಸ್ಥಾನಮಾನ ನೀಡಬೇಕೆಂಬುದು ಕಾಂಗ್ರೆ ಬಿಟ್ಟು ಬೇರೆಲ್ಲಾ ರಾಷ್ಟ್ರೀಯ ರಾಜಕೀಯ ಪಕ್ಷಗಳ ಬಹಳ ವರ್ಷಗಳ ಬೇಡಿಕೆ. ಅಧಿಕಾರಕ್ಕೆ ಬಂದರೆ ಈ ಬೇಡಿಕೆ ಈಡೇರಿಸುವುದಾಗಿ ಜನತಾದಳ, ಬಿ.ಜೆ.ಪಿ. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದವು. ಆದರೆ ಈಗ ಅವೆರಡೂ ಅರುಣಾಚಲ ಪ್ರದೇಶದ ಮಾದರಿಯಲ್ಲಿ ದೆಹಲಿಗೆ ಭಾಗಶಃ ರಾಜ್ಯದ ಸ್ಥಾನಮಾನ ಪಡೆಯಲು ಸಿದ್ಧವಾಗಿವೆ ಎಂದು ಸುದ್ದಿಯಾಗಿದೆ. ಪೂರ್ಣ ರಾಜ್ಯದ ಸ್ಥಾನಮಾನ ಸಂವಿಧಾನದ ಮೂರನೇ ಕಲಮಿನ ಪ್ರಕಾರ ನೀಡಬೇಕು. ಆದರೆ ಅರುಣಾಚಲ ಪ್ರದೇಶಕ್ಕೆ ರಾಜ್ಯದ ಸ್ಥಾನಮಾನ ನೀಡಿರುವುದು ೩೭೧ ನೇ ಕಲಮಿನ ಪ್ರಕಾರ. ಇದರಲ್ಲಿ ಕಾನೂನು ವ್ಯವಸ್ಥೆಯ ಅಧಿಕಾರ ರಾಜ್ಯಪಾಲರ ಮೂಲಕ ಕೇಂದ್ರದ ಕೈಯಲ್ಲೇ ಇರುತ್ತದೆ. ಇದಕ್ಕೆ ರಾಜಿಯಾಗಿರುವ ಬಿ.ಜೆ.ಪಿ. ದೆಹಲಿಯ ಜಮೀನು ಮತ್ತು ಕಟ್ಟಡಗಳ ಮೇಲೆ ಯಾರ ಹತೋಟಿ ಇರಬೇಕೆಂಬ ಬಗ್ಗೆ ಕೇಂದ್ರ ಸರಕಾರದೊಂದಿಗೆ ಅಲ್ಪತನದ ಚೌಕಾಸಿ ನಡೆಯುತ್ತಿದೆ ಯೆಂಬ ಸುದ್ದಿಯೂ ಇದೆ.

ದೆಹಲಿಯ ಜನತೆಗೆ ಎಷ್ಟು ಪ್ರಜಾಪ್ರಭುತ್ವ ಹಕ್ಕುಗಳನ್ನು, ಯಾವ ಪ್ರಮಾಣದಲ್ಲಿ ಕೊಡಬೇಕು ಎಂದು ಚೌಕಾಸಿ ಮಾಡಲು ದೆಹಲಿ ಜನತೆ ಬಿ.ಜೆ.ಪಿ.ಯ ಅಥವಾ ಜನತಾದಳದ ಆಸ್ತಿಯೇನಲ್ಲ ಎಂದು ಸಿ.ಪಿ.ಐ(ಎಂ) ದೆಹಲಿ ರಾಜ್ಯ ಸಮಿತಿ ಸ್ಪಷ್ಟ ಪಡಿಸುತ್ತಾ ಸಂವಿಧಾನದ ಮೂರನೇ ಕಲಮಿನ ಪ್ರಕಾರ ಪೂರ್ಣ ರಾಜ್ಯದ ಸ್ಥಾನಮಾನ ನೀಡಿ ಏಳನೇ ಶೆಡ್ಯೂಲಿನ ಎರಡನೇ ಪಟ್ಟಿಯ ಎಲ್ಲಾ ಅಧಿಕಾರಗಳನ್ನೂ ಹಸ್ತಾಂತರಿಸಬೇಕು. ಕೇಂದ್ರ ಸರಕಾರದ ಅಗತ್ಯಗಳನ್ನು ಗಮನದಲ್ಲಿಟ್ಟು ಕೊಂಡು ಕೇಂದ್ರ ಸರಕಾರದ ವಿಶೇಷ ಅಧಿಕಾರವ್ಯಾಪ್ತಿಯ ಪ್ರದೇಶವನ್ನು ಪ್ರತ್ಯೇಕಗೊಳಿಸಬಹುದು ಎಂದು ತನ್ನ ಬೇಡಿಕೆಯನ್ನು ಸಿ.ಪಿ.ಐ(ಎಂ) ಪುನರುಚ್ಚರಿಸಿದೆ.

ಇದಲ್ಲದೆ ಮತ ಕ್ಷೇತ್ರಗಳ ಪುನರ್ವಿಂಗಡಯನೆ ಬಗ್ಗೆ ಕಾಂಗ್ರೆ ಜೊತೆಗೆ ಬಿ.ಜೆ.ಪಿ. ಕೂಡಾ ಮೌನವಾಗಿದೆ. ಜನತಾದಳದ ದೆಹಲಿ ಘಟಕವೂ ಮೌನವಾಗಿದೆ. ಇದು ದೆಹಲಿಯ ಹೊರ ವಲಯದ ಪುನರ್ವಸತಿ ಪ್ರದೇಶಗಳಲ್ಲಿ, ಜೆ.ಜೆ. ಕಾಲನಿಗಳಲ್ಲಿರುವ ಬಡ ವರ್ಗಗಳನ್ನು ರಾಜಕೀಯವಾಗಿ ಮೂಲೆಗೊತ್ತುವ ಸಮಯ ಸಾಧಕ ನೀತಿ. ಆದ್ದರಿಂದ ರಾಷ್ಟ್ರೀಯ ರಂಗ ಸರಕಾರಕ್ಕೆ ಪ್ರಜಾಪ್ರಭುತ್ವ ನಡವಳಿಕೆಗಳಲ್ಲಿ ಏನಾದರೂ ಗೌರವವಿದ್ದರೆ ಸಂವಿಧಾನದಲ್ಲಿ ಸೂಕ್ತ ತಿದ್ದುಪಡಿ ತಂದು ೧೯೮೯ರ ಚುನಾವಣಾ ಪಟ್ಟಿಯ ಆಧಾರದ ಮೇಲೆ ಕ್ಷೇತ್ರಗಳ ಮರುವಿಂಗಡಣೆ ನಡೆಸಬೇಕೆಂದು ಸಿ.ಪಿ.ಐ(ಎಂ) ಒತ್ತಾಯಿಸುತ್ತಾ, ಇಲ್ಲವಾದರೆ ಪ್ರಜಾಪ್ರಭುತ್ವಕ್ಕೆ ಸರಕಾರದ ಬದ್ಧತೆಯ ಬಗ್ಗೆ ಜನರ ನಂಬಿಕೆ ಹಾರಿಹೋಗುತ್ತದೆ ಎಂದು ಎಚ್ಚರಿಸಿದೆ.

ರಾಜ್ಯದೆಲ್ಲೆಡೆ ಸಂಭ್ರಮದ ಮೇ ದಿನ ಶತಮಾನೋತ್ಸವ

ಹುಬ್ಬಳ್ಳಿ-ಧಾರವಾಡದಲ್ಲಿ ನಾಲ್ಕು ದಿನಗಳ ಕಾರ್ಯಕ್ರಮ

ರಾಜ್ಯದ ವಿವಿಧ ಭಾಗಗಳಲ್ಲಿ ಮೇ ದಿನ ಶತಮಾನೋತ್ಸವವನ್ನು ಸಡಗರ, ಸಂಭ್ರಮಗಳಿಂದ ನಡೆಯಿತು ಎಂದು ಕಳೆದ ಸಂಚಿಕೆಯಲ್ಲಿ ಕೆಲವೆಡೆ ಮೇ ದಿನಾಚರಣೆಯ ಸುದ್ದಿಗಳನ್ನು ಓದಿರುವಿರಿ. ಮೇ ದಿನಾಚರಣೆಯ ಇನ್ನಷ್ಟು ಸುದ್ದಿಗಳು ಬಂದಿವೆ. ಅವುಗಳನ್ನು ಈ ಮುಂದೆ ಕೊಡಲಾಗಿದೆ.

ಮೇ ದಿನ ಶತಾಬ್ದಿಯನ್ನು ಹುಬ್ಬಳ್ಳಿ-ಧಾರವಾಡದಲ್ಲಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು. ನಗರದ ವಿವಿದೆಡೆಗಳಲ್ಲಿ ಸಮುದಾಯ ಮತ್ತು ಇಪ್ಟಾ ತಂಡಗಳ ಆಶ್ರಯದಲ್ಲಿ ಹೋರಾಟದ ಹಾಡುಗಳು, ಬೀದಿನಾಟಕ, ವ್ಯಂಗ್ಯ ಚಿತ್ರ ಪ್ರದರ್ಶನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಎಪ್ರಿಲ್ ೩೦ರಿಂದ ಮೇ 3 ರ ವರೆಗೆ ನಾಲ್ಕು ದಿನಗಳ ಕಾಲ ಹಮ್ಮಿಕೊಳ್ಳಲಾಯಿತು. ಮೇದಿನ ಶತಾಬ್ದಿಯ ಮಹತ್ವದ ಕುರಿತು ಕರಪತ್ರಗಳನ್ನು ಶುಭಾಶಯ ಪತ್ರಗಳನ್ನು ಪ್ರಕಟಿಸಿ ಹಂಚಲಾಯಿತು.

ಕಾರ್ಯಕ್ರಮದ ಮುಖ್ಯ ಆಕರ್ಷಣೆಯೆಂದರೆ 'ಕದಲ್ ಟ್ರದಲ್ ಕಾಂಚಾಣ ಮಿಂಚಾಣ' ಎಂಬ ರಾಜಕೀಯ ವಿಡಂಬನೆಯ ಬೀದಿ ನಾಟಕ ಪ್ರದರ್ಶನ. ರಚನೆ ಮತ್ತು ನಿರ್ದೇಶನ ಇಪ್ಟಾದ ಶ್ರೀ ಸಿದ್ಧನಗೌಡ ಪಾಟೀಲ. ಈ ನಾಟಕ 7 ಕಡೆಗಳಲ್ಲಿ ಪ್ರದರ್ಶನಗೊಂಡು ಸುಮಾರು 2,500 ಪ್ರೇಕ್ಷಕರಿಗೆ ಮುಟ್ಟಿತು. ಕಳೆದ ಒಂದೆರಡು ವರ್ಷಗಳ ರಾಜ್ಯದ ಹಾಗೂ ಕೇಂದ್ರದ ರಾಜಕೀಯ ವಿದ್ಯಮಾನಗಳ ಕುರಿತು ಕೃತಿರಚನಾ ಬೀಳುವ 'ಬಾಟ್ಲಿ', 'ಬೊಫೋರ್ಸ್' ಮುಂತಾದ ಹಗರಣಗಳು, ರಾಮಜನ್ಮ ಭೂಮಿ- ಬಾಬ್ರಿ ಮಸೀದಿ ಕುರಿತಾದ ಕೋಮು ಗಲಭೆ, ಕಾಶ್ಮೀರ ಪಂಜಾಬ್ ರಾಜ್ಯಗಳಲ್ಲಿನ ಉಗ್ರಗಾಮಿಗಳ ಭಯೋತ್ಪಾದಕರ ಪ್ರತ್ಯೇಕವಾದಿಗಳ ಹಾವಳಿ, ಚುನಾವಣಾ ಸ್ಪರ್ಧೆಗಳು, ಇವುಗಳ ಮಧ್ಯೆ ಸ್ವಾತಂತ್ರ್ಯಾ ನಂತರ ಉಲ್ಬಣಗೊಳ್ಳುತ್ತಿರುವ ರೈತರ, ಕಾರ್ಮಿಕರ, ವಿದ್ಯಾರ್ಥಿ ಯುವಜನರ, ಮಹಿಳೆಯರ, ಹರಿಜನ ಗಿರಿಜನರ, ಅಲ್ಪಸಂಖ್ಯಾತರ ಹಾಗೂ ಜನಸಾಮಾನ್ಯರ ದಿನನಿತ್ಯದ ಸಮಸ್ಯೆಗಳು ಮತ್ತು ಅವರ ಮೇಲೆ ಸತತವಾಗಿ ನಡೆಯುತ್ತಿರುವ ಶೋಷಣೆ, ಹಿಂಸೆ, ಅತ್ಯಾಚಾರ, ದಾಳಿ ದಬ್ಬಾಳಿಕೆ ಇತ್ಯಾದಿಗಳ ನಗ್ನ ಚಿತ್ರ ನೀಡುವ ಮತ್ತು ಅವರಲ್ಲಿ ಸಂಘಟಿತ ಐಕ್ಯ ಹೋರಾಟಗಳ ಅನಿವಾರ್ಯತೆಯು ಹಾಗೂ ಸಾಮಾಜಿಕ ಬದಲಾವಣೆಯ ಸಾಧ್ಯತೆಯ ಭರವಸೆ ಮೂಡಿಸುವ ಸಂದೇಶವುಳ್ಳ ಈ ಹೊಸ ನಾಟಕ ಜನರ ಅಪಾರ ಮೆಚ್ಚುಗೆ ಪಡೆಯಿತು.

ಮೇ ದಿನದಂದು ಧಾರವಾಡದ ಕಡಪಾ ಮೈದಾನದಲ್ಲಿ 600 ಕ್ಕೂ ಹೆಚ್ಚು ಪ್ರೇಕ್ಷಕರ ಮುಂದೆ ಈ ನಾಟಕ ಪ್ರದರ್ಶನಗೊಂಡಿತು. ನೂತನ ನಗರ ಸಭಾ ಸದಸ್ಯರಾದ ಶ್ರೀ ಶಂಕರ ಕುಂಬಿ ಶುಭ ಕೋರಿದರು. ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಅಂದು ಸಂಜೆ 4 ರಿಂದ 8 ರವರೆಗೆ ಕಳೆದ ಒಂದು ವರ್ಷಗಳಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಸುಮಾರು 200 ಕ್ಕೂ ಹೆಚ್ಚು ವ್ಯಂಗ್ಯ ಚಿತ್ರಗಳ ಪ್ರದರ್ಶನ ಬಹುಸಂಖ್ಯೆಯ ಜನರನ್ನು ಆಕರ್ಷಿಸಿತು. ಇಂತಹ ಪ್ರಯೋಗ ಇತ್ತೀಚಿನ ದಿನಗಳಲ್ಲಿ ತೀರಾ ... 'ಮೆರಿನ್', 'ಗೊಬ್ಬರದ ಯಂತ್ರ', 'ಆಡಳಿತ ರಹಸ್ಯಕಾಯಿದೆ' 'ಸಿ.ಐ.ಡಿ.,' 'ಥಕ್ಕರ್ ವರದಿಗಳು', 'ಚುನಾವಣಾ ಸ್ಪರ್ಧೆಗಳು', 'ಭಿತ್ತಿಚಿತ್ರಗಳ ಯುದ್ಧ', 'ಅಮೇರಿಕ ಸಾಮ್ರಾಜ್ಯಶಾಹಿಯ ಕ್ರೂರ ಕರಾಳ ಜಾಲ', 'ನೆಲ್ಸನ್ ಮಂಡೇಲಾರ ಬಿಡುಗಡೆ,' 'ವರ್ಣನೀತಿ ವಿರುದ್ಧ ಹೋರಾಟ', ಇತ್ಯಾದಿ ವಿಷಯಗಳನ್ನುಳ್ಳ ಈ ವ್ಯಂಗ್ಯಚಿತ್ರಗಳನ್ನು ಸಮುದಾಯದ ಶ್ರೀ ಸಿ.ಆರ್.ಭಟ್ಟ ಸಂಗ್ರಹಿಸಿದ್ದು ಶ್ರೀ ಶಶಿಕಾಂತ ಮತ್ತು ಧನಂಜಯ ಕುಲಕರ್ಣಿ ಸಹೋದರರು ಸಂಯೋಜಿಸಿದರು. ಕೊನೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಮುದಾಯದ ಗೌರವಾಧ್ಯಕ್ಷರಾದ ಪ್ರೊ ಎಸ್.ಆರ್. ತೋಂಟದಾರ್ಯ ಮತ್ತು ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್.ಎಚ್.ಅಯಿ ಮೇ ದಿನಾಚರಣೆಯ ಮಹತ್ವ ತಿಳಿಸಿ ಕಲಾವಿದರಿಗೆ ಶುಭಕೋರಿದರು. ನಾಲ್ಕು ದಿನಗಳ ಈ ಕಾರ್ಯಕ್ರಮಗಳಿಗೆ ಹಲವಾರು ಪ್ರಗತಿಪರ ಸಂಘಟನೆಗಳು ಸಹಾಯ ಸಲ್ಲಿಸಿದವು. ಹತ್ತಿಕೊಳ್ಳದ ನಾಟಕ ಪ್ರದರ್ಶನದ ಸಮಯದಲ್ಲಿ ಸಂಗ್ರಹಿಸಿದ ಬೀದಿ ಹಣವನ್ನು 52 ದಿನಗಳಿಂದ ಅನಿರ್ದಿಷ್ಟಕಾಲ ಮುಷ್ಕರ ನಿರತರಾಗಿದ್ದ ಇಂಡಿಯನ್‌ಪ್ಲಾಯುವುಡ್ ಕಾರ್ಮಿಕರ ಸಂಘಕ್ಕೆ ದೇಣಿಯಾಗಿ ನೀಡಲಾಯಿತು. ನಾಲ್ಕುದಿನಗಳ ಈ ಕಾರ್ಯಕ್ರಮಗಳನ್ನು ಸಮುದಾಯದ ಅಧ್ಯಕ್ಷರಾದ ಶ್ರೀ ಸಿ.ಆರ್.ಭಟ್ಟ ಮತ್ತು ಇಪ್ಟಾದ ಸಂಚಾಲಕರಾದ ಉಮೇಶ ಹಿರೇಮಠ ಸಂಯೋಜಿಸಿದ್ದರು. ಮತ್ತು ಸಂಘಟಿತವಾಗಿ ಜವಾಬ್ದಾರಿ ವಹಿಸಿ ಕಾರ್ಯಕ್ರಮದ ...

ಅಂಬಲಗಾ ಗ್ರಾಮದಲ್ಲಿ

ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಅಂಬಲಗಾ ಗ್ರಾಮದಲ್ಲಿ ರೈತರು, ಕಾರ್ಮಿಕರೂ ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಸೌಹಾರ್ದತಾ ದಿನಾಚರಣೆಯಲ್ಲಿ ಭಾಗವಹಿಸಿದ್ದುದು ಇನ್ನೊಂದು ವಿಶೇಷ. ರೈತ ಸಂಘದ ಕಚೇರಿಯಲ್ಲಿ ಧ್ವಜಾರೋಹಣದೊಂದಿಗೆ ಇಲ್ಲಿ ಮೇ ದಿನದ ಆಚರಣೆ ಆರಂಭವಾಯಿತು.

ಮೇ ದಿನದೊಂದಿಗೆ ಮಂಡಲ ಪಂಚಾಯ್ತಿ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಜಿಲ್ಲಾ ಪರಿಷತ್ ಸದಸ್ಯ ಮಾರುತಿ ಮಾನಪಡೆಯುವರ ಅಧ್ಯಕ್ಷತೆಯಲ್ಲಿ ಇದು ನೆರವೇರಿತು.

ಕ್ರಾಂತಿಗೀತಿಯೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಅಂಬಲಗಾ ಮಂಡಲ ಪಂಚಾಯತಿಯಲ್ಲಿ ಬರುವ ಮುಗಳ ಮತ್ತಿತರ ಹಳ್ಳಿಗಳಿಂದ ಬಂದ ಜಾನಪದ ಕಲಾಮೇಳಗಳ ಮತ್ತು ಜಾನುವಾರ ಪ್ರದರ್ಶನ ಮುಂತಾದವು ಜನರನ್ನು ಆಕರ್ಷಿಸಿದವು. ಸಭೆಗೆ ಮುಖ್ಯ ಅತಿಥಿಗಳಾಗಿ ಶ್ರೀ ಶಿವಶರಣಪ್ಪ ಮುಂಬಾಳೆಯವರ ಹಾಗೂ ಶ್ರೀ ಶಿವಶರಣ ಮುಳೆಗಾಂವ ಅವರು ಆಗಮಿಸಿದ್ದರು. ಮಂಡಲ ಪಂಚಾಯ್ತಿಯ ಈಗಿನ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಅಧ್ಯಕ್ಷ ಭಾಷಣ ಮಾಡುತ್ತಾ ಶ್ರೀ ಮಾರುತಿ ಮಾನಪಡೆಯವರು ಪಶ್ಚಿಮ ಬಂಗಾಳದ ಮಾದರಿಯಲ್ಲಿ ಮಂಡಲ ಪಂಚಾಯತಿಗಳು ಸ್ಥಾಪನೆಗೊಂಡರೂ ಅಲ್ಲಿಯ ಸಾಧನೆ ಇಲ್ಲಿ ಕಾಣಲಿಲ್ಲ ಎಂದು ವಿವರಿಸುತ್ತಾ ನಮ್ಮಲ್ಲಿ ಇವುಗಳ ಪ್ರಸ್ತಾಪನೆಗಳ ಮೊದಲೇ ಕಾಂಗ್ರೆಸ್ ಸರ್ಕಾರ ಇವುಗಳನ್ನು ಹತ್ತಿಕ್ಕಲು ಶಾಸನಗಳು ಮೂಲಕ ಪ್ರಯತ್ನಿಸಿದ್ದನ್ನು ನೆನಪಿಸಿದರು. ಸಮರಶೀಲ ಸಂಘಟನೆಯ ಹೋರಾಟದ ಮೂಲಕ ನಜ್ಯೇರಸಾಬರ →



ಜೂನ್ 10 ರೊಳಗೆ ಕಾಂಟ್ರಾ ಪಡೆಗಳ ಬರ್‌ಖಾಸ್ತು

ಅಧ್ಯಕ್ಷೆ ಶಮೊರೋರ ನಿಕರಾಗುವ ಸರ್ಕಾರ, ಎರಡನೇ ಬಾರಿ ಕೌಂಟ್ರಾ ಪಡೆಗಳ ಕಮಾಂಡರ್ ಫ್ರಾಂಕ್‌ಲೀನ್ ಜತೆ ಒಪ್ಪಂದ ಮಾಡಿಕೊಂಡಿದೆ. ಇದರ ಪ್ರಕಾರ ಹತ್ತು ಸಾವಿರ ಬಾಡಿಗೆ ಸೈನಿಕರಿರುವ ಕಾಂಟ್ರಾಪಡೆಗಳನ್ನು ಬರಖಾಸ್ತು ಮಾಡಲಾಗುವುದು. ಒಪ್ಪಂದದ ಪ್ರಕಾರ ಸದ್ಯದಲ್ಲೇ ಶಸ್ತ್ರಾಸ್ತ್ರಗಳನ್ನು ಹಿಂತಿರುಗಿಸುವುದು ಆರಂಭವಾಗಿ ಜೂನ್ 10 ರೊಳಗೆ ಇದು ಮುಗಿಯಬೇಕು. ಕಳೆದ ಎರಡು ವಾರಗಳಲ್ಲಿ ಇದು ಎರಡನೇ ಒಪ್ಪಂದ. ಮೊದಲನೆಯ ಒಪ್ಪಂದದ ನಂತರಕಾಂಟ್ರಾಗಳು ಇದ್ದಕ್ಕಿದ್ದ ಹಾಗೆ ಒಪ್ಪಂದದಿಂದ ಹಿಂತೆಗೆದಿದ್ದರು. ತಮ್ಮ ವೈಯುಕ್ತಿಕ ಸುರಕ್ಷತೆಯ ಬಗ್ಗೆ ಆತಂಕವಿದೆ ಎಂದು ಕಾರಣ ಕೊಟ್ಟಿದ್ದರು. ಆದರೆ ಈ ಬಾರಿಯೂ ಕಾಂಟ್ರಾಗಳು ಒಪ್ಪಂದವನ್ನು ಪಾಲಿಸುತ್ತಾರೆ ಎಂಬ ಬಗ್ಗೆ ಸ್ಯಾಂಡಿನಿಸ್ತಾ ಪತ್ರಿಕೆ 'ಬಾರ್ರಿಕಾಡಾ' ಸಂಶಯ ವ್ಯಕ್ತಪಡಿಸಿದೆ. ಅವರು ಒಪ್ಪಂದವನ್ನು ಪಾಲಿಸದಿದ್ದರೆ ಸೈನ್ಯದ ಮೂಲಕ, ಕಾಂಟ್ರಾಗಳನ್ನು ನಿಶ್ಶಸ್ತ್ರಗೊಳಿಸಬೇಕು ಎಂಬುದು ಸ್ಯಾಂಡಿನಿಸ್ತಾ ನಿಲುವು.

ಮೊದಲ ಹಂತದಲ್ಲಿ ಸ್ಯಾಂಡಿನಿಸ್ತಾ ಸೈನ್ಯವನ್ನು ಕಡಿತಗೊಳಿಸಿ, ಸ್ಯಾಂಡಿನಿತ್ತಾ ಸೈನ್ಯದ ನಾಯಕತ್ವವನ್ನು ಬರಖಾಸ್ತು ಮಾಡಿದರೆ ಮಾತ್ರ ನಾವು ಇದಕ್ಕೆ ಒಪ್ಪುವುದಾಗಿ ಕಾಂಟ್ರಾಗಳು ಶರತ್ತು ಹಾಕಿದ್ದರು. ಆದರೆ ರಾಜಕೀಯವಾಗಿ ಇದನ್ನು ಸಾಧಿಸುವುದು ಅಧ್ಯಕ್ಷೆ ಶಮಾರೋರಾಗೆ ಆಗದ ಮಾತು.

ಈ ನಡುವೆ ಕಾಂಟ್ರಾ-ಇರಾನ್ ಗೇಟ್ ಹಗರಣದಲ್ಲಿ ಈಗಿನ ಅಧ್ಯಕ್ಷ (ಆಗಿನ ಉಪಾಧ್ಯಕ್ಷ) ಬುಶ್‌ರವರಿಗೆ ಈಗ ಗೊತ್ತಿರುವುದಕ್ಕಿಂತ ಹೆಚ್ಚು ಸಕ್ರಿಯ ಪಾತ್ರವಿತ್ತು ಎಂದು ಈ ಹಗರಣದಲ್ಲಿ ಮುಖ್ಯ ಆಪಾದಿತರಾದ ಲೆಃ॥ ಬಲಿವರ್ ನಾರ್ತ್‌ರವರ ನೋಟ್‌ಬುಕ್‌ಗಳ ಅಧ್ಯಯನದಿಂದ ತಿಳಿದು ಬಂದಿದೆ.

ಐ.ಎಂ.ಎಫ್.ನಲ್ಲಿ ಶ್ರೀಮಂತ-ಬಡ ದೇಶಗಳ ನಡುವೆ ಭಿನ್ನಾಭಿಪ್ರಾಯ

ಐ.ಎಂ.ಎಫ್.ನಲ್ಲಿ ಸಿಂಹಪಾಲು ಪಡೆದಿರುವ 7 ಶ್ರೀಮಂತ ದೇಶಗಳು ಅದರ ನಿಧಿ ಶೇಕಡಾ 50 ರಷ್ಟು ಏರಿಸುವ (ಇದಕ್ಕೆ ಸಾಮಾನ್ಯವಾಗಿ ಕೋಟಾ ಎನ್ನುತ್ತಾರೆ) ಸಲಹೆ ಒಪ್ಪಬೇಕಾದರೆ ಸಾಲ ತೀರಿಸದಿರುವ ಬಡದೇಶಗಳನ್ನು ವಜಾ ಮಾಡಬೇಕು ಎಂಬ ಷರತ್ತು ಹಾಕಿದೆ. ಇದನ್ನು 24 ಬಡದೇಶಗಳ ಅರ್ಥಮಂತ್ರಿಗಳ ಸಭೆ ಬಲವಾಗಿ ವಿರೋಧಿಸಿದೆ. ಈ ಷರತ್ತನ್ನು ಒಪ್ಪಿಕೊಂಡರೆ ಈ 24 ದೇಶಗಳಲ್ಲಿ 11 ದೇಶಗಳು ಸದಸ್ಯತ್ವ ಕಳೆದುಕೊಳ್ಳುತ್ತವೆ. ಸಾಲ ತೀರಿಸಲು ಈ ಸದಸ್ಯ ದೇಶಗಳಿಗೆ ಸಾಕಷ್ಟು ಸಮಯ ನೀಡಬೇಕೆಂದು ಈ ಗುಂಪುವಾದಿಸಿದೆ. ಇದರಲ್ಲಿ ಭಾರತದ ಅರ್ಥಮಂತ್ರಿ ಪ್ರೊ॥ ಮಧುದಂಡವತೆ ಸಹ ಇದ್ದರು.

ಇಷ್ಟೇ ಅಲ್ಲದೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಐ.ಎಂ.ಎಫ್. ಸಾಲ ಬೇಕಾದರೆ, ಅದನ್ನು ಖಾಸಗಿ ಕ್ಷೇತ್ರದಲ್ಲಿ ಮಾಡುವುದು ಸಾಧ್ಯವಿಲ್ಲ ಎಂಬುದನ್ನು ರುಜುವಾತು ಮಾಡಬೇಕು ಎನ್ನುವ ಷರತ್ತು ಸಹ ಅನ್ಯಾಯಯುತ ಎಂದು ಈ ಗುಂಪಿನ ಹೇಳಿಕೆ ತಿಳಿಸಿದೆ.

ಐ.ಎಂ.ಎಫ್, ವಿಶ್ವಬ್ಯಾಂಕ್‌ನ ನಿಧಿ ಹರಿಯುತ್ತಿರುವುದರ ಒಟ್ಟು ಲೆಕ್ಕಾಚಾರ ಹಾಕಿದರೆ, ಒಟ್ಟಾರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಂದ ಅಭಿವೃದ್ಧಿ ಹೊಂದಿರುವ ದೇಶಗಳಿಗೆ ನಿಧಿ ಹರಿಯುತ್ತಿದೆ. ಈ ನಕಾರಾತ್ಮಕ ನಿಧಿ ಹರಿಯುವಿಕೆ ವೇಗವಾಗಿ ಏರುತ್ತಿದ್ದು, 1988ರಲ್ಲಿ ಇದು 900 ಮಿಲಿಯ ಡಾಲರುಗಳಿದ್ದರೆ, 1989ರಲ್ಲಿ 8200 ಮಿಲಿಯ ಡಾಲರುಗಳಿಗೇರಿದೆ ಇದನ್ನು ಬದಲಾಯಿಸಲು ಐ.ಎಂ.ಎಫ್. ಕ್ರಮಗಳ ಬಗ್ಗೆ ಈ ಗುಂಪಿನ ಹೇಳಿಕೆ ಒತ್ತಾಯಿಸಿದೆ.

ಏಶ್ಯಾ ಅಭಿವೃದ್ಧಿ ನಿಧಿ

ಏಶ್ಯಾ ಅಭಿವೃದ್ಧಿ ಬ್ಯಾಂಕ್ (ADB) ನ 23 ನೇ ಗವರ್ನರುಗಳ ಬೋರ್ಡ್ ಸಭೆ ನವದೆಹಲಿಯಲ್ಲಿ ನಡೆಯಿತು. ಈ ಸಭೆಯಲ್ಲೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಬೆಳವಣಿಗೆ ಬೇಕಾದ ನಿಧಿಯ ಬಗ್ಗೆ ಶ್ರೀಮಂತ ದೇಶಗಳ ನಿರಾಸಕ್ತಿ ವ್ಯಕ್ತವಾಯಿತು. ಏಶ್ಯಾದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಸುಲಭ ಸಾಲ ಕೊಡುವುದಕ್ಕಿಂತ ADB ಯ ಶ್ರೀಮಂತ ದೇಶಗಳಿಗೆ ಪೂರ್ವ ಯೂರೋಪಿಗೆ ಸಾಲ ಕೊಡುವುದು ರಾಜಕೀಯ ಅಗತ್ಯವಾಗಿದೆ. ಆದ್ದರಿಂದ ಏಶ್ಯಾ ಅಭಿವೃದ್ಧಿ ನಿಧಿ-6 ಕ್ಕೆ ಹಣ ಹೊಂದಿಸುವ ಬಗ್ಗೆ ಮಾತುಕತೆ ಆರಂಭವೇ ಆಗಿಲ್ಲ. ಈ ನಿಧಿಯಿಂದ ಏಶ್ಯಾದ ದೇಶಗಳಿಗೆ ಸಾಮಾನ್ಯವಾಗಿ ಅಭಿವೃದ್ಧಿ ಕಾರ್ಯಗಳಿಗೆ ಸುಲಭಸಾಲ ಕೊಡಲಾಗುತ್ತಿತ್ತು.

ಒಬ್ಬ ಪ್ರತಿನಿಧಿ ಹೇಳಿದಂತೆ ಈ ಸಭೆಯಲ್ಲಿ ಬಹಳಷ್ಟು ಬೋಧನೆಗಳನ್ನು ನೀಡಲಾಯಿತು. ಆದರೆ ನಿಧಿಯ ಸುದ್ದಿಯೇ ಬರಲಿಲ್ಲ.



ಚೀಣಾದ ವಿರುದ್ಧ ಸಾಮ್ರಾಜ್ಯಶಾಹಿಗಳು, ಅವರ ಏಜೆಂಟರು ನಡೆಸಿರುವ ಇನ್ನೊಂದು ಪಿತೂರಿಯ ಬಗ್ಗೆ ಕಳೆದವಾರ ಓದಿದ್ದೀರಿ. ಉ 'ರೇಡಿಯೋ ಹಡುಗು' ಕಳೆದ ಶನಿವಾರ ತೈವಾನ್‌ನ ಬಂದರು ಶೀಲುಂಗ್ ತಲುಪಿತು. ಈಗ ಅದು ಅಂತರಾಷ್ಟ್ರೀಯ ಕಾನೂನುಗಳನ್ನೆಲ್ಲಾ ಮುರಿದು ಚೀಣಾದತ್ತ ಸಾಗಿದೆ.

ಜರ್ಮನ್ ಐಕ್ಯತೆ

ಜರ್ಮನ್ ಐಕ್ಯತೆ ಬಗ್ಗೆ ಮೊದಲ 4+21 ಮಾತುಕತೆಗಳು ಮುಗಿದಿದ್ದು, ಈ ಮಾತುಕತೆಗಳನ್ನು ಮುಂದುವರೆಸಲು ನಿರ್ಧರಿಸಲಾಗಿದೆ. ಮುಂದಿನ ತಿಂಗಳು ಬಾನ್‌ನಲ್ಲಿ ಜುಲೈನಲ್ಲಿ ಪ್ಯಾರೀಸ್‌ನಲ್ಲಿ, ಸೆಪ್ಟಂಬರ್‌ನಲ್ಲಿ ಮಾಸ್ಕೋದಲ್ಲಿ ನಡೆಯಬೇಕೆಂದು ನಿರ್ಧರಿಸಲಾಗಿದೆ.

ಮಂದಿನ ಸಭೆಗಳಿಗೆ ಪೋಲೆಂಡ್‌ನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ.

ಈ ಸಭೆಯಲ್ಲಿ ಮೊದಲ ಹಂತದ ಅಭಿಪ್ರಾಯ ವಿನಿಮಯ ನಡೆದಿದ್ದು ಮುಂದಿನ ಸಭೆಗಳಲ್ಲಿ ಮುಖ್ಯ ನಾಲ್ಕು ವಿಷಯಗಳ ಬಗ್ಗೆ ವಿವರವಾದ ಚರ್ಚೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಧ್ಯತೆ ಇದೆ. ಈ ಮುಖ್ಯ ನಾಲ್ಕು ವಿಷಯಗಳು: ಐಕ್ಯ ಜರ್ಮನಿಯ ಗಡಿಗಳು, ಯುರೋಪಿನ ಎಲ್ಲಾ ದೇಶಗಳ ಭದ್ರತೆಯ ದೃಷ್ಟಿಯಿಂದ ಜರ್ಮನಿಯ ರಾಜಕೀಯ ಮಿಲಿಟರಿ ಭವಿಷ್ಯ, ಬರ್ಲಿನ್‌ನ ಪ್ರಶ್ನೆ, ನಾಲ್ಕು ದೇಶಗಳು ಜರ್ಮನಿಯ ಮೇಲೆ ಹೊಂದಿರುವ ಅಧಿಕಾರದ ತ್ಯಾಗ ಸೋವಿಯೆತ್ ವಿದೇಶ ಮಂತ್ರಿ ಜರ್ಮನ್ ನಾಟೋ ಸದಸ್ಯನಾಗಿ ಮುಂದುವರಿಯುವುದನ್ನು ಬಲವಾಗಿ ವಿರೋಧಿಸಿದರು.

ದ. ಕೋರಿಯಾದಲ್ಲಿ ಸರ್ಕಾರ ವಿರೋಧಿ ಪ್ರತಿಭಟನೆ

ಜರ್ಮನ್ ಐಕ್ಯತೆಯ ಬಗ್ಗೆ ಇಡೀ ಸಾಮ್ರಾಜ್ಯಶಾಹಿ ಪ್ರಚಾರಯಂತ್ರ ನಿಮಿಷ ನಿಮಿಷ ಸುದ್ದಿ ಕೊಡುತ್ತಿದ್ದರೆ, ಇನ್ನೊಂದು ಇದೇ ರೀತಿ ವಿಭಜಿತ ದೇಶದ ಕೊರಿಯಾ ಬಗ್ಗೆ ಮೌನವ್ರತ ಸಾಧಿಸಿದೆ. ಯಾಕೆಂದರೆ ಅಲ್ಲಿ ಸಾಧ್ಯವಾಗುವ ಐಕ್ಯತೆ ಸಂಪೂರ್ಣವಾಗಿ ಸಾಮ್ರಾಜ್ಯಶಾಹಿ ವಿರೋಧಿ ಐಕ್ಯತೆ ಆಗಿರುತ್ತದೆ.

ಮೇ 9ರಂದು ದ. ಕೋರಿಯಾದ ತುಂಬ ಭಾರೀ ಸರ್ಕಾರಿ ವಿರೋಧಿ ಪ್ರದರ್ಶನಗಳು ನಡೆದವು. ಪೋಲೀಸ್ ಪ್ರಕಾರವೇ ದೇಶದ ತುಂಬಾ ಹಲವು ಕಡೆ 50 ಸಾವಿರದಿಂದ 90 ಸಾವಿರದವರೆಗೆ ಜನ ಪ್ರದರ್ಶನದಲ್ಲಿ ಭಾಗವಹಿಸಿದರು. ಸುಮಾರು 2000 ಜನರನ್ನು ಬಂಧಿಸಲಾಗಿದೆ. ಆಳುವ DLP ಪಕ್ಷದ ಅಧಿವೇಶನದ ಬಳಿ ಹತ್ತು ಸಾವಿರಕ್ಕಿಂತಲೂ ಹೆಚ್ಚು ಪ್ರದರ್ಶನ ನಡೆಸಿದರು. ಅಮೇರಿಕನ್ ಮಾಹಿತಿ ಇಲಾಖೆಯ ಆಫೀಸಿನ ಮೇಲೆ ಬಾಂಬ್‌ಗಳನ್ನು ಎಸೆಯಲಾಯಿತು.

ಹಲವು ವಿದ್ಯಾರ್ಥಿಗಳು ಕೊರಿಯಾವನ್ನು ಇಬ್ಭಾಗಮಾಡಿ ಇಟ್ಟಿರುವ ಅಮೇರಿಕನ್ ಸೈನ್ಯ (40ಸಾವಿರಕ್ಕಿಂತಲೂ ಹೆಚ್ಚು) ವಾಪಸಾಗಲಿ ಎಂದು ಘೋಷಣೆಗಳನ್ನು ಹಾಕಿದರು. ಬರ್ಲಿನ್ ಗೋಡೆಯ ನಂತರ ಕೋರಿಯಾದ ಗೋಡೆ ಸರದಿ ಬಂದೀತೆ?

ಹಿಂದೂ ನೇಪಾಳ ಜಾತ್ಯತೀತ

ಹಿಂದೂ ರಾಷ್ಟ್ರದ ಕನಸು ಕಾಣುತ್ತಿರುವ ನಮ್ಮ 'ಚಡ್ಡಿ'ಗಳ ಕನಸು ತಿರುವು ಮುರುವು ಆಗುತ್ತಿರುವಂತೆ ಕಾಣುತ್ತಿದೆ. ನೇಪಾಳದಲ್ಲಿ ಹೊಸ ಸಂವಿಧಾನವನ್ನು ರಚಿಸುವತ್ತ ಎಡರು ತೊಡರುಗಳು ಏನೇ ಇದ್ದರೂ ಒಂದು ಅಂಶ ಅಂತೂ ಸ್ಪಷ್ಟವಾಗಿದೆ. ಅದು ಹಿಂದೂ ರಾಷ್ಟ್ರವಾಗಿ ಉಳಿಯುವುದಿಲ್ಲ. ಜಗತ್ತಿನ ಏಕಮಾತ್ರ ಹಿಂದೂ ರಾಷ್ಟ್ರ ಕೊನೆಯ ಹಿಂದೂ ರಾಷ್ಟ್ರವಾಗುತ್ತಿದೆ. ನೇಪಾಳವನ್ನು ಜಾತ್ಯತೀತ ದೇಶವಾಗಿ ಘೋಷಿಸಲಾಗುತ್ತದೆ.



ಕುಂದಾಪುರದಲ್ಲಿ ಮೇ ದಿನ ಶತಮಾನೋತ್ಸವದಲ್ಲಿ ಕಾಂ.ಸಿ.ನಂಜುಂಡಪ್ಪ

ಕನಸಿನ ಕೂಸನ್ನು ಪೋಷಿಸಿಕೊಂಡು ಬಂದುದನ್ನು ನೆನಪಿಸಿಕೊಂಡರು.

ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ನಾರಾಯಣರಾವ್ ನಗರಿ ಸುತ್ತಲಿನ ರೈತ ಕಾರ್ಮಿಕರಿಗೆ, ಜಾನಪದ ಕಲಾಮೇಳದವರಿಗೆ ಅಭಿನಂದನೆ ಸಲ್ಲಿಸಿದರು. ಮಂಡಲ ಪಂಚಾಯಿತಿ ಪ್ರಧಾನರಾದ ಕಠಾರಿಯವರು ಪಂಚಾಯಿತಿ ಪ್ರಧಾನರಾದ ಕಠಾರಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಸದಸ್ಯರಿಗೂ, ಅತಿಥಿಗಳಿಗೂ ಶಾಲು ಹೊದಿಸಿ, ಸನ್ಮಾನಿಸಿ, ಇಂತಹ ಕಾರ್ಯಕ್ರಮ ಪ್ರತಿಯೊಂದು ಮಂಡಲ ಪಂಚಾಯತಿಯಲ್ಲಿಯೂ ನಡೆಯಲೆಂದು ಹಾರೈಸಿದರು.

ಹೊಸ ಪೇಟೆ

ಹೊಸಪೇಟೆಯಲ್ಲಿ ಮೇ ದಿನ ಶತಮಾನೋತ್ಸವವನ್ನು ಅತ್ಯಂತ ಸಡಗರದಿಂದ, ಉತ್ಸಾಹದಿಂದ ಆಚರಿಸಲಾಯಿತು. ಎಲ್.ಐ.ಸಿ. ನೌಕರರ ಸಂಘ, ಬ್ಯಾಂಕ್ ನೌಕರರ ಸಂಘ, ಸ್ಯಾಂಪ್ಯಾರ್ಸ್ ಯೂನಿಯನ್, ಅಂಚೆನೌಕರರ ಸಂಘ, ಎಸ್.ಎಫ್.ಐ. ಡಿ.ವೈ.ಎಫ್.ಐ. ಸಂಘಟನೆಗಳ ನೇತೃತ್ವದಲ್ಲಿ, ಎಸ್.ಬಿ.ಐ. ಬ್ಯಾಂಕ್‌ನಿಂದ ಸುರಿಯುತ್ತಿರುವ ಮಳೆಯಲ್ಲಿ ಮೆರವಣಿಗೆ ಹೊರಟು, ಮುಗಿಲೆತ್ತರದ ಘೋಷಣೆಗಳನ್ನು ಕೂಗುತ್ತಾ ನಗರದ ಪ್ರಮುಖ ಮೂಲಕ ಹಾಯ್ದು ಟೌನ್ ರೀಡಿಂಗ್ ರೂಂ ಮೈದಾನದಲ್ಲಿ ಸಮಾವೇಶಗೊಂಡಿತು. ಕಾರ್ಯಕ್ರಮವು ಕಾಂ. ಹುಸೇನ್ ತಾಂಬ್ರಳ್ಳಿಯವರ ಕ್ರಾಂತಿಗೀತೆಯೊಂದಿಗೆ ಪ್ರಾರಂಭವಾಯ್ತು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀಯುತ ಪಿ.ಸಿದ್ದೇಶ್ವರರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹೊಸಪೇಟೆ ಉಪವಿಭಾಗ ಸಹಾಯಕ ಆಯುಕ್ತರಾದ ಶ್ರೀಯುತ ನರಸಿಂಹಯ್ಯನವರು ಹಾಜರಿದ್ದರು.

ಈ ಸಭೆಯ ಇನ್ನೊಬ್ಬ ಮುಖ್ಯ ಅತಿಥಿಗಳಾದ ರಾಯಚೂರು ವಿಭಾಗದ ಎಲ್.ಐ.ಸಿ. ನೌಕರರ ಸಂಘದ ಕಾರ್ಯದರ್ಶಿಗಳಾದ ಕಾಂ. ವಿಜಯಕುಮಾರ್ ರವರುಮಾತನಾಡುತ್ತಾ,ಮೇ ದಿನಾಚರಣೆಯ ಕೇವಲ ಸ್ಮರಣೆಯ ದಿನವಾಗದೆ ದುಡಿಯುವ ವರ್ಗದ ಹಿತ ಕಾಯುವ ಸಂಕಲ್ಪದ ದಿನವಾಗಲೆಂದು ತಿಳಿಸಿದರು.

ಶ್ರೀಯುತ ನರಸಿಂಹಯ್ಯನವರು ಮೇ ದಿನದ ಮಹತ್ವವನ್ನು ವಿವರಿಸುತ್ತಾ ಕಾರ್ಮಿಕ ವರ್ಗದ ಹಕ್ಕುಗಳನ್ನು ಪ್ರತಿಪಾದಿಸುವ ಮೂಲಕ ನಮ್ಮ ಕರ್ತವ್ಯದ ವಿವೇಚನೆ ಮಾಡಿಕೊಳ್ಳಲು ತಿಳಿಸಿದರು. ಪ್ರಗತಿಯ ಚಕ್ರವನ್ನು ಹಿಂದಕ್ಕೆಳೆಯುವ ಪ್ರತಿಗಾಮಿಗಳ ವಿರುದ್ಧ ನಿರಂತರ ಹೋರಾಟ ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧ ಶೋಷಿತರನ್ನು ಹೋರಾಟಕ್ಕೆ ಅಣಿಗೊಳಿಸಿ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಕರೆ ನೀಡಿದರು.

ಜಿಲ್ಲಾ ಸಿಐಟಿಯು ಮುಖಂಡರಾದ ಕಾಂ.ಪ್ರಸನ್ನಕುಮಾರ್ ಮತ್ತು ಶ್ರೀಯುತ ರವಿವರ್ಮರವರು ಮಾತನಾಡಿ ಅಸಂಘಟಿತ ಕಾರ್ಮಿಕರ ಹೋರಾಟಗಳಿಂದ ಮಾತ್ರ ನಮ್ಮ ಸಮಸ್ಯೆಗಳಿಗೆ ಪರಿಹಾರವೆಂದು ತಿಳಿಸಿದರು.

ಅಧ್ಯಕರಾದ ಶ್ರೀಯುತ ಪಿ. ಸಿದ್ದೇಶ್ವರರವರು ಹೋರಾಟದ ಅನಿವಾರ್ಯತೆ ಯನ್ನು ಒತ್ತಿ ಹೇಳುತ್ತಾ ನೌಕರರು ರಚನಾತ್ಮಕ ಕಾರ್ಯಕ್ರಮಗಳಲಿ ತೊಡಗಿಸಿಕೊಳ್ಳಬೇಕೆಂದರು.

ಶ್ರೀಯುತ ಅಜೇಯಕುಮಾರ್‌ರವರು ಸ್ವಾಗತಿಸಿ ಕಾಂ. ಎಲ್.ಮಂಜುನಾಥರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯ ಮಾಡಲಾಯಿತು.

ಬಿಜಾಪುರ

ಬಿಜಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ., ಸ್ಪಿನ್ನಿಂಗ್ ಮಿಲ್ಸ್ ಮುನಿಸಿಪಲ್, ಹಮಾಲಿ, ಎಣ್ಣೆ ಗಿರಣಿ ಕೆಲಸಗಾರರೆಲ್ಲ ಸೇರಿ "ವಿಶ್ವದ ಕಾರ್ಮಿಕರೇ ಒಂದಾಗಿರಿ" "ದೇಶದ ಐಕ್ಯತೆ ರಕ್ಷಿಸಿರಿ" ಮೇ ದಿನಾಚರಣೆ ಚಿರಾಯುವಾಗಲಿ' ಮೊದಲಾದ ಘೋಷಣೆಗಳೊಡನೆ ಪ್ರಚಂಡ ಮೆರವಣಿಗೆ ತೆಗೆದು ವಿಜೃಂಭಣೆಯಿಂದ ಮೇ ದಿನಾಚರಣೆ ಆಚರಿಸಿದರು. ಮೆರವಣಿಗೆಯ ನಂತರನಡೆದ ಸಭೆಯಲ್ಲಿ ಸಿ.ಐ.ಟಿ.ಯು. ಮುಖಂಡರಾದ ಎಸ್.ಕೆ. ಉಪಾಧ್ಯಾಯ, ಕೃಷಿ ಕಾರ್ಮಿಕರ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ ಎ.ಐ.ಟಿ.ಯು.ನ ಮುಖಂಡರಾದ ಎಲ್.ಕೆ.ಚಂಚಲಕರ ಮುನಸಿಪಲ್ ಕಾಮಗಾರ ಯೂನಿಯನ್‌ನ ಮುಖಂಡ ಮನ್ನೂಸಾಬ ಕಲಾದಗಿ ಮೊದಲಾದವರು ಭಾಷಣ ಮಾಡಿ ಮೇ ದಿನದ ಮಹತ್ವ ವಿವರಿಸಿ, ದುಡಿಯುವ ಐಕ್ಯತೆಯನ್ನು ಸಾಧಿಸಿ, ದೇಶದ ಸಮಗ್ರತೆಯನ್ನು ರಕ್ಷಿಸಬೇಕೆಂದೂ ಸಾಮ್ರಾಜ್ಯಶಾಹಿಪ್ರ ಬಂಡವಾಳದಾರರ ಅಪಪ್ರಚಾರವನ್ನು ಧೈರ್ಯದಿಂದ ಎದುರಿಸಿ ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಯನ್ನು ರಕ್ಷಿಸಬೇಕೆಂದು ಕರೆನೀಡಿದರು.

ಬೆಂಗಳೂರಿಗೆ ಪ್ರಧಾನಿ ವಿ.ಪಿ.ಸಿಂಗ್ ಭೇಟಿ

ಶ್ರೀಮಾನ್ ವಿಶ್ವನಾಥ್ ಪ್ರತಾಪ್‌ಸಿಂಗ್ ರವರು ಪ್ರಧಾನಿ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಪ್ರಥಮ ಬಾರಿಗೆ ಮೇ 11ರಂದು ಬೆಂಗಳೂರಿಗೆ ಆಗಮಿಸಿದ್ದರು. ಸಮೀಪದ ಹೆಸರಘಟ್ಟ ಗ್ರಾಮದ ಬಳಿ 'ಸ್ವತಗ್ರಾಮ' ವೊಂದನ್ನು ಉದ್ಘಾಟಿಸಿದ ತರುವಾಯ ಸಂಜೆ ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಜನತಾದಳದ ಕಾರ್ಯಕರ್ತರ ರಾಜ್ಯಮಟ್ಟದ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದರು.

ರಾಷ್ಟ್ರೀಯ ರಂಗ ಸರ್ಕಾರವು ತನ್ನ ಚುನಾವಣಾ ಪ್ರಣಾಳಿಕೆಯನ್ನು ಜಾರಿಗೊಳಿಸಲು ಬದ್ಧವಾಗಿದ್ದು ಪ್ರತಿತಿಂಗಳೂ ಮಂತ್ರಿಮಂಡಲವು ಇದರ ಪ್ರಗತಿಯನ್ನು ಪರಿಶೀಲಿಸುತ್ತಿರುವುದಾಗಿ ಪ್ರಧಾನಿಯವರು ತಿಳಿಸಿದರು. ಈಗಾಗಲೇ ಆಕಾಶವಾಣಿ ಮತ್ತು ದೂರದರ್ಶನ ಸಂಸ್ಥೆಗಳಿಗೆ ಸ್ವಾಯುತ್ತತೆ ನೀಡುವುದು. ಸಂವಿಧಾನದ 59ನೇ ತಿದ್ದುಪಡಿಯನ್ನು ರದ್ದುಗೊಳಿಸುವುದು. ಅಂಚೆ ಮಸೂದೆಯನ್ನು ಹಿಂತೆಗೆದು ಹೊಸ ಮಸೂದೆ ಮಂಡಿಸುವುದು, ರೈತರ ಸಾಲ ಮನ್ನಾ, ಲೋಕಪಾಲ್ ಮಸೂದೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮಕೈಗೊಳ್ಳಲಾಗಿದೆ. ಸಂವಿಧಾನದ ಫೆಡರಲ್ ಸ್ವರೂಪಕ್ಕೆ ಧಕ್ಕೆ ಬರದಂತೆ ಪಂಚಾಯತ್ ರಾಜ್ ಮಸೂದೆಯನ್ನು ಪರಿಷ್ಕರಿಸಿ ಸದ್ಯದಲ್ಲೇ ಸಂಸತ್ತಿನ ಮುಂದೆ ಮಂಡಿಸಲಾಗುವುದು. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸಿ ಉದ್ಯೋಗ ವರದಿಗಳನ್ನು ಹೆಚ್ಚಿಸಲು ಸೂಕ್ತ ಯೋಜನೆಗಳನ್ನು ರೂಪಿಸಲಾಗುವುದು. ಹರಿಜನ ಗಿರಿಜನ ಮತ್ತು ಅಲ್ಪಸಂಖ್ಯಾತರ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಯೆಂದು ಶ್ರೀವಿ.ಪಿ.ಸಿಂಗ್ ತಿಳಿಸಿದರು.

ಬೆಲೆ ಏರಿಕೆ ಸಮಸ್ಯೆಯ ಬಗ್ಗೆ ಪ್ರಸ್ತಾಪಿಸುತ್ತಾ ಹಿಂದಿನ ಕಾಂಗ್ರೆಸ್(ಐ) ಸರ್ಕಾರದ ಬಳುವಳಿಯಾಗಿ ಬಂದಿರುವ ವಿದೇಶಿ ಸಾಲದ ಹೊರೆಯಿಂದಾಗಿ ರಾಷ್ಟ್ರೀಯ ರಂಗ ಸರ್ಕಾರವು ಬಹಳ ಇಕ್ಕಟ್ಟಿನಲ್ಲಿ ಸಿಲುಕಿದೆಯೆಂದು ಪ್ರಧಾನಿ ಹೇಳಿದರು. ಚಹಾ, ತೈಲ ಇತ್ಯಾದಿ ಸರಕುಗಳನ್ನು ಆಮದು ಮಾಡಿದಲ್ಲಿ ಬೆಲೆಗಳು ಇಳಿಯಬಹುದಾದರೂ ವಿದೇಶಿ ವಿನಿಮಯದ ಕೊರತೆ ಇರುವಾಗ ಕಾದು ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಬಹುದು. ಸಾಲ ಮರುಪಾವತಿಗಾಗಿ ಹೊಸದಾಗಿ ಸಾಲ ಎತ್ತಬೇಕಾದ ಪರಿಸ್ಥಿತಿ ಬಂದೊದಗಿದ್ದು ರಫ್ತು ಆದಾಯದ ಶೇ 30 ರಿಂದ 40 ರಷ್ಟು ಸಾಲ ಮರುಪಾವತಿಗೆ ವಿನಿಯೋಗವಾಗುತ್ತಿದೆ. ಸಾಲ ಜಾಲದ ಅಪಾಯದ ಸಂಧಿಗ್ಧ ಪರಿಸ್ಥಿತಿಯನ್ನು ದೇಶವು ಎದುರಿಸುತ್ತಿದ್ದು ರಾಷ್ಟ್ರದ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ರಕ್ಷಿಸಲು ರಾಷ್ಟ್ರೀಯರಂಗ ಸರ್ಕಾರವು ಬದ್ಧವಾಗಿದೆ ಎಂದು ಶ್ರೀ ವಿ.ಪಿ.ಸಿಂಗ್ ತಿಳಿಸಿದರು. ಬೆಲೆ ಏರಿಕೆಯನ್ನು ನಿಯಂತ್ರಿಸಲು ಸರ್ಕಾರವು ಗಂಭೀರ ಪ್ರಯತ್ನ ನಡೆಸುತ್ತಿದ್ದು ಪ್ರದಾನ ಮಂತ್ರಿ ಕಚೇರಿಯಿಂದಲೇ ಇದರ ಬಗ್ಗೆ ಪರಾಮರ್ಶಿಸಲಾಗುತ್ತಿದೆ ಯೆಂದು ಸಹ ಅವರು ಹೇಳಿದರು.

ಕಾವೇರಿ ಜಲವಿವಾದದ ಬಗ್ಗೆ ಪ್ರಸ್ತಾಪಿಸುತ್ತಾ ಕರ್ನಾಟಕವು ಸೇರಿದಂತೆ ಸಂಬಂಧಪಟ್ಟ ಎಲ್ಲಾ ರಾಜ್ಯಗಳಿಗೂ ನ್ಯಾಯ ಸಮ್ಮತವಾದ ಪರಿಹಾರ ಒದಗಿಸುವುದಾಗಿ ಪ್ರಧಾನಿ ಭರವಸೆ ನೀಡಿದರು. ಬಳ್ಳಾರಿ ಜಿಲ್ಲೆಯ ಸಂಗನಕಲ್‌ನಲ್ಲಿ 135 ಹರಿಜನರ ಮನೆಗಳನ್ನು ಸುಟ್ಟುಹಾಕಿದ ಪ್ರಕರಣದ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸಿದ ಶ್ರೀ ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ 4 ಲಕ್ಷರೂ. ಪರಿಹಾರ ಬಿಡುಗಡೆ ಮಾಡುವುದಾಗಿ ಆಶ್ವಾಸನೆ ನೀಡಿದರು. ನಂತರ ಯೋಜನಾ ಆಯೋಗದ ಉಪಾಧ್ಯಾಕ್ಷ ಶ್ರೀರಾಮಕೃಷ್ಣ ಹೆಗಡೆಯವರು ಸಹ ಮಾತನಾಡಿದರು. ಪ್ರಾರಂಭದಲ್ಲಿ ಕರ್ನಾಟಕ ವಿಧಾನಸಭೆಯ ವಿರೋಧಪಕ್ಷದ ನಾಯಕರಾದ ಶ್ರೀ ಡಿ.ಬಿ. ಚಂದ್ರೇಗೌಡರು ಸ್ವಾಗತಿಸಿದರು.

ಖಾದ್ರಿ ಶಾಮಣ್ಣನವರ ನಿಧನಕ್ಕೆ ರಾಜ್ಯ ಕಾರ್ಯದರ್ಶಿ ಮಂಡಳಿ ಸಂತಾಪ

ಇದೇ ಮೇ 11 ರಂದು ತಮ್ಮ 65ನೇ ವಯಸ್ಸಿನಲ್ಲಿ ನಿಧನರಾದ 'ಕನ್ನಡ ಪ್ರಭ' ಸಂಪಾದಕರು ಹಾಗೂ ಕರ್ನಾಟಕ ರಾಜ್ಯ ವಿಧಾನ ಪರಿಷತ್ ಸದಸ್ಯರಾಗಿದ್ದ ಶ್ರೀ ಖಾದ್ರಿ ಶಾಮಣ್ಣನವರು ರಾಷ್ಟ್ರೀಯ ಸ್ವಾತಂತ್ರಕ್ಕಾಗಿ ಹೋರಾಡಿ, ಸಮಾಜವಾದಿ ಧೋರಣೆಗಳನ್ನು ಅಳವಡಿಸಿಕೊಂಡು ಪತ್ರಿಕೋದ್ಯಮದಲ್ಲಿ ಪ್ರಮುಖ ಪಾತ್ರವಹಿಸಿದ ಒಬ್ಬ ಮೇಧಾವಿ ಎಂದು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತನ್ನ ತೀವ್ರ ಸಂತಾಪ ಸೂಚಿಸುತ್ತಾ ಹೇಳಿದೆ.

ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರ ರಾವ್ ಹಾಗೂ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಕೆ. ಉಪಾಧ್ಯಾಯರು ದಿವಂಗತರ ಪಾರ್ಥೀವ ಶರೀರಕ್ಕೆ ಅಂತಿಮ ಗೌರವ ಸಲ್ಲಿಸಿ, ಅವರ ಕುಟುಂಬಕ್ಕೆ ತೀವ್ರ ಸಂತಾಪ ಸೂಚಿಸಿದರು.

ಜಿಲ್ಲಾ ಸಮಿತಿ ಸಂತಾಪ

ತಮ್ಮ ಮೊನಚಾದ ಲೇಖನಿಗಳ ಮೂಲಕ ಓದುಗರನ್ನು ವಿಚಾರ ಮಂಥನ ಕ್ಕೀಡು ಮಾಡುತ್ತಿದ್ದ ಖಾದ್ರಿಯವರ ನಿಧನ ಮುಖ್ಯವಾಗಿ ಕನ್ನಡ ಪತ್ರಿಕಾ ರಂಗಕ್ಕೆ ತುಂಬಲಾರದ ನಷ್ಟ ಎಂದು ಬೆಂಗಳೂರು ಜಿಲ್ಲಾ ಸಮಿತಿ ತನ್ನ ಸಂತಾಪ ವ್ಯಕ್ತಪಡಿಸಿದೆ.

ಪತ್ರಿಕಾ ರಂಗದಲ್ಲಿ ಮಾತ್ರವಲ್ಲದೆ ಪ್ರಜಾಪ್ರಭುತ್ವ ಪರ ರಾಜಕೀಯ ಚಟುವಟಿಕೆಗಳಲ್ಲಿ ನೇರವಾಗಿ ಪಾಲ್ಗೊಳ್ಳುವ ಮೂಲಕ ಖಾದ್ರಿಯವರು ರಾಜ್ಯದ ರಾಜಕೀಯದಲ್ಲಿ ತಮ್ಮ ಕೊಡುಗೆ ಸಲ್ಲಿಸಿದ್ದರು. ಮತೀಯವಾದಿ ಶಕ್ತಿಗಳನ್ನು ವಿರೋಧಿಸಿ ಜಾತ್ಯಾತೀತ ನಿಲುಮೆಗಳನ್ನು ಎತ್ತಿಹಿಡಿಯುತ್ತಿದ್ದ ಖಾದ್ರಿಯವರ ನಿಧನದಿಂದಾಗಿ ಕರ್ನಾಟಕದ ಪ್ರಗತಿಪರ ಪ್ರಜಾಸತ್ತಾತ್ಮಕ ಚಳುವಳಿಗೂ ತೀವ್ರನಷ್ಟವುಂಟಾಗಿದೆ ಎಂದು ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ಪರವಾಗಿ ಸಂತಾಪ ಹೇಳಿಕೆ ನೀಡಿರುವ ಜಿಲ್ಲಾ ಸೆಕ್ರೆಟಾರಿಯೇಟ್ ಸದಸ್ಯ ಕಾಂ। ಎಸ್.ಆರ್. ಆರಾಧ್ಯ ಹೇಳಿದ್ದಾರೆ.

ಡಿ.ವೈ.ಎಫ್.ಐ. ಸಂತಾಪ

ಸರಳ ಹಾಗೂ ತೀಕ್ಷ್ಣವಾದ ಸಂಪಾದಕೀಯಕ್ಕೆ ಹೆಸರುವಾಸಿಯಾಗಿದ್ದ ಹಿರಿಯ ಪತ್ರಿಕಾ ಸಂಪಾದಕರು ಎಂದು ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿ ತನ್ನ ಸಂತಾಪ ವ್ಯಕ್ತಪಡಿಸುತ್ತಾ ಶ್ರೀಯುತ ಖಾದ್ರಿ ಶಾಮಣ್ಣನವರ ಹಠಾತ್ ನಿಧನವು ಕನ್ನಡ ಪತ್ರಿಕಾರಂಗಕ್ಕೆ ಪತ್ರಿಕಾ ಓದುಗರಿಗೆ, ವಿಚಾರ ವಂತರಿಗೆ, ಪ್ರಜಾಪ್ರಭುತ್ವ ಚಳುವಳಿಗೆ ತುಂಬಲಾರದ ನಷ್ಟ ಎಂದಿದೆ.

ಎಸ್.ಎಫ್.ಐ. ಸಂತಾಪ

ಸ್ವಾತಂತ್ರ ಹೋರಾಟಗಾರ, ಧೀಮಂತ ಪತ್ರಕರ್ತ, ಸರ್ವಾಧಿಕಾರೀ ಪ್ರವೃತ್ತಿಯ ವಿರುದ್ಧ ಹೋರಾಟಗಾರರೊಬ್ಬರನ್ನು ಕಳ ಕೊಂಡಿದ್ದೇವೆ ಎಂದು ಎಸ್.ಎಫ್.ಐ. ರಾಜ್ಯಸಮಿತಿ ತನ್ನ ಸಂತಾಪ ವ್ಯಕ್ತಪಡಿಸಿದೆ.

ಕೃಷಿ ಶಿಕ್ಷಣ ನೀತಿಯ ಆಮೂಲಾಗ್ರ ಪುನರ್ರಚನೆ

ಅಖಿಲ ಭಾರತ ಸಮಾವೇಶದ ಕರೆ

ಶಿಕ್ಷಣರಂಗದಲ್ಲಿ, ನಿರ್ದಿಷ್ಟವಾಗಿ ಕೃಷಿ ಶಿಕ್ಷಣದಲ್ಲಿ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪ ಅಳವಾಗುತ್ತಿದ್ದು ಅವರ ಹಿತಾಸಕ್ತಿಗಳಿಗನುಗುಣವಾಗಿ ರೂಪಿಸಲಾಗಿದೆ. ದೇಶದ ಜನತೆಯ ಸ್ವಾವಲಂಬೀ ಬದುಕನ್ನು ಕಾಯುವ ಸಲುವಾಗಿ ಸಾಮೂಹಿಕ ಆಂದೋಲನ ಬೆಳೆದು ಬರಬೇಕು. ಸ್ವತಂತ್ರ ಭಾರತದಲ್ಲಿ ಕೃಷಿ ಅಭಿವೃದ್ಧಿಯಾಗಿದೆ ನಿಜ. ಇನ್ನೊಂದೆಡೆ ಹಸಿವು, ಹಾಹಾಕಾರ ದಾರಿದ್ರ್ಯದಿಂದ ತುಂಬಿರುವ ಮಿಲಿಯಾಂತರ ಜನತೆಯನ್ನು ಕಾಣುತ್ತೇವೆ. ಈ ವಾಸ್ತವತೆಯನ್ನು ಅರಿಯಬೇಕು ಎಂದು ಸಿ.ಪಿ.ಐ.(ಎಂ) ಕೇಂದ್ರ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಸೀತಾರಾಮ ಯೆಚೂರಿ ಹಿಸ್ಸಾರ್‌ನಲ್ಲಿ ತಿಳಿಸಿದರು.

ಎಸ್.ಎಫ್.ಐ.ನ. ಹಿಂದಿನ ಅಖಿಲ ಭಾರತ ಅಧ್ಯಕ್ಷರೂ ಆಗಿರುವ ಅವರು ಮೇ ೫ರಂದು ಹರಿಯಾಣದ ಹಿಸ್ಸಾರ್‌ನಲ್ಲಿ ಕೃಷಿ ವಿದ್ಯಾರ್ಥಿಗಳ ಅಖಿಲ ಭಾರತ ಸಮಾವೇಶವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು. ದೇಶದಲ್ಲೇ ಪ್ರಥಮವಾದ ಈ ಸಮಾವೇಶವನ್ನು ಎಸ್.ಎಫ್.ಐ. ಕೇಂದ್ರ ಕಾರ್ಯಕಾರಿ ಸಮಿತಿ ಸಂಘಟಿಸಿತ್ತು. ಹಿಂದೆ ಅರಾಜಕತೆಯ ತವರಾಗಿದ್ದು ಕಳೆದ ಐದಾರು ವರ್ಷಗಳಿಂದ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಗೆ ಹೊಸ ತಿರುವು ನೀಡಿರುವ ಹಿಸ್ಸಾರ್‌ನಲ್ಲಿ ನಡೆದ ಎರಡು ದಿನಗಳ ಸಮಾವೇಶ ಯಶಸ್ವಿಯಾಗಿ ನೆರವೇರಿದೆ.

ಸಮಾವೇಶಕ್ಕೆ ಮೂರು ಮುಖ್ಯ ಘೋಷಣೆಗಳನ್ನು ಕೊಡಲಾಗಿತ್ತು. ಕೃಷಿ ಶಿಕ್ಷಣ ನೀತಿಯ ಪ್ರಜಾಸತ್ತಾತ್ಮಕ ಆಮೂಲಾಗ್ರ ಪುನರ್ರಚನೆ, ಉದ್ಯೋಗದ ಗಳಿಕೆಗಾಗಿ ಹಾಗೂ ಜನಸಮೂಹ ಆಧಾರಿತ ಕೃಷಿ ನೀತಿ ಇವು ಮೂರು ಈ ಸಮಾವೇಶದ ಮುಖ್ಯ ಘೋಷಣೆಗಳಾಗಿದ್ದವು.

ಕೇಂದ್ರ ಕಾರ್ಯಕಾರಿ ಸಮಿತಿಯ ವತಿಯಿಂದ ಮಂಡಿಸಿದ್ದ ಕರಡು ವರದಿ ಭಾರತದಲ್ಲಿ ಕೃಷಿಯ ಸ್ಥಾನಮಾನ, ಕೃಷಿ ರಂಗದಲ್ಲಿ ಭೂಸಂಬಂಧಗಳ ನಿರ್ಣಾಯಕ ಪಾತ್ರದ ಬಗ್ಗೆ ಚರ್ಚಿಸಿತು. ಜತೆಗೆ ಕೃಷಿ ಶಿಕ್ಷಣ ಮತ್ತು ಕೃಷಿರಂಗದ ವಾಸ್ತವಿಕತೆಯ ನಡುವಿನ ಕಳಚಿಕೊಂಡ ಸಂಬಂಧಗಳ ಮಧ್ಯೆ ಕೃಷಿ ಪಧವೀಧರರು ಕೆಲಸ ಮಾಡುವಾಗ ಎದುರಾಗುವ ಸಮಸ್ಯೆಗಳನ್ನು ಚರ್ಚಿಸಿತು.

ಚರ್ಚೆಯಲ್ಲಿ ಕರ್ನಾಟಕದ ಪರವಾಗಿ ಕೃಷಿ ವಿದ್ಯಾರ್ಥಿ ಗೋಪಿಕೃಷ್ಣ ಮತ್ತು ಜಿ.ಸಿ. ಬಯ್ಯಾರೆಡ್ಡಿ ಮಾತನಾಡಿದರು.

ಸಮಾರೋಪ ಭಾಷಣ ಮಾಡಿದ ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ನಿಲೋತ್ಪಲ ಬಸುರವರು ಕೃಷಿ ವಿದ್ಯಾರ್ಥಿಗಳ ಚಳುವಳಿಯನ್ನು ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಯೊಂದಿಗೆ ಬೆಳೆಸುವ ಅಗತ್ಯದ ಬಗ್ಗೆ ಒತ್ತಿ ಹೇಳಿದರು.

ಸಮಾವೇಶ ವರದಿಯ ಅಂಶಗಳನ್ನು ಕೃಷಿ ವಿದ್ಯಾರ್ಥಿಗಳ ನಡುವೆ ಜನಪ್ರಿಯಗೊಳಿಸುವುದು, ರಾಜ್ಯಮಟ್ಟದಲ್ಲಿ ಹಾಗೂ ಕೆಳಗಿನ ಹಂತಗಳಲ್ಲಿ ಸಮಾವೇಶದ ಸಂಘಟನೆ ಹಾಗೂ ಜೂನ್ 18 ರಿಂದ ಕೃಷಿ ವಿದ್ಯಾರ್ಥಿಗಳ ಬೇಡಿಕೆಗಳ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಮಾವೇಶ ಕರೆ ನೀಡಿತು.

ಜ್ಯೋತಿ ಬಸು ಹಾನ್ಯೋ ಭೇಟಿ

ಪಶ್ಚಿಮ ಬಂಗಾಳ ಮುಖ್ಯ ಮಂತ್ರಿ ಜ್ಯೋತಿಬಸುರವರು ಹೊಚಿಮಿನ್ಹ್‌ರವರ ಜನ್ಮ ಶತಾಬ್ಧಿ ಸಮಾರಂಭಗಳಲ್ಲಿ ಭಾಗವಹಿಸಲು ಮೇ 15 ರಂದು ವಿಯೆಟ್ನಾಂ ರಾಜಧಾನಿ ಹಾನೋಯ್‌ಗೆ ತೆರಳಿದರು. ಅವರು ಸಮಾರಂಭದಲ್ಲಿ ಭಾರತೀಯ ನಿಯೋಗದ ಮುಖಂಡರಾಗಿದ್ದಾರೆ.

ಸಿ.ಪಿ.ಎಸ್.ಯು. ಬಹಿರಂಗ ಪತ್ರ

ಪುಟ 5ರಿಂದ

ಅಭಿಪ್ರಾಯಗಳನ್ನು ವ್ಯಕ್ತಪಡಿಸುವ, ಸಮರ್ಥಿಸಿಕೊಳ್ಳುವ, ಜ್ಯಾರಿಗೊಳಿಸುವ ಹಕ್ಕು ಇದೆ. ಸಿ.ಪಿ.ಎಸ್.ಯು. ವೇದಿಕೆ ಮತ್ತು ನಿಯಮಗಳು ಯಾವುದೇ ತಿದ್ದುಪಡಿ, ಪ್ರಸ್ತಾಪಗಳಿಗೆ ತೆರೆದಿವೆ.

ಸಮಾಜವಾದೀ ಆಯ್ಕೆಯ ಚೌಕಟ್ಟಿನೊಳಗೆ ವಿವಿಧ ಅಭಿಪ್ರಾಯಗಳ ಸಂಯೋಜನೆಯ ಮೂಲಕ ಮಾತ್ರವೇ ನಮ್ಮ ಪಕ್ಷದ ಭವಿಷ್ಯವನ್ನು ನಿರ್ಧರಿಸುವ ಕಮ್ಯುನಿಸ್ಟರ ಒಂದು ಸಮಗ್ರ ವೇದಿಕೆಯನ್ನು ಸೃಷ್ಟಿಸಲು ಸಾಧ್ಯ.

ಮಹಾಧಿವೇಶನದ ಮುನ್ನದ ಚರ್ಚೆಯನ್ನು ತೀವ್ರಗೊಳಿಸುತ್ತಾ ಅದರಲ್ಲಿ ವಿವಿಧ ನಿಲುವುಗಳನ್ನು, ರಚನಾತ್ಮಕ ವಿಚಾರಗಳನ್ನು ಧೈರ್ಯದಿಂದ ಹೋಲಿಸಿ ನೋಡುವುದರ ಜೊತೆಗೇ ಸೈದ್ಧಾಂತಿಕ ಚಂಚಲತೆ, ಅನೀತಿಯುತ ಸೈದ್ಧಾಂತಿಕತೆಗೆ ಯಾವುದೇ ರಿಯಾಯ್ತಿ ದೊರೆಯದಂತೆ ತಡೆಯುವುದರ ಅಗತ್ಯದತ್ತ ಕೇಂದ್ರ ಸಮಿತಿ ಪಕ್ಷದ ಎಲ್ಲಾ ಸಂಘಟನೆಗಳ ಗಮನ ಸೆಳೆಯ ಬಯಸುತ್ತದೆ.

ಪಕ್ಷವನ್ನು ಒಡೆಯಲು, ಸಿ.ಪಿ.ಎಸ್.ಯು. ಒಳಗೇ ಗುಂಪುಗಳನ್ನು ಸಕ್ರಮಗೊಳಿಸಲು ನಿರಂತರ, ಉದ್ದೇಶ ಪೂರ್ಣ ಪ್ರಯತ್ನ ನಡೆಸುತ್ತಿರುವ, ಸೋವಿಯತ್ ಜನತೆಯ 'ಸಮಾಜವಾದಿ ಆಯ್ಕೆಯನ್ನು ನಿರಾಕರಿಸುತ್ತಿರುವ, ತಮ್ಮ ಮಾತು, ಕೃತಿಗಳ ಮೂಲಕ ತಮ್ಮನ್ನ ಪಕ್ಷದ ಹೊರಗಿಟ್ಟುಕೊಳ್ಳುತ್ತಿರುವ ಪಕ್ಷದ ಸದಸ್ಯರನ್ನು ಏನು ಮಾಡಬೇಕು ಎಂಬ ಬಗ್ಗೆ ಸ್ಪಷ್ಟ ವಿಚಾರ ತಳೆಯುವ ಸಮಯವೀಗ ಬಂದಿದೆ. ಇಂತಹ ಜನ ಪಕ್ಷದ ಸದಸ್ಯರಾಗಿಯೇ ಮುಂದುವರೆಯುವುದು ಹೇಗೆಸಾಧ್ಯ?

ಎಲ್ಲಾ ಕಮ್ಯುನಿಸ್ಟರು, ಪಕ್ಷದ ಸಂಘಟನೆಗಳು, ಸಮಿತಿಗಳು ಇದನ್ನು ನಿರ್ಣಯಿಸಬೇಕು.

ಕ್ರಾಂತಿಕಾರಿತ್ವದ ಸೋಗು ಹಾಕಿದ ಘೋಷಣೆಗಳಿಂದ ದಾರಿತಪ್ಪಿದ, ಸಮಾಜದಲ್ಲಿನ ಪ್ರಕ್ರಿಯೆಗಳ ಸರಿಯಾದ ವಿಶ್ಲೇಷಣೆ ಮಾಡಲು ವಿಫಲರಾದ ಕಮ್ಯುನಿಸ್ಟರ ನಡುವೆ ಪಕ್ಷದ ನಿಲುವು ಹೇಗೆ ಸರಿಯೆಂಬುದನ್ನು ವಿವರಿಸುವ ಕೆಲಸ ನಡೆಯಬೇಕು.

೨೮ನೇ ಮಹಾಧಿವೇಶನಕ್ಕೆ ಮನವರಿಕೆ ಹೊಂದಿದ ಕಮ್ಯುನಿಸ್ಟರು, ಸೃಜನ ಶೀಲ ಹಾಗೂ ನೈತಿಕ ಗಟ್ಟಿತನಕ್ಕೆ ಹೆಸರಾದ, ಪಕ್ಷಕ್ಕೆ ತಮ್ಮ ಜನತೆಗೆ, ನಮ್ಮ ಸಮಾಜವಾದಿ ಮಾತೃಭೂಮಿಗೆ, ಸಮಾಜದ ಕ್ರಾಂತಿಕಾರಿ ನವೀಕರಣಕ್ಕೆ ಜವಾಬ್ದಾರಿಯ ಭಾವನೆಯಿರುವ ವ್ಯಕ್ತಿಗಳು ಪ್ರತಿನಿಧಿಗಳಾಗುವುದು ಬಹಳ ಮುಖ್ಯ.

ಈ ವಾರ...

★ ಕಾಂಗ್ರೆಸ್(ಐ) ನಲ್ಲಿ ಹತಾಶೆ ಹೆಚ್ಚುತ್ತಿದ್ದಂತೆ ಆಳುವ ಜನತಾದಳ (ಉತ್ತರ ಪ್ರದೇಶದಲ್ಲಿ) ಮತ್ತು ಬಿ.ಜೆ.ಪಿ. ದೂರ ಸರಿಯುತ್ತಿವೆ.... ಈಗಷ್ಟೇ ಮುಗಿದಿರುವ ಪದವೀಧರ ಕ್ಷೇತ್ರದಲ್ಲಿ ಜನತಾದಳವಾಗಲಿ, ಬಿ.ಜೆ.ಪಿ. ಯಾಗಲಿ ಸೀಟು ಹೊಂದಾಣಿಕೆಯಲ್ಲಿ ಪರಸ್ಪರದ ಹಾಲೀ ಸದಸ್ಯರಿಗೆ ಏನೂ ರಿಯಾಯ್ತಿ ತೋರಿಲ್ಲ. ಸ್ಥಳೀಯ ಸಭೆಗಳ ಕ್ಷೇತ್ರದಲ್ಲಿ 39 ರಲ್ಲಿ 30 ಕಡೆ ಜನತಾದಳಕ್ಕೆ ಬಿ.ಜೆ.ಪಿ. ಪ್ರತಿಸ್ಪರ್ಧಿಯಾಗಿದೆ.

– ಇಂಡಿಯನ್ ಎಕ್ಸ್‌ಪ್ರೆಸ್, ಮೇ 11)

★ (ಎಡ ಪಕ್ಷಗಳು ಸಂಘಟಿಸಲಿರುವ) ಕೋಮುವಾದಿ ವಿರೋಧಿ ಸಮಾವೇಶದ್ದು ದ್ವಿಮುಖ ಉದ್ದೇಶ.. ಮೊದಲ ಮತ್ತು ಸ್ವಯಂವೇದ್ಯವಾದ ಉದ್ದೇಶ ಕೋಮುವಾದದ ಅಪಾಯದ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸುವುದು.

– ಡೆಕ್ಕನ್ ಹೆರಾಲ್ಡ್, ಮೇ 12

★ ಕೇಂದ್ರ ಸರ್ಕಾರ 370ನೇ ಕಲಮನ್ನು ಉಳಿಸಿಕೊಳ್ಳಲು ಬದ್ಧವಾಗಿದೆ. ಕಾಶ್ಮೀರ ಕಾಶ್ಮೀರಿಗಳದ್ದು. ಈ ಕಲಮನ್ನು ರದ್ದು ಮಾಡುವುದರಿಂದ ಸಮಸ್ಯೆ ಪರಿಹಾರವಾಗುವುದಕ್ಕಿಂತ ಸಮಸ್ಯೆಗಳ ಸೃಷ್ಟಿಯೇ ಆಗುತ್ತದೆ.

– ಐ.ಕೆ. ಗುಜ್ರಾಲ್, ವಿದೇಶಾಂಗ ಮಂತ್ರಿ, ಮೇ 13

★ ವಿಶೇಷ ಸ್ಥಾನಮಾನ ಮತ್ತು ಕಾಶ್ಮೀರಿ ಉಪ ರಾಷ್ಟ್ರೀಯತೆಗೆ ಮಾನ್ಯತೆಯ ಪ್ರಶ್ನೆಯನ್ನು ಒಂದು ವಿಕೃತಿಯಾಗಿ ಕಾಣಲಾಗುತ್ತಿದೆ. ೧೯೫೭ರಿಂದ ಹೆಚ್ಚುತ್ತಿರುವ ಕೇಂದ್ರೀಕರಣವೇ ಇದಕ್ಕೆ ಕಾರಣ. ಒಂದೊಂದಾಗಿ ೩೭೦ನೇ ಕಲಮಿನ ಅಂಶಗಳನ್ನು ನಿರ್ಬಲಗೊಳಿಸಬೇಕಾಗಿ ಏಕೆ ಬಂತು, ಈಗ ಏಕೆ ಇದಕ್ಕೆ ಪ್ರತಿಕ್ರಿಯೆ ಕಾಣಬರುತ್ತದೆ ಎಂಬುದನ್ನು ಇದು ವಿವರಿಸುತ್ತದೆ... ಈ ಪ್ರಶ್ನೆಯನ್ನು ಕಾಶ್ಮೀರದ ದೃಷ್ಟಿಯಿಂದ ಮಾತ್ರವಲ್ಲ, ಹೆಚ್ಚಿನ ಅಧಿಕಾರ ಕೇಳುತ್ತಿರುವ ಇತರರ ದೃಷ್ಟಿಯಿಂದಲೂ ಕೇಂದ್ರ ರಾಜ್ಯ ಸಂಬಂಧಗಳ ನಿಟ್ಟಿನಿಂದ ಕಾಣಬೇಕು.

– ಟೈಂಸ್ ಆಫ್ ಇಂಡಿಯಾ, ಮೇ 14

★ ಅಫಘಾನಿಸ್ತಾನದಲ್ಲಿ ಸೋವಿಯತ್ ಪ್ರಭಾವ ಕುಗ್ಗಿಸಲು ತಮ್ಮೊಡನೆ ಸಹಕರಿಸುತ್ತಿರುವ ಕೆಲವು ಅಫಘಾನ್ ಗೆರಿಲ್ಲಾಗಳು ಹಾಗೂ ಪಾಕಿಸ್ತಾನೀ ಮಿಲಿಟರಿ ಅಧಿಕಾರಿಗಳು ಹೆರೋಯಿನ್ ಮುಂತಾದ ಮಾದಕ ದ್ರವ್ಯಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ್ದಾರೆಂಬ ವರದಿ ಅಮೆರಿಕನ್ ಸರಕಾರಕ್ಕೆ ಹಲವು ವರ್ಷಗಳಿಂದ ಗೊತ್ತಿದೆ. ಆದರೂ ಆ ಬಗ್ಗೆ ತನಿಖೆ ನಡೆಸಲು ಅದು ನಿರಾಕರಿಸುತ್ತಾ ಬಂದಿದೆ ಎಂದು 'ವಾಶಿಂಗ್ಟನ್ ಪೋಸ್ಟ್' ತಿಳಿಸಿದೆ.

– ಯು.ಎನ್.ಐ. ಸುದ್ದಿ, ಮೇ 14

★ ಐ.ಎಂ.ಎಫ್. ಸಾಲಗಳಿಗೆ ಹಾಕುವ ಶರತ್ತುಗಳು ಅಮೆರಿಕಾದ ಇತ್ತೀಚಿನ ನಿಲುವುಗಳಿಂದಾಗಿ ಇನ್ನೂ ಕಠಿಣಗೊಳ್ಳುತ್ತಿವೆ. ಏನೇ ಆಗಲಿ, ಐ.ಎಂ.ಎಫ್. ಸಾಲ ಹಾಕುವ ಬಡ್ಡಿ ಮತ್ತು ಮರುಪಾವತಿ ವಿಧಾನದ ದೃಷ್ಟಿಯಿಂದ ಅಗ್ಗದ್ದೇನೂ ಅಲ್ಲ.

– ಇಕನಾಮಿಕ್ ಟೈಮ್ಸ್, ಮೇ 15

ಅಲಿಪ್ತ ಆಂದೋಲನ ಶ್ರೀಮಂತ ದೇಶಗಳ ಬೆದರಿಕೆ ತಂತ್ರಗಳ ವಿರುದ್ಧ ಗುರಾಣಿಯಂತೆ ನೆರವಾಗಿದೆ... ಅದನ್ನು ಅದರ ಪಾತ್ರವನ್ನು ಹೀಗೆಳೆಯುವ ಎಷ್ಟೇ ಪ್ರಯತ್ನ ನಡೆದಿದ್ದರೂ, ಅಲಿಪ್ತ ಆಂದೋಲನ ಒಂದು ಪ್ರಯೋಜನಕಾರಿ ಪಾತ್ರವಹಿಸಿದ ಗುಂಪು ಎಂಬ ಮಾನ್ಯತೆ ಪಡೆದಿದೆ.

– ಇಕನಾಮಿಕ್ ಟೈಮ್ಸ್, ಮೇ 15

Printed and published by P.Ramachandra Rao on behalf of Communist party of India (Marxist), Karnataka State Committee ... K.V.Temple Street, Sultanpet, Ba... - 560 053. Phone No. 75331. Editor: P.RAMACHAND...